# ಯುಗರಶ್ಮಿ


★ ಲೋಕವು ವಿನಾಶದಿಂದ ರಕ್ಷಿಸಲ್ಪಡಲಿ

★ ಧರ್ಮ—ಇಂದು

★ ಖುರ್‌ಆನ್ ಮತ್ತು ಪ್ರಪಂಚ

★ ಡಾ। ಸಲಾಂ—ಭಾರತೀಯ ವಿಜ್ಞಾನಿಗಳ ದೃಷ್ಟಿಯಲ್ಲಿ

★ 'ಸನ್ಮಾರ್ಗ'ದ ಕುಟಿಲತೆ

★ ವ್ರತಾನುಷ್ಠಾನ ಏಕೆ?

★ ಇಸ್ಲಾಂ ಮತ ತತ್ವ ಜ್ಞಾನ



ತ್ರೈಮಾಸಿಕ

ಜೂನ್-ಜುಲೈ

1980

ಬೆಲೆ: ರೂ. 1-00


ನೀವು ಮಾತನಾಡುವಾಗ ನೀತಿಯನ್ನು ಪಾಲಿಸಿರಿ; ಅದು (ನಿಮ್ಮ) ಸಮೀಪದ ಬಂಧುವನ್ನು ಬಾಧಿಸುವುದಾದರೂ ಸರಿ.

—ಪವಿತ್ರ ಖುರ್‌ಆನ್ (6:153)

# ಯುಗರಶ್ಮಿ ತ್ರೈಮಾಸಿಕ

10-23-1008, ಅನ್ಸಾರಿ ರೋಡ್, ಬಂದರ್, ಮಂಗಳೂರು-575 001.

ಸಂಪುಟ: 6 ಜೂನ್-ಜುಲಾಯಿ 1980/ಇಹ್‌ಸಾನ್-ವಫಾ 1359 ಸಂಚಿಕೆ: 1

ಸಂಪಾದಕ: ಮುಹಮ್ಮದ್ ಯೂಸುಫ್

ಬಿಡಿಪ್ರತಿ: ಒಂದು ರೂಪಾಯಿ ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು


**ವಿಷಯ ಸೂಚಿಕೆ:** ಪುಟ


* ಯುಗರಶ್ಮಿಯ ಆರನೇ ವಯಸ್ಸು ... 1
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... 2
* ದೈವ – ಒಂದು ಅನರ್ಘ್ಯ ನಿಧಿ ... 2
* ಲೋಕವು ವಿನಾಶದಿಂದ ರಕ್ಷಿಸಲ್ಪಡಲಿ ... 3
* ಧರ್ಮ – ಇಂದು ... 5
* ಖುರ್‌ಆನ್ ಮತ್ತು ಪ್ರಪಂಚ ... 8
* ನೊಬೆಲ್ ಪ್ರಶಸ್ತಿ ವಿಜೇತ ಡಾಕ್ಟರ್ ಸಲಾಮ್–ಭಾರತೀಯ ವಿಜ್ಞಾನಿಗಳ ದೃಷ್ಟಿಯಲ್ಲಿ ... 13
* 'ಸನ್ಮಾರ್ಗ'ದ ಕುಟಿಲತೆ ... 14
* ವ್ರತಾನುಷ್ಠಾನ ಏಕೆ ... 20
* ಅಹ್ಮದಿಯಾ ವಾರ್ತೆಗಳು ... 21
* ಸಂಪಾದಕರಿಗೆ ಪತ್ರ ... 24
* ಪುಸ್ತಕ ವಿಭಾಗ–ಇಸ್ಲಾಂ ಮತ ತತ್ತ್ವಜ್ಞಾನ



ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

## ಮೈತ್ರಿ ಸಂದೇಶ

"......ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ.

"......ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ.

ಪುಟಗಳು: 48 ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ



ಬರೆಯಿರಿ: The Editor, YUGARASHMI, Kannada Quarterly,
23/1008, Ansari Road, Bunder, Mangalore-575 001.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪುಟ: 6 | ಜೂನ್ 1980 / ಇಹ್‌ಸಾನ್ 1359 | ಸಂಚಿಕೆ: 1

## ★ ಯುಗರಶ್ಮಿಯ ಆರನೇ ವಯಸ್ಸು ★

ಇದೀಗ "ಯುಗರಶ್ಮಿ" ತನ್ನ ಆರನೆಯ ವಯಸ್ಸಿಗೆ ಪದಾರ್ಪಣ ಮಾಡಿದೆ. ಈ ಶುಭ ಮುಹೂರ್ತದಲ್ಲಿ ನಾವು ಜಗನ್ನಿಯಾಮಕನಾದ ದೇವನನ್ನು ಸ್ಮರಿಸುತ್ತೇವೆ; ಹಾಗೂ ನಮ್ಮ ಹಿತೈಷಿಗಳಿಗೂ ಓದುಗರಿಗೂ ಶುಭಾಶಂಸನೆಗಳನ್ನು ಬಯಸುತ್ತೇವೆ.

"ಇಸ್ಲಾಂ" ಎಂಬ ಹೆಸರು ಕೇಳುತ್ತಲೇ ಜನರು ಬೆಚ್ಚಿಬೀಳುತ್ತಾರೆ; ಇನ್ನು ಕೆಲವರಿಗೆ ತಾತ್ಸಾರ ಭಾವನೆ! ಇಸ್ಲಾಮಿನ ಹೆಸರನ್ನು ಹಾಳುಗೆಡಹುವ ಕಾರ್ಯದಲ್ಲಿ ಪಾಶ್ಚಾತ್ಯರೂ ಚರಿತ್ರೆಗಾರರೂ ಮುಸ್ಲಿಮರೆಂದು ಹೇಳಿಕೊಳ್ಳುವವರೂ ಪ್ರಧಾನ ಪಾತ್ರವಹಿಸಿದ್ದಾರೆ. ಅವರು ಹೇಳಿದ್ದನ್ನು ಕೇಳಿದ, ಅವರು ಬರೆದದ್ದನ್ನು ಓದಿದ, ಅವರು ಮಾಡಿದ್ದನ್ನು ನೋಡಿದ ಜನರು ಅದನ್ನೇ "ಇಸ್ಲಾಂ" ಎಂದು ತಿಳಿದುಕೊಂಡಿದ್ದಾರೆ—ಅಷ್ಟೇ.

ಆದರೆ ಇಸ್ಲಾಂ ಧರ್ಮವು ಅವರ ಹೇಳಿಕೆ, ಬರಹ ಮತ್ತು ವರ್ತನೆಗಳಿಂದ ಭಿನ್ನವಾದುದಾಗಿದೆ. ಇಸ್ಲಾಂ ಕ್ರೂರ ಧರ್ಮವಲ್ಲ; ಅದು ಶಾಂತಿ ಧರ್ಮ. ಇಸ್ಲಾಂ ಶತ್ರುತ್ವವನ್ನು ಬೆಳೆಸುವುದಿಲ್ಲ; ಸಹೋದರತೆಯನ್ನು ಪೋಷಿಸುತ್ತದೆ. ಇಸ್ಲಾಂ, ಧರ್ಮವನ್ನು ಬಲಾತ್ಕಾರದಿಂದ ಹೇರುವುದಿಲ್ಲ; ಮತ ಸ್ವಾತಂತ್ರ್ಯವನ್ನು ನೀಡುತ್ತದೆ. ಇದನ್ನೇ ಸಾರಲಿಕ್ಕಾಗಿ ಅಹ್ಮದಿಯಾ ಸಂಘಟನೆ ಹುಟ್ಟಿಕೊಂಡಿದೆ.

ಅಹ್ಮದಿಯಾ ಸಂಘಟನೆಯು 1889ನೇ ಇಸವಿಯಲ್ಲಿ ಸ್ಥಾಪಿತವಾಯಿತು. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರು ಅದರ ಸಂಸ್ಥಾಪಕರಾಗಿದ್ದಾರೆ. ಭಾರತದ ಪಂಜಾಬ್ ಪ್ರಾಂತ್ಯದ ಖಾದಿಯಾನ್ ಎಂಬ ಗ್ರಾಮದಲ್ಲಿ 1835ನೇ ಇಸವಿಯಲ್ಲಿ ಅವರು ಜನ್ಮತಾಳಿದರು. ಒಂದು ಕೋಟಿಗಿಂತ ಮಿಕ್ಕಿದ ಜನಸಂಖ್ಯೆ ಇರುವ ಈ ಸಂಘಟನೆ ಲೋಕಾದ್ಯಂತ ಪ್ರಚಾರ ಕೇಂದ್ರಗಳನ್ನು ಸ್ಥಾಪಿಸಿ ಯಥಾರ್ಥ ಇಸ್ಲಾಂ ಧರ್ಮದ ಸಂದೇಶವನ್ನು ಬೀರುತ್ತದೆ. ಈ ಸಂಘಟನೆಯ ಮೂಲಕ ಅಸಂಖ್ಯಾತ ಜನರು ನೈಜ ಇಸ್ಲಾಂ ಧರ್ಮವೇನೆಂದು ತಿಳಿದುಕೊಂಡು ತಮ್ಮ ತಪ್ಪಾಭಿಪ್ರಾಯಗಳನ್ನು ತಿದ್ದಿಕೊಂಡಿದ್ದಾರೆ. ಇಸ್ಲಾಮಿನ ನಿಜಸ್ವರೂಪವನ್ನು ತಿಳಿಯಬಯಸುವ ಕರ್ನಾಟಕದ ಜನತೆಯನ್ನು, ಅವರು ಅಹ್ಮದಿಯಾ ಸಾಹಿತ್ಯಗಳನ್ನೂ ನಿಯತಕಾಲಿಕಗಳನ್ನೂ ಅಧ್ಯಯನ ಮಾಡುವರೆ ನಾವು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇವೆ.

—ಸಂಪಾದಕ.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ಸಹತಾಪದಲ್ಲೂ ಪ್ರೀತಿಯಲ್ಲೂ ದಯೆಯಲ್ಲೂ ಸತ್ಯವಿಶ್ವಾಸಿಗಳು ಒಂದೇ ಶರೀರದ ಅವಯವಗಳಂತೆ; ಒಂದು ಅಂಗಕ್ಕೆ ರೋಗ ಭಾಧಿಸಿದರೆ ದೇಹವಿಡೀ ಜ್ವರಕ್ಕೆ ಗುರಿಯಾಗಿ ನೋವನ್ನನುಭವಿಸುತ್ತದೆ.

2. ತನ್ನ ಸ್ನೇಹಿತನೊಡನೆ ಅತ್ಯಂತ ಉತ್ತಮ ರೀತಿಯಲ್ಲಿ ವರ್ತಿಸುವವನು ಅಲ್ಲಾಹುವಿನ ದೃಷ್ಟಿಯಲ್ಲಿ ಅತ್ಯುತ್ತಮ ಸ್ನೇಹಿತ.

3. ಅಭಿಮುಖವಾಗಿ ಇಬ್ಬರು ಸ್ತ್ರೀಯರು ನಡೆದು ಬರುವಾಗ ಅವರ ಮಧ್ಯದಿಂದ ದಾಟಬೇಡಿರಿ. ಎಡಕ್ಕೋ ಬಲಕ್ಕೋ ಸರಿದು ನಡೆಯಿರಿ.

4. ತನ್ನ ಪತ್ನಿಯೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸುವವನು ನಿಮ್ಮ ಪೈಕಿ ಅತ್ಯುತ್ತಮನು.

5. ಮಾತಾಪಿತರೊಡನೆ ಉದಾರವಾಗಿ ವರ್ತಿಸಿರಿ. ಹಾಗೆಯೇ ನಿಮ್ಮ ಮಕ್ಕಳು ಸಹ ನಿಮ್ಮೊಡನೆ ಉದಾರವಾಗಿ ವರ್ತಿಸುವರು.

6. ಸ್ವರ್ಗ ಮಾತೆಯ ಪಾದದಡಿಯಲ್ಲಿದೆ.

7. ಮಕ್ಕಳಿಲ್ಲದ ಮನೆ ಅನುಗ್ರಹ ಶೂನ್ಯ.

8. ಮಕ್ಕಳನ್ನು ಆದರಿಸಿರಿ; ಅವರಿಗೆ ಉತ್ತಮ ತರಬೇತಿ ನೀಡಿರಿ.

9. ನಿಮ್ಮ ಅತಿಥಿಗಳನ್ನು ಗೌರವಿಸಿರಿ.

10. ಬೀಳ್ಕೊಳ್ಳುವ ಅತಿಥಿಯ ಜೊತೆಯಲ್ಲಿ ಹೊರಬಾಗಿಲ ತನಕ ಹೋಗುವುದು ಉತ್ತಮ ನಡತೆಯಾಗಿದೆ.

11. ಬಡವರ ಜೊತೆಗೂಡಿ ಅವರನ್ನು ಪ್ರೀತಿಸಿರಿ.

12. ನೀಡಿದ ರೀತಿಯಲ್ಲೇ ನೀವು ಪಡೆಯುವಿರಿ.

(ಸರ್ ಮುಹಮ್ಮದ್ ಝುಫರುಲ್ಲಾ ಖಾನರ **Wisdom of the Holy Prophet Muhammad** ಎಂಬ ಪುಸ್ತಕದಿಂದ ಆಯ್ದುದು)

---

## ★ ದೈವ—ಒಂದು ಅನರ್ಘ್ಯ ನಿಧಿ ★

"ನೀವು ಯಥಾರ್ಥದಲ್ಲಿ ದೇವನಿಗೆ ವಿಧೇಯರಾಗಿದ್ದುಕೊಂಡರೆ ಅವನು ನಿಮ್ಮ ಸಹಾಯಕ್ಕೆ ಇದ್ದಾನೆಂದು ಚೆನ್ನಾಗಿ ತಿಳಿದುಕೊಳ್ಳಿರಿ. ನೀವು ನಿದ್ರಿಸುತ್ತಿರುವಾಗ ಅವನು ನಿಮ್ಮನ್ನು ಕಾಯುವನು. ನೀವು ನಿಮ್ಮ ಶತ್ರುವಿನ ಬಗ್ಗೆ ಅಜಾಗರೂಕರಾಗಿರುವಾಗ, ಅವನು ಆ ಶತ್ರುವಿನ ಮೇಲೆ ಕಣ್ಣಿಟ್ಟು ಅವನ ಕುತಂತ್ರಗಳನ್ನು ವಿಫಲಗೊಳಿಸುವನು. ನಿಮ್ಮ ದೇವನಿಗೆ ಯಾವ್ಯಾವ ಅದ್ಭುತ ಶಕ್ತಿಗಳಿವೆಯೆಂದು ನಿಮಗೆ ಈಗಲೂ ತಿಳಿದಿಲ್ಲ. ನಿಮಗೆ ಅದು ತಿಳಿದಿದ್ದರೆ, ಲೌಕಿಕ ಸುಖ ಸೌಕರ್ಯಗಳು ಇಲ್ಲದೆ ಹೋದುದರ ಕುರಿತು ಅಲಾಪಿಸುವ ಒಂದು ದಿನವಾದರೂ ನಿಮಗಾಗಿ ಬರುತ್ತಿರಲಿಲ್ಲ. ಒಂದು ನಿಧಿಯನ್ನು ವಶದಲ್ಲಿಟ್ಟುಕೊಂಡು ಯಾರಾದರೂ ಒಂದು ಚಿಕ್ಕಾಸು ನಷ್ಟವಾದುದಕ್ಕೆ ತಾನು ನಾಶ ಹೊಂದುವನೆಂಬ ಮಟ್ಟಿನಲ್ಲಿ ಅತ್ತು ಅಲಾಪಿಸುವನೋ? ನಿಮ್ಮ ಎಲ್ಲಾ ಆವಶ್ಯಕತೆಗಳನ್ನು ಪೂರೈಸುವವನಾಗಿದ್ದಾನೆ ದೇವನು. ಈ ನಿಧಿಯ ಕುರಿತು ನೀವು ಪ್ರಜ್ಞಾವಂತರಾಗಿದ್ದರೆ ಇಹಲೋಕ ಕಾರ್ಯಗಳಲ್ಲಿ ನೀವು ಹೀಗೆ ತಲ್ಲೀನರಾಗಿರಲು ಕಾರಣವೇನು? ಅವನು ಒಂದು ಅನರ್ಘ್ಯ ನಿಧಿ. ಆ ನಿಧಿಯ ಸರಿಯಾದ ಬೆಲೆಯನ್ನು ನೀವು ತಿಳಿದಿರಬೇಕು. ನಿಮ್ಮ ಪ್ರತಿಯೊಂದು ಹೆಜ್ಜೆಯಲ್ಲಿ ಅವನು ನಿಮ್ಮ ಸಹಾಯಕನಾಗಿದ್ದಾನೆ. ಅವನ ವಿನಾ ನೀವು ಏನೂ ಅಲ್ಲ; ನೀವೂ ನಿಮ್ಮ ಭೌತಿಕ ಸುಖ ಸೌಕರ್ಯಗಳೂ ಯೋಜನೆಗಳೂ ಎಲ್ಲಾ ಶುದ್ಧಶೂನ್ಯ ಮಾತ್ರ." (ಕಿಶ್ತೀ ನೂಹ್)

—ಹಝ್ರತ್ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಲೋಕವು ವಿನಾಶದಿಂದ ರಕ್ಷಿಸಲ್ಪಡಲಿ

## ಮೂರನೆಯ ಮಹಾಯುದ್ಧದ ಅಸ್ಪಷ್ಟ ಕರಿಛಾಯೆ ಕಾಣಿಸತೊಡಗಿದೆ

## ದೇವ ಸನ್ನಿಧಿಯಲ್ಲಿ ಶಿರಬಾಗಿಯೇ ನಾವು ಈ ವಿನಾಶದ — ಅಗ್ನಿಯಿಂದ ರಕ್ಷಿಸಿಕೊಳ್ಳಬಲ್ಲೆವು —

(ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬ್—ಅಹ್ಮದಿಯಾ ಸಂಘಟನೆಯ ಸರ್ವೋನ್ನತ ನಾಯಕರಾದ ಖಲೀಫ—ಅವರು ರಬ್ವಾದ ಮಸ್ಜಿದ್ ಅಖ್ಸಾದಲ್ಲಿ 11-1-1980ನೇ ಶುಕ್ರವಾರ ಮಾಡಿದ ಖುತ್ಬಾ ಪ್ರವಚನದ ಸಂಕ್ಷಿಪ್ತ ವರದಿ)

ಹಝ್ರತ್ ಸಾಹೇಬರು ಪವಿತ್ರ ಖುರ್‌ಆನಿನ ಒಂದು ವಚನವನ್ನು ಉದ್ಧರಿಸಿ ಜಮಾಅತಿನ ಸಹೋದರರನ್ನು ವಿಶೇಷ ಪ್ರಾರ್ಥನೆಗಾಗಿ ನಿರ್ದೇಶಿಸಿದರು. ಮಾನವ ಕುಲ ತನ್ನ ಶ್ರದ್ಧಾಹೀನತೆಯಿಂದಾಗಿಯೂ ದುರ್ನಡತೆಗಳ ಪರಿಣಾಮದಿಂದಾಗಿಯೂ ಅಹಂಭಾವದ ಕಾರಣದಿಂದಾಗಿಯೂ ಒಂದು ವಿಭಾಗವನ್ನು ಇನ್ನೊಂದು ವಿಭಾಗ ಕೀಳಾಗಿ ಕಾಣುವುದರ ಫಲವಾಗಿಯೂ ಲೋಕದಲ್ಲಿ ಅಶಾಂತಿ ಮತ್ತು ಗೊಂದಲವುಂಟಾಗುವ ಪರಿಸ್ಥಿತಿ ಗೋಚರಿಸತೊಡಗಿದೆ. ಮನುಷ್ಯರಿಗೆ ಸನ್ಮಾರ್ಗವು ಪ್ರಾಪ್ತಿಯಾಗಿ ಮನುಷ್ಯರೆಲ್ಲರೂ ನಾಶದಿಂದಲೂ ಭಯಂಕರ ಪರಿಸ್ಥಿತಿಯಿಂದಲೂ ಸುರಕ್ಷಿತವಾಗಲಿಯೆಂದು ಸಹೋದರರೆಲ್ಲರೂ ಪ್ರಾರ್ಥಿಸಬೇಕೆಂದು ಹಝುರತ್ ಸಾಹೇಬರು ಹೇಳಿದರು.

ಹಝ್ರತ್ ಖಲೀಫತುಲ್ ಮಸೀಹ್ ಪವಿತ್ರ ಖುರ್‌ಆನಿನ ಈ ವಚನಗಳನ್ನು ಪಾರಾಯಣ ಗೈದರು:

"ಫಸ್ತಖಿಮ್ ಕಮಾ ಉಮಿರ್ತ ವ ಮನ್ ತಾಬ ಮಅಕ ವಲಾ ತಥ್‌ಗೌ– ಇನ್ನಹೂ ಬಿಮಾ ತಅ್‌ಮಲೂನ ಬಸೀರ್. ವಲಾ ತರ್‌ಕನೂ ಇಲಲ್ಲದೀನ ಲಲಮೂ ಫತಮಸ್ಸಕುಮುನ್ನಾರು ವಮಾ ಲಕುಮ್ ಮಿನ್‌ದೂನಿಲ್ಲಾಹಿ ಮಿನ್ ಅವ್‌ಲಿಯಾಅ ಸುಮ್ಮ ಲಾ ತುನ್ಸರೂನ್"
(ಸೂರತ್ ಹೂದ್: 113. 114)

—(ಓ ಪೈಗಂಬರ್) ನೀನು ಮತ್ತು ನಮ್ಮ ಕಡೆಗೆ ಪಶ್ಚಾತ್ತಾಪದಿಂದ ಮರಳಿದ ನಿನ್ನ ಜೊತೆಗಾರರು ನಮ್ಮ ಆಜ್ಞೆಗಳನ್ನು ಅನುಸರಿಸಿ ಸ್ಥಿರವಾಗಿ ನಿಲ್ಲಿರಿ. ನೀವು ಮೇರೆಮೀರಬೇಡಿರಿ. ನೀವು ಮಾಡುವುದನ್ನೆಲ್ಲಾ ಅಲ್ಲಾಹು ನೋಡುತ್ತಿರುವನು. ನೀವು ದೌರ್ಜನ್ಯ ಪ್ರಯೋಗಿಸುವವರ ಕಡೆಗೆ ಬಾಗಬೇಡಿರಿ. ಹಾಗೆ ಮಾಡಿದರೆ ಅಗ್ನಿ ನಿಮ್ಮನ್ನು ಆವರಿಸುವುದು. ನಿಮಗೆ ಅಲ್ಲಾಹನ ಹೊರತು ಬೇರೆ ಯಾರೂ ಸ್ನೇಹಿತರು ದೊರೆಯಲಾರರು; ನಿಮಗೆ ಸಹಾಯಕರಾಗಿ ಯಾರೂ ಇಲ್ಲ.

ಈ ವಚನವನ್ನು ವ್ಯಾಖ್ಯಾನಿಸುತ್ತಾ ಹಝ್ರತ್ ಸಾಹೇಬರು ಈ ರೀತಿ ಹೇಳಿದರು:

"ಈ ವಚನಗಳಲ್ಲಿ ಅಲ್ಲಾಹು ಜನರನ್ನು ಪಾಪದಲ್ಲಿ ಮೇರೆ ಮೀರಿ ಹೋಗದಂತೆ ಎಚ್ಚರಿಸಿರುವನು. ಜನರು ದೌರ್ಜನ್ಯದಿಂದ ವರ್ತಿಸಬಾರದೆಂದೂ ಹಾಗೆ ಮಾಡಿದರೆ ಕಠಿಣ ಶಿಕ್ಷೆಗೂ ವಿನಾಶಕ್ಕೂ ಗುರಿಯಾಗಬೇಕಾಗಬಹುದೆಂದೂ ಈ ವಚನಗಳು ಸೂಚಿಸುತ್ತವೆ. ಗೊಂದಲ ಸೃಷ್ಟಿಸುವುದು, ಪರಸ್ಪರ ಜಗಳಾಡುವಂತೆ ಮಾಡುವುದು, ಭೂಭಾಗಗಳನ್ನು ಅನ್ಯಾಯದಿಂದ ವಶೀಕರಿಸುವುದು, ಅಲ್ಲಿ ಖೂನಿ ಮತ್ತು ಲೂಟಿ ನಡೆಸುವುದು, ಜಾಗತಿಕ ಯುದ್ಧ ನಡೆಸುವುದು ಇತ್ಯಾದಿ, ದೌರ್ಜನ್ಯ ಎಂಬ ಶಬ್ದದ ಉದ್ದೇಶಗಳಲ್ಲಿ ಸೇರಿವೆ. ಜಾಗತಿಕ ಯುದ್ಧಕ್ಕೆ ಕಾರಣೀಭೂತರಾಗುವವರು ಇಚ್ಛಿಸುವುದಾದರೆ ಜನರನ್ನು ವಿನಾಶದಿಂದ ರಕ್ಷಿಸಲು ಸಾಧ್ಯವಿದೆ. ಆದರೆ ಅವರು ಆ ರೀತಿ ಮಾಡದೆ ದೌರ್ಜನ್ಯ ಮತ್ತು ಗೊಂದಲ ಸೃಷ್ಟಿಸುವುದರಲ್ಲಿ ಮೇರೆ ಮೀರಿ ಹೋದರೆ ಅವರು ದೈವಕೋಪಕ್ಕೆ ಬಲಿಯಾಗುತ್ತಾರೆ.

ಈ ಪರಿಸ್ಥಿತಿಯಿಂದ ಸುರಕ್ಷಿತರಾಗಲಿಕ್ಕಾಗಿ ದೇವನ ಕಡೆಗೆ ಬಾಗುವಂತೆಯೂ ವಿನಾಶದಿಂದ ರಕ್ಷೆಗಳಿ ಸಲಿಕ್ಕಾಗಿ ಪ್ರಾರ್ಥಿಸಬೇಕೆಂದೂ ಖುರ್‌ಆನ್ ನಿರ್ದೇಶಿ ಸುತ್ತದೆ.

ಅಮೇರಿಕ, ರಶ್ಯಾ, ಚೀನಾ ಅಥವಾ ಬೇರೆ ಯಾವುದಾದರೂ ಸುಶಕ್ತ ರಾಷ್ಟ್ರಗಳ ಕೈಗಳನ್ನು ತಡೆದು ಅವುಗಳನ್ನು ದೌರ್ಜನ್ಯದಿಂದ ವಿಮುಖಗೊಳಿಸಲು ನಮಗೆ ಸಾಧ್ಯವಿಲ್ಲ. ಆದರೆ ಈ ಎಲ್ಲಾ ಶಕ್ತಿ ರಾಷ್ಟ್ರಗಳ ಕೈಗಳನ್ನು ಹಿಡಿಯಬಲ್ಲ ಅತ್ಯುನ್ನತ ಶಕ್ತಿಯನ್ನು ಹೊಂದಿ ರುವವನ ಆಶ್ರಯವನ್ನು ನಾವು ಪಡೆಯಲು ಸಾಧ್ಯವಿದೆ. ಆದುದರಿಂದ ನೀವೆಲ್ಲರೂ ಪೂರ್ಣ ಪ್ರಜ್ಞೆಯಿಂದಲೂ ದೂರ ದೃಷ್ಟಿಯಿಂದಲೂ ಪ್ರಾರ್ಥಿಸಿರಿ. ಮಾನವರಾಶಿ ವಿನಾಶದ ಯಾವ ಪ್ರಪಾತದ ಬದಿಯಲ್ಲಿ ನಿಂತಿದೆಯೋ ಅಲ್ಲಿಂದ ಸುರಕ್ಷಿತವಾಗಲಿ. ಈಗ ಮನುಷ್ಯನು ಮನು ಷ್ಯನ ಮೇಲೆ ಹಿಂಸೆ ಮಾಡಲು ಉದ್ಯುಕ್ತನಾಗಿದ್ದಾನೆ. ದೇವನು ತನ್ನ ದೇವದೂತರನ್ನು ಕಳುಹಿಸಿ ಇಂತಹ ಜನ ರಿಗೆ ಜ್ಞಾನ ದೊರೆಯುವಂತೆಯೂ ಸನ್ಮಾರ್ಗದ ಕಡೆಗೆ ಕರೆತರುವಂತೆಯೂ ಅವರ ಹೃದಯದಲ್ಲಿ ಪರಿವರ್ತನೆ ಯುಂಟಾಗುವಂತೆಯೂ ಮಾಡಲಿ ಎಂದು ಪ್ರಾರ್ಥಿಸಿರಿ. ನಾವು ನಿಷ್ಠೆಯಿಂದ ಪ್ರಾರ್ಥಿಸುತ್ತಾ ಇದ್ದರೆ ದೇವರು ನಮ್ಮನ್ನು ತನ್ನೆಡೆಗೆ ಬಾಗುವವರ ಸಂಘದಲ್ಲಿ ಸೇರ್ಪಡಿಸಿ "ಇವರು ದುರ್ಜನರ ಪಕ್ಷ ವಹಿಸಲಿಲ್ಲ" ಎಂದು ನಿರ್ಧ ರಿಸಿ ನಮ್ಮನ್ನು ಭಯಂಕರ ವಿಪತ್ತಿನಿಂದ ರಕ್ಷಿಸುವನು. ಈ ವಚನದಲ್ಲಿ ವಿವರಿಸಲಾದ ಅಗ್ನಿ ಯಾವುದೇ ರೂಪ ದಲ್ಲಿ ಪ್ರತ್ಯಕ್ಷವಾದರೂ, ಅದು ಮೂರನೆಯ ಜಾಗತಿಕ ಮಹಾಯುದ್ಧ ಅಥವಾ ನಾಲ್ಕನೆಯ ಮಹಾಯುದ್ಧ ಅಥವಾ ಐದನೆಯ ಮಹಾಯುದ್ಧದ ರೂಪದಲ್ಲಿ ಬರ ಲಿದೆಯಾದರೂ ಅವುಗಳಿಂದ ಅವನು ನಮ್ಮನ್ನು ರಕ್ಷಿಸಲಿ.

ಹಝ್ರತ್ ಮಸೀಹ್ ಮೌಊದ್ (ವಾಗ್ದತ್ತ ಮಸೀಹ್ – ಅಹ್ಮದಿಯಾ ಸಂಘಟನೆಯ ಸ್ಥಾಪಕರು) ನಮಗೆ ಹೀಗೆ ತಿಳಿಸಿರುವರು: ಪವಿತ್ರ ಖುರ್‌ಆನಿನಲ್ಲಿ ಮಸೀಹರ ಬರುವಿಕೆಯ ದೃಷ್ಟಾಂತಗಳಾಗಿ ವಿವರಿಸಲಾ ಗಿರುವ ಸಂಗತಿಗಳಲ್ಲಿ ಒಂದು ವಿಪತ್ಕಾರಿ ಯುದ್ಧ ಮತ್ತು ವಿನಾಶದ ವಿವರಣೆಯೂ ಇದೆ. ಈ ವಿಪತ್ತಿನಿಂದಾಗಿ ಕೆಲವು ಸ್ಥಳಗಳಲ್ಲಿ ಸಂಪೂರ್ಣ ಜೀವಹಾನಿ ಸಂಭವಿಸು ವುದು. ಅಲ್ಲಿ ಮನುಷ್ಯರಾಗಲಿ, ಪಕ್ಷಿಗಳಾಗಲಿ, ಮೃಗ ಗಳಾಗಲಿ, ಕ್ರಿಮಿಕೀಟಗಳಾಗಲಿ, ಬೆಕ್ಟೀರಿಯಾ ಅಥವಾ ವೈರಸ್ ಸಹ ಬಾಕಿಯಾಗಲಾರದು. ಜೀವದ ಎಲ್ಲಾ ಕುರುಹುಗಳು ನಾಶ ಹೊಂದುವುವು.

ಈ ರೀತಿಯ ವಿನಾಶದ ಒಂದೆರಡು ದೃಶ್ಯಗಳನ್ನು ಲೋಕವು ಕಂಡಿದೆ. ದೌರ್ಭಾಗ್ಯವಶಾತ್ ಮೂರನೆಯ ಮಹಾಯುದ್ಧ ಪ್ರಾರಂಭವಾದರೆ ಪ್ರಪಂಚದ ಬಹಳ ದೊಡ್ಡ ಭಾಗವು ಈ ರೀತಿಯ ಸಂಪೂರ್ಣ ಜೀವಹಾನಿ ಗೊಳಗಾಗುವುದು. ತಮ್ಮನ್ನು ಅತ್ಯಂತ ಹೆಚ್ಚು ಪರಿ ಷ್ಕೃತರೆಂದೂ ಶಕ್ತಿಶಾಲಿಗಳೆಂದೂ ಅತ್ಯಂತ ಶ್ರೇಷ್ಠ ರೆಂದೂ ಅಹಂಭಾವದಿಂದ ವರ್ತಿಸುವ ಹೆಚ್ಚು ದೌರ್ಜನ್ಯ ಪ್ರಯೋಗಿಸುವ ಮತ್ತು ವಿನಾಶವನ್ನು ತಡೆಯಲು ಯಾವುದೇ ಪ್ರಯತ್ನ ಮಾಡದ ಜನಾಂಗಗಳು ಇದಕ್ಕೆ ಹೊಣೆಗಾರರಾಗುವರು.

ನಮ್ಮನ್ನೂ ಲೋಕವನ್ನೂ ಅಲ್ಲಾಹು ಈ ವಿನಾಶ ದಿಂದ ರಕ್ಷಿಸಲಿಯೆಂದು ಪ್ರಾರ್ಥಿಸಿರಿ.'

ಸಂಗ್ರಹ: (M. U. ರಶೀದ್)


# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್

ಪುಟ: 60 ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore–575001.

# ಧರ್ಮ - ಇಂದು

★ ಎಂ. ಮುಹಮ್ಮದ್ ಎಂ. ಎ.

ಜನರು ಭೌತಿಕ ಸುಖ ಸೌಕರ್ಯಗಳ ಹಿಂದೆ ನಾಗಾಲೋಟ ಮಾಡುವ ಕಾಲಸಂಧಿಯಲ್ಲಿ ನಾವಿದ್ದೇವೆ. ಉಚ್ಚಮಟ್ಟದ ಆಹಾರ, ಉತ್ತಮ ವಸ್ತ್ರ, ಅರಮನೆ ಯಂಥ ವಸತಿ, ಬೆಲೆ ಬಾಳುವ ಮೋಟಾರುಕಾರು, ರೇಡಿಯೋ ಟೆಲಿವಿಷನ್ ಸೆಟ್, ಏರ್‌ಕಂಡೀಶನ್ ಯಂತ್ರ ಇವನ್ನೆಲ್ಲಾ ಸಾಧ್ಯವಿದ್ದಷ್ಟು ಅಧಿಕ ಗಳಿಸುವುದೇ ಜನರ ಪ್ರಧಾನ ಗುರಿ. ಇವು ಲಭಿಸಿದರೆ ಮನಃಸಂತೃಪ್ತಿ ಯನ್ನೂ ಗೌರವವನ್ನೂ ಪಡೆದಂತೆಂದು ಜನರು ಭಾವಿ ಸುತ್ತಾರೆ. ಆದುದರಿಂದ ಈ ಭೌತಿಕ ಸುಖಸೌಕರ್ಯ ಗಳನ್ನು ಸಂಪಾದಿಸುವ ಒಂದು ಸ್ಪರ್ಧೆಯೇ ಇಂದು ಕಂಡು ಬರುತ್ತದೆ. ಪವಿತ್ರ ಖುರ್‌ಆನಿನ 102ನೇ ಅಧ್ಯಾಯವಾದ ಸೂರತುತ್ತಕಾಸುರ್ ಈ ಪ್ರವಣತೆ ಯನ್ನು ಕಠಿಣವಾಗಿ ಖಂಡಿಸಿದೆ. ಬಹಳ ಸಂಕ್ಷಿಪ್ತವಾಗಿ ಅವಿಸ್ಮರಣೀಯವಾದ ಆದರ ನುಡಿ ಹೀಗಿದೆ:

"ಅಲ್‌ಹಾಕುಮುತ್ತಕಾಸುರ್ – ಹತ್ತಾ ಜುರ್‌ತು ಮುಲ್ ಮಕಾಬಿರ್"–ಭೌತಿಕ ಸುಖ ಸೌಕರ್ಯಗಳನ್ನೂ ಸಂಪತ್ತುಗಳನ್ನೂ ಶೇಖರಿಸುವ ತೀವ್ರ ಸ್ಪರ್ಧೆ ನಿಮ್ಮ ಗಮನವನ್ನು ( ಪರಮಾತ್ಮನಿಂದ ) ತಿರುಗಿಸಿದೆ– ನೀವು ಸಮಾಧಿಗಳನ್ನು ತಲಪುವ ತನಕ (ಈ ಪ್ರವಣತೆ ಮುಂದು ವರಿಯಬಹುದು)

ಧನ ಮತ್ತು ಭೌತಿಕ ಸುಖ ಸೌಕರ್ಯಗಳು ಹೆಚ್ಚು ವಾಗ ಮನುಷ್ಯನಲ್ಲಿ ಅಸ್ವಸ್ಥತೆ ವರ್ಧಿಸುವುದಾಗಿ ಕಂಡು ಬರುತ್ತದೆ. ಭೌತಿಕ ಸಂಪತ್ತುಗಳ ಭಂಡಾರಗಳಾದ ಪಾಶ್ಚಾತ್ಯ ರಾಜ್ಯಗಳಿಂದ ಯಾಕೆ ಜನರು ಆಧ್ಯಾತ್ಮಿಕ ಮೌಲ್ಯಗಳನ್ನು ಹುಡುಕಿಕೊಂಡು ಈ ದರಿದ್ರ ಭಾರತಕ್ಕೆ ಬರಬೇಕು? ಲೋಕದಲ್ಲಿಡೀ ಹರಡಿರುವ ಅಶಾಂತಿಗೂ ಅಸ್ವಸ್ಥತೆಗೂ ಪರಿಹಾರವನ್ನುಂಟುಮಾಡಲು ಭೌತಿಕ ವೈಭವಗಳಿಗೆ ಸಾಧ್ಯವಿಲ್ಲ ಎಂಬುದು ಸತ್ಯ. ಯಾವುದು ಸರಿ, ಯಾವುದು ತಪ್ಪು ಎಂದು ವಿಧಿಸಲಿಕ್ಕೆ ಭೌತಿಕ ವೈಭವಗಳಿಗಾಗಲಿ, ಆಧುನಿಕ ವೈಜ್ಞಾನಿಕ – ತಾಂತ್ರಿಕ ವಿದ್ಯೆಗಳಿಗಾಗಲಿ ಸಾಧ್ಯವಿಲ್ಲ.

ಜೀವಿತದ ಸೌಂದರ್ಯವೇನೆಂದು ತಿಳಿಯಲು ಒಂದು ವೇಳೆ ನಮಗಿಲ್ಲಿ ಸಾಧ್ಯವಾಗದಿರಬಹುದು. ಆದರೂ ನಾವಿಲ್ಲಿ ಜೀವಿಸಲಿಕ್ಕೆ ವಿಧಿಸಲ್ಪಟ್ಟಿದ್ದೇವೆ. ದೈವ ಸತ್ತೆಯನ್ನು ಅಲ್ಲಗಳೆಯುವುದರಿಂದಾಗಲಿ ಧರ್ಮವನ್ನು ಹೀನೈಸುವುದರಿಂದಾಗಲಿ ಜೀವಿತಹೋರಾಟದಿಂದ ನಮಗೆ ಬೇರ್ಪಟ್ಟು ನಿಲ್ಲಲು ಸಾಧ್ಯವಿಲ್ಲ. ಜೀವಿತ ವೆಂದರೆ ಒಂದು ಪ್ರಯತ್ನವಾಗಿದೆ. ಎಲ್ಲಾ ಮನುಷ್ಯ ಪ್ರಯತ್ನಗಳಿಗೂ ಆದರ್ಶನೀಯವಾದ ಒಂದು ಲಕ್ಷ್ಯ ಇರಬೇಕಾಗಿದೆಯೆಂಬ ಜೊರಾಸ್ಟರ್ ಪ್ರವಾದಿಯ ನುಡಿ ಇಲ್ಲಿ ನಮ್ಮ ನೆನಪಿಗೆ ಬರುತ್ತದೆ. ಧರ್ಮವು ಈ ಆದರ್ಶ ನೀಯ ಗುರಿಯನ್ನು ನಮಗೆ ಕಲಿಸುತ್ತದೆ; ಸರಿ ಯಾವುದು ತಪ್ಪು ಯಾವುದು ಎಂಬ ಪ್ರಶ್ನೆಗುತ್ತರವನ್ನು ನೀಡುತ್ತದೆ. ಸ್ಥಳ-ಕಾಲ ಬೇಧಗಳಿಂದ ಮಾರ್ಪಡಿಸಲಾಗದ ಸನಾತನ ಸತ್ಯಗಳನ್ನು ನಮ್ಮ ಮುಂದೆ ಸಾದರಪಡಿಸುವುದು ಧರ್ಮವಾಗಿದೆ.

ಧರ್ಮವೆಂದರೆ ಸಂಕುಚಿತ ಹಾಗೂ ಹಲವು ವಿಭಿನ್ನ ಆಚಾರ ಅನುಷ್ಠಾನಗಳ ಸಮುಚ್ಚಯವಲ್ಲ. ಬಾಹ್ಯಸ್ಪರ್ಶಿಗಳಾದ ಕಟ್ಟುಕಟ್ಟಳೆಗಳಲ್ಲಿ ಸಿಲುಕಿ ಧರ್ಮದ ಆಂತರಿಕ ಸೌಂದರ್ಯವನ್ನೂ ಚೈತನ್ಯವನ್ನೂ ದರ್ಶಿಸು ವುದರಲ್ಲಿ ನಾವು ಹೆಚ್ಚಿನಂಶ ಪರಾಭವಗೊಳ್ಳುತ್ತೇವೆ. ಈ ಸೌಂದರ್ಯ ದರ್ಶನ ನಷ್ಟಹೊಂದಿದ ನಾವು ಮತ ಕಲಹ ಗಳನ್ನುಂಟುಮಾಡುತ್ತೇವೆ. ವರ್ಗೀಯ ಘರ್ಷಣೆಗ ಳುಂಟಾಗುತ್ತವೆ. ದೈವಿಕ ಸತ್ಯಗಳನ್ನು ಕಂಡುಹಿಡಿಯುವ ಬದಲಾಗಿ ನಾಶಕಾರಿ ವರ್ತನೆಗಳಲ್ಲೂ ರಕ್ತ ಹರಿಸುವಿಕೆ ಯಲ್ಲೂ ತೊಡಗುತ್ತೇವೆ. ಆತ್ಮ ನಿಯಂತ್ರಣ ಮತ್ತು

ಜವಾಬ್ದಾರಿಕೆಯ ಶಿಕ್ಷಣವನ್ನು ಧರ್ಮ ನಮಗೆ ನೀಡುತ್ತದೆ. ಮೊದಲಿಗಿಂತ ಹೆಚ್ಚಾಗಿ ಈ ಕಾಲಘಟ್ಟದಲ್ಲಿ ನಮಗೆ ಆತ್ಮ ನಿಯಂತ್ರಣ ಮತ್ತು ಜವಾಬ್ದಾರಿಕೆಯ ಪ್ರಜ್ಞೆ ಇರಬೇಕಾಗಿದೆ. ಇಂದು ನಾವು ನಮ್ಮ ಹಕ್ಕುಗಳ ಕುರಿತು ಮಾತ್ರ ಪ್ರಜ್ಞೆಯುಳ್ಳವರಾಗಿದ್ದೇವೆ. ನಮ್ಮ ಕರ್ತವ್ಯಗಳ ಕುರಿತು ನಮಗೆ ಅರಿವಿಲ್ಲ. ಎಲ್ಲಾ ಕಾರ್ಯವನ್ನೂ ತಂತ್ರದಿಂದ ಸಾಧಿಸುವ ಪ್ರವಣತೆ ಎಲ್ಲೆಡೆ ಕಂಡು ಬರುತ್ತದೆ.

ಮೊದಲಿಗಿಂತ ಹೆಚ್ಚು ಹೃದಯ ವಿಶಾಲತೆ ಮತ್ತು ಸಹಿಷ್ಣುತಾಭಾವ ಇಂದು ಅಗತ್ಯವೆನಿಸಿದೆ. ಪ್ರತಿಯೊಬ್ಬನಿಗೂ ಅವನಿಗೆ ಸರಿಯೆಂದು ತೋರುವುದನ್ನು ನಂಬಲಿಕ್ಕೂ ಅದನ್ನು ಪ್ರಚಾರಗೊಳಿಸಲಿಕ್ಕೂ ಸ್ವಾತಂತ್ರ್ಯ ನಮ್ಮ ದೇಶದ ಸಂವಿಧಾನ ನಮಗೆ ನೀಡುವುದಾದರೂ ಸಮಾಜದಲ್ಲಿ ಇಂದು ನೆಲೆಗೊಂಡಿರುವ ಅಸಹಿಷ್ಣುತಾ ಭಾವನೆ ಈ ಸ್ವಾತಂತ್ರ್ಯವನ್ನು ನಮಗೆ ನಿರಾಕರಿಸುತ್ತದೆ. ರೂಸ್ಸೋನೊಂದಿಗೆ ಫ್ರೆಂಚ್ ವಿಪ್ಲವಕ್ಕೆ ಬೀಜ ಬಿತ್ತಿದ ವಾಲ್ಟರ್ ಘೋಷಿಸಿದನು: "I may disagree with everything that you say, but I will fight, if necessary, to my death, for your right to say it." (ನೀವು ಹೇಳುವ ಯಾವ ಸಂಗತಿಯನ್ನೂ ನಾನು ಒಪ್ಪದಿರಬಹುದು; ಆದರೆ ನಿಮಗೆ ಅದನ್ನು ಹೇಳುವ ಹಕ್ಕನ್ನು ಸಂರಕ್ಷಿಸುವರೆ, ಅಗತ್ಯವಿದ್ದಲ್ಲಿ ಸಾಯಲಿಕ್ಕೆ ಸಿದ್ಧನಾಗಿದ್ದುಕೊಂಡು ನಾನು ಹೋರಾಡುವೆನು). ಪ್ರಜಾಸತ್ತಾತ್ಮಕ ವಿಚಾರಧಾರೆಯ ತಿರುಳಾಗಿದೆ ಇದು. ನಮ್ಮ ವಿಶ್ವಾಸ ಪ್ರಮಾಣಗಳಿಗೂ ವಿಚಾರಗತಿಗಳಿಗೂ ಸರಿಹೋಲದ ಇನ್ನೊಂದು ದೃಷ್ಟಿಕೋನವನ್ನು ಸಮಚಿತ್ತದಿಂದಲೂ ಸಹಿಷ್ಣುತೆಯಿಂದಲೂ ತಿಳಿದುಕೊಳ್ಳಲು ಪ್ರಯತ್ನಿಸಬೇಕು. ನಮ್ಮ ಮೊದಲಿನ ಭಾವನೆಗಳನ್ನೂ ತೀರ್ಮಾನಗಳನ್ನೂ ಇಷ್ಟಾನಿಷ್ಟಗಳನ್ನೂ ಬದಲಾಯಿಸಿ ಇನ್ನೊಂದು ವಿಚಾರಧಾರೆಯನ್ನು ತಿಳಿದುಕೊಳ್ಳಲು ನಿಜವಾದ ಪ್ರಯತ್ನವನ್ನಾದರೂ ಮಾಡಲು ನಮ್ಮ ಪೈಕಿ ಎಷ್ಟು ಮಂದಿಗೆ ಸಾಧ್ಯ? ಈ ಪ್ರಶ್ನೆಯ ಉತ್ತರದಲ್ಲಿ ಪ್ರಜಾಪ್ರಭುತ್ವ ಜೀವಿತ ಕ್ರಮದ ನೆಲೆಗೊಳ್ಳುವಿಕೆ ಮತ್ತು ಪ್ರಗತಿ ಅಡಕವಾಗಿದೆ. ಪ್ರಜಾಪ್ರಭುತ್ವ ಮೌಲ್ಯಗಳು ರಾಜಕೀಯ ಧುರೀಣರ ಭಾಷಣ ವೈಭವಗಳಲ್ಲ, ಅವು ಉತ್ತಮವಾದೊಂದು ಜೀವಿತಕ್ರಮವನ್ನು ಮನುಷ್ಯ ರಾಶಿಗೆ ಪ್ರದಾನ ಮಾಡುವ ತತ್ವಗಳಾಗಿವೆ.

ಇಸ್ಲಾಂ ಪ್ರಜಾಸತ್ತಾತ್ಮಕ ಸಿದ್ಧಾಂತಗಳನ್ನೊಳಗೊಂಡ ಧರ್ಮವಾಗಿದೆ. ಆದ್ದರಿಂದಲೇ ಅದು ಆಧುನಿಕ ಲೋಕದ ಮತವಾಗುತ್ತದೆ. ಸಹಿಷ್ಣುತೆಯೂ ಹೃದಯ ವಿಶಾಲತೆಯೂ ಅದರ ಮೂಲಾಧಾರಗಳಲ್ಲಿ ಒಳಗೊಳ್ಳುತ್ತವೆ. ಪವಿತ್ರ ಖುರ್‌ಆನಿನ ಅಧ್ಯಾಪನಗಳಾದ್ಯಂತವೂ ಮುಹಮ್ಮದ್ ಪೈಗಂಬರರ ನಡವಳಿಕೆಗಳಲ್ಲಿ ಧಾರಾಳವಾಗಿಯೂ ಅವು ಕಾಣುತ್ತವೆ. ಮನುಷ್ಯ ಜೀವಿತದಲ್ಲಿ ಇಂದು ನಾವು ಎದುರಿಸುತ್ತಿರುವ ಅಸ್ವಸ್ಥತೆ, ಅಶಾಂತಿ, ಸಂಘರ್ಷಗಳಿಗೆ ಕಾರಣ ಒಂದು ಪಂಗಡಕ್ಕೆ ಮತ್ತೊಂದು ಪಂಗಡವನ್ನು ಅರ್ಥಮಾಡಲಿಕ್ಕೆ ಅಸಾಧ್ಯವಾದದ್ದು. ಹೆತ್ತವರಿಗೆ ಮಕ್ಕಳನ್ನೂ ಮಕ್ಕಳಿಗೆ ಹೆತ್ತವರನ್ನೂ ತಿಳಿಯಲಿಕ್ಕಾಗುವುದಿಲ್ಲ. ಅಧ್ಯಾಪಕರಿಗೆ ವಿದ್ಯಾರ್ಥಿಗಳನ್ನು ನಿಯಂತ್ರಿಸಲಿಕ್ಕಾಗಲಿ, ವಿದ್ಯಾರ್ಥಿಗಳಿಗೆ ಅಧ್ಯಾಪಕರನ್ನು ಗೌರವಿಸಲಿಕ್ಕಾಗಲಿ ಸಾಧ್ಯವಾಗುವುದಿಲ್ಲ, ಮೇಲಧಿಕಾರಿಗೆ ಕೆಳತರಗತಿಯ ನೌಕರನ ಮೇಲೆ ವಿಶ್ವಾಸವಿಲ್ಲ. ಕೆಳ ತರಗತಿಯ ನೌಕರನಿಗೆ ಮೇಲಾಧಿಕಾರಿಯ ಮೇಲೆ ಸಂಶಯ. ಇಂದು ನಮ್ಮ ರಾಜ್ಯದಲ್ಲಿ ಅನೇಕ ರಾಜಕೀಯ ಪಕ್ಷಗಳೂ ಧರ್ಮಗಳೂ ಕಲಾಸಾಂಸ್ಕೃತಿಕ ಸಂಘಗಳೂ ಸಾಮಾಜಿಕ-ಆರ್ಥಿಕ ತತ್ವಶಾಸ್ತ್ರಗಳೂ ಇವೆ. ಅಲ್ಲೆಲ್ಲಾ ಪ್ರತಿಪಕ್ಷ ಗೌರವ ಅತ್ಯಾವಶ್ಯಕವಾಗಿ ಕಂಡುಬರುತ್ತದೆ.

ಮನೆಗೆ ಬೆಂಕಿ ಬಿದ್ದಾಗ ಕೂಡಲೇ ಬೆಂಕಿಯನ್ನು ನಂದಿಸದೆ, ಬೆಂಕಿ ನಂದಿಸುವ ವಿವಿಧ ಮಾರ್ಗಗಳ ಕುರಿತು ಚರ್ಚೆಮಾಡಿ ಕಾಲಕಳೆಯುವ ಹಾಗೆ ಆಗಿದೆ ನಮ್ಮ ಸಮ್ಮೇಳನ, ಚರ್ಚಾಕೂಟಗಳು. ನಮ್ಮನ್ನು ಕಾರ್ಯೋನ್ಮುಖರನ್ನಾಗಿ ಮಾಡದ ಎಲ್ಲಾ ಸಮ್ಮೇಳನ, ಚರ್ಚಾಕೂಟಗಳು ನಿರರ್ಥಕ.

ಮತ ಕಾಲಹರಣವಾಗಿದೆಯೆಂದೂ ಧರ್ಮದ ವಿಷಯ ಮಾತನಾಡುವವರು ಕಾಲದ ಬದಲಾವಣೆಯನ್ನು ತಿಳಿಯದವರೆಂದೂ ಹೇಳುವವರಿದ್ದಾರೆ. ಧರ್ಮವನ್ನು ಬೇರ್ಪಡಿಸಿ ನೋಡೋಣ. ನಂತರ ನಾವು ಇಲ್ಲಿ ಕಾಣುವ ಜೀವಿತಾದರ್ಶಗಳು ಕೇವಲ ಅಸ್ತಿತ್ವವಾದ ಮತ್ತು ಭೌತಿಕ ನಿರೀಶ್ವರ ನಿರ್ಮಿತ ಸಂಘಟನೆಗಳು. ಇವುಗಳಾದರೋ, ಆದರ್ಶನೀಯ-ಪ್ರಸಾದನೀಯ ಜೀವನ

ಗುರಿಯನ್ನು ನಮಗೆ ತೋರಿಸುವ ವಿಷಯದಲ್ಲಿ ಪರಾಭವ ಗೊಂಡಿವೆ. ಅತ್ಯಂತ ಆಧುನಿಕ ಸಾಹಿತ್ಯ ಸೃಷ್ಟಿಗಳು ಅಸ್ತಿತ್ವವಾದದಲ್ಲಿ ಅಧಿಷ್ಠಿತಗೊಂಡಿವೆ. ಜೀವಿತದ ಅಂತ್ಯವೇ ಮರಣ – ಮರಣವಿರುವುದರಿಂದ ಜೀವಿತ ನಿರರ್ಥಕ. ಹಾಗಿರುವ ಈ ಜೀವಿತದಲ್ಲಿ ಯಾರಿಗೂ ಯಾರೊಡನೆಯೂ ಋಣವಾಗಲಿ ಜವಾಬ್ದಾರಿಕೆಯಾಗಲಿ ಇಲ್ಲ. ಮಕ್ಕಳಿಗೆ ಮಾತಾಪಿತರೊಡನೆಯಾಗಲಿ ಮಾತಾಪಿತರಿಗೆ ಮಕ್ಕಳೊಡನೆಯಾಗಲಿ ಯಾವುದೇ ಋಣ ಬಂಧವಿಲ್ಲ. ವ್ಯಕ್ತಿಗಳಿಗೆ ಸಮುದಾಯದೊಡನಾಗಲಿ, ಸಮುದಾಯಕ್ಕೆ ವ್ಯಕ್ತಿಗಳೊಡನಾಗಲಿ ಯಾವ ಬಾಧ್ಯತೆಯೂ ಇಲ್ಲ. ಲೈಂಗಿಕತೆ ಮತ್ತು ಮಾದಕ ಪದಾರ್ಥ ಸೇವನೆಯಲ್ಲಿ ಮಾತ್ರ ಪರಿಹಾರ ಕಂಡುಕೊಳ್ಳುವ ವಿಚಾರ ಧಾರೆಯ ವಿಕೃತಿಗಳು ಧರ್ಮದ ಅಭಾವದಲ್ಲಿ ನಮ್ಮನ್ನು ದಿಟ್ಟಿಸಿ ನೋಡುತ್ತವೆ. ಇದು ಚಿತ್ರದ ಒಂದು ಮುಖ. ಇನ್ನೊಂದು ಮುಖ ಮನುಷ್ಯನಿಗೆ ಮನಃಶಾಂತಿ ನೀಡಲು ಅಸಮರ್ಥವಾದ ವೈಜ್ಞಾನಿಕ–ತಾಂತ್ರಿಕ ವಿದ್ಯೆಗಳಾಗಿವೆ. ಎಲ್ಲಾ ಕಡೆಗಳಿಂದ ಪ್ರಶ್ನೆಗಳೇಳುವ ಕಾಲಘಟ್ಟವಾಗಿದೆ ಇದು ಉತ್ತರ ಮಾತ್ರ ಲಭಿಸುವುದಿಲ್ಲ. ಈ ಶತಮಾನದ ಸುಪ್ರಸಿದ್ಧ ತತ್ವಜ್ಞಾನಿಯಾದ ಬರ್ಟ್ರಂಡ್ ರಸ್ಸೆಲ್ ತನ್ನ ಒಂದು ಅನುಭವವನ್ನು ಹೇಳುತ್ತಾರೆ: ವಿನ್‌ಚೆಸ್ಟರಿಗೆ ಹೋಗುವ ಸುಲಭ ದಾರಿ ಯಾವುದೆಂದು ವಿಚಾರಿಸುತ್ತಾ ಅವರು ಒಂದು ಅಂಗಡಿಯೊಳಗೆ ಪ್ರವೇಶಿಸಿದರು. ಅಂಗಡಿಯಾತ ಅಂಗಡಿಯ ಹಿಂಭಾಗದಲ್ಲಿ ಕೆಲಸಮಾಡುತ್ತಿರುವ ತನ್ನ ಸಹಾಯಕನನ್ನು ಕರೆದು ಕೇಳಿದನು: "ಇಕೋ ಇಲ್ಲೊಬ್ಬರು ವಿನ್‌ಚೆಸ್ಟರಿಗೆ ಹೋಗುವ ಸಮೀಪದ ದಾರಿ ವಿಚಾರಿಸಿ ಬಂದಿದ್ದಾರೆ, ನಿಮಗೆ ಗೊತ್ತಿದೆಯೇ?"

ಸಹಾಯಕ: "ಏನು ಒಬ್ಬರು ಬಂದಿರುವರೇ?"
ಅಂಗಡಿಯವ: "ಹೌದು"
ಸಹಾಯಕ: "ಅವರು ದಾರಿ ವಿಚಾರಿಸುತ್ತಾರೋ?"
ಅಂಗಡಿಯವ: "ಹೌದು"
ಸಹಾಯಕ: "ವಿನ್‌ಚೆಸ್ಟರಿಗೆ ಹೋಗುವ ದಾರಿಯೇ?"
ಅಂಗಡಿಯವ: "ಹೌದು"
ಸಹಾಯಕ: "ವಿನ್‌ಚೆಸ್ಟರಿಗೆ ಹೋಗುವ ಸಮೀಪದ ದಾರಿಯೇ ಅವರಿಗೆ ತಿಳಿಯಬೇಕಾದದ್ದು?"
ಅಂಗಡಿಯವ: "ಹೌದು"
ಸಹಾಯಕ: "ಹಾಗಾದರೆ ಅವರೊಡನೆ ಹೇಳಿರಿ – ನನಗೆ ಗೊತ್ತಿಲ್ಲವೆಂದು"!

ಇದಾಗಿದೆ ಜೀವನದ ಸಮಸ್ಯೆಗಳ ಕುರಿತು ನಮ್ಮ ತತ್ವಶಾಸ್ತ್ರ, ತಂತ್ರಜ್ಞಾನ ಮತ್ತು ವೈಜ್ಞಾನಿಕತೆಯ ನೆಲೆ. ಪ್ರಶ್ನೆಗಳನ್ನು ಕೇಳಲು ಅವು ನಮ್ಮನ್ನು ಪ್ರಗಲ್ಭರನ್ನಾಗಿ ಮಾಡುತ್ತವೆ. ಉತ್ತರ ನೀಡಲಿಕ್ಕೆ ಅವಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲಿ ನಾವು ಇಷ್ಟವಿದ್ದರೂ ಇಲ್ಲವಾದರೂ ಧರ್ಮದೆಡೆಗೆ ತಿರುಗಬೇಕಾಗುತ್ತದೆ. ದೇವನಿದ್ದಾನೆಯೋ ಇಲ್ಲವೇ ಎಂದು ತಿಳಿದುಕೊಳ್ಳುವುದಲ್ಲ ಇಲ್ಲಿ ನಮ್ಮ ಕಾರ್ಯ. ಜನರು ದಾರಿದ್ರ್ಯದಲ್ಲೂ ಹಸಿವೆಯಿಂದಲೂ ರೋಗಪೀಡಿತರಾಗಿಯೂ ನರಳುತ್ತಿರುವಾಗ ಅವರನ್ನು ರಕ್ಷಿಸಲು ನಮಗೆ ಸಾಧ್ಯವಿದೆಯೇ ಎಂಬುದಾಗಿದೆ ಪ್ರಶ್ನೆ. ಮತ ವಿಶ್ವಾಸಿಗೆ ಇದರಲ್ಲಿ ಏನಿದೆ ಮಾಡಲಿಕ್ಕೆಂದು ಕೆಲವರು ಚಕಿತರಾಗುತ್ತಾರೆ.

ಆದರೆ ಯಥಾರ್ಥ ವಿಶ್ವಾಸಿಗೆ ಇದರಲ್ಲಿ ಕಾರ್ಯವಿದೆಯೆಂದು ಪವಿತ್ರ ಖುರ್‌ಆನ್ ಘೋಷಿಸುತ್ತದೆ. ದೇವನನ್ನು ತಿಳಿಯುವವರು ಸಹಜೀವಿಗಳಿಗೆ ಮಾಡಬೇಕಾದ ಕರ್ತವ್ಯವೇನೆಂದು ತಿಳಿದಿರುತ್ತಾರೆ. "ಅರಅಯ್‌ತಲ್ಲದೀ ಯುಕದ್ದಿಬು ಬಿದ್ದೀನ್ – ಫದಾಲಿಕಲ್ಲದೀ ಯದುವ್ವುಲ್ ಯತೀಮ ವಲಾ ಯಹುಲ್ಲು ಅಲಾ ತಆಮಿಲ್ ಮಿಸ್ಕೀನ್" (ಖುರ್‌ಆನ್-107 : 2-4)– "ಮತನಿಷೇಧಿಯನ್ನು ನೀನು ಕಂಡೆಯಾ? ಅನಾಥ ಮಗುವನ್ನು ಅವನು ಅಟ್ಟುತ್ತಾನೆ; ನಿರ್ಗತಿಕನಿಗೆ ಆಹಾರ ನೀಡುವ ಕಾರ್ಯದಲ್ಲಿ ಅವನು ಜನರನ್ನು ಪ್ರೇರೇಪಿಸುವುದಿಲ್ಲ" ಎಂದು ಖುರ್‌ಆನ್ ಹೇಳುತ್ತದೆ. ಸಹಾನುಭೂತಿ ಮತ್ತು ದೀನಾನುಕಂಪ ಜನರಲ್ಲಿ ಬೆಳೆಯದಿರುವ ತನಕ ಒಂದು ಸರಕಾರಕ್ಕಾಗಲಿ ಸಮಾಜಕ್ಕಾಗಲಿ ಮನುಷ್ಯರು ಅನುಭವಿಸುವ ಯಾತನೆಗಳಿಗೆ ಕೊನೆಯನ್ನುಂಟು ಮಾಡಲು ಸಾಧ್ಯವಿಲ್ಲ. ನಾವು ಸ್ವಾರ್ಥಮತಿಗಳಾದ ಸಣ್ಣ ಮನುಷ್ಯರಾಗಿ ಬಿಟ್ಟೆವು; ವಿದ್ವೇಷ-ಸ್ಪರ್ಧೆಗಳಿಂದ ನಮ್ಮ ಅಂತರಂಗ ಮಲಿನಗೊಂಡಿದೆ. ನಮ್ಮನ್ನು ಸೇವಾ ತತ್ಪರರಾದ, ತ್ಯಾಗ ಸನ್ನದ್ಧರಾದ, ಅರ್ಪಣಾಭಾವವುಳ್ಳ ದೊಡ್ಡ ಮನುಷ್ಯರನ್ನಾಗಿ ಮಾಡಲು ನಮ್ಮ ಹೃದಯಗಳನ್ನು, ವಿಕಾರ ವಿಚಾರಗಳನ್ನು ಧಾರ್ಮಿಕ ಮೌಲ್ಯಗಳ ಮೂಲಕ ಶುದ್ಧೀಕರಿಸಲು ಧರ್ಮಕ್ಕೆ ಮಾತ್ರ ಇಂದು ಸಾಧ್ಯ. ●

# ಖುರ್‌ಆನ್ ಮತ್ತು ಪ್ರಪಂಚ

★ **ಡಾ। ಹಾಫಿಝುಬ್ ಸಾಲಿಹ್ ಮುಹಮ್ಮದ್ ಅಲ್ಲಾದೀನ್,** ಪಿ.ಎಚ್.ಡಿ.
ಪ್ರೊಫೆಸರ್, ಖಗೋಳಶಾಸ್ತ್ರ ವಿಭಾಗ, ಉಸ್ಮಾನಿಯಾ ವಿಶ್ವವಿದ್ಯಾಲಯ.

ಪವಿತ್ರ ಖುರ್‌ಆನ್ ದೇವರ ವಚನವಾಗಿದೆ. ವಿಜ್ಞಾನ ಅವನ ಪ್ರವರ್ತನೆ. ದೈವವಚನವನ್ನು ಆಳವಾಗಿ ಗ್ರಹಿಸಲಿಕ್ಕೆ ಅವನ ಪ್ರವರ್ತನೆಯ ಕುರಿತು ನಾವು ತಿಳಿಯಬೇಕು. ಅವನ ಪ್ರವರ್ತನೆಯ ಮಾರ್ಗರೇಖೆಯನ್ನು ತಿಳಿಯಲಿಕ್ಕೆ ನಾವು ಅವನ ವಚನವನ್ನು ಕಲಿಯಬೇಕು. ಪವಿತ್ರ ಖುರ್‌ಆನ್ ವೈಜ್ಞಾನಿಕ ಅಧ್ಯಯನ ಮಾಡುವರೆ ನಮ್ಮನ್ನು ಅಗತ್ಯಪಡಿಸುತ್ತದೆ. ಸ್ಥೂಲ ಪ್ರಪಂಚದ ಕುರಿತು ತಿಳಿದುಕೊಳ್ಳಲಿಕ್ಕೆ ಮಾತ್ರವಲ್ಲ ಪ್ರಪಂಚದ ಸೃಷ್ಟಿಕರ್ತನೊಂದಿಗೆ ನಮ್ಮ ಬಂಧವನ್ನು ಬಲಪಡಿಸಲಿಕ್ಕೂ ವೈಜ್ಞಾನಿಕ ಪಠನ ಅತ್ಯಾವಶ್ಯಕವಾಗಿದೆ. ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

"ಆಕಾಶ ಭೂಮಿಗಳ ಸೃಷ್ಟಿಯಲ್ಲೂ ರಾತ್ರಿ ಹಗಲುಗಳ ಪರ್ಯಾಯದಲ್ಲೂ ಚಿಂತನೆ ಮಾಡುವವರಿಗೆ ಖಂಡಿತವಾಗಿಯೂ ದೃಷ್ಟಾಂತಗಳಿವೆ. ನಿಂತುಕೊಂಡು, ಕುಳಿತುಕೊಂಡು, ಪಾರ್ಶ್ವದಲ್ಲಿ ಮಲಗಿಕೊಂಡು ಅವರು ಅಲ್ಲಾಹನನ್ನು ಸ್ಮರಿಸುತ್ತಾರೆ. ಆಕಾಶ ಭೂಮಿಗಳ ಸೃಷ್ಟಿಯಲ್ಲಿ ಚಿಂತಾಮಗ್ನರಾಗಿ ಅವರು ನುಡಿಯುತ್ತಾರೆ: ನಮ್ಮ ನಾಥಾ! ಇದು ನೀನು ವೃಥಾ ಸೃಷ್ಟಿಸಿಲ್ಲ. ನೀನು ಪರಿಶುದ್ಧನಾಗಿರುವೆ." (3:191–192)

ಈ ದಿವ್ಯ ವಚನಗಳನ್ನು ಸ್ಪರ್ಶಿಸಿಕೊಂಡು ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರು ಹೀಗೆ ಬರೆಯುತ್ತಾರೆ: "ಜ್ಞಾನಿಗಳೂ ಚಿಂತಾಶೀಲರೂ ಭೂಮಿ ಮತ್ತು ಆಕಾಶಗೋಳಗಳ ಸೃಷ್ಟಿಯ ಕುರಿತು ಹಾಗೂ ಹಗಲು–ರಾತ್ರಿಗಳ ಬದಲಾವಣೆಯ ಕುರಿತು ಗಾಢವಾಗಿ ಚಿಂತಿಸುವಾಗ ದೈವಾಸ್ತಿತ್ವದ ಬಗ್ಗೆ ಸ್ಪಷ್ಟ ಸಾಕ್ಷ್ಯಗಳು ಅವರಿಗೆ ಲಭಿಸುತ್ತವೆ. ಹೆಚ್ಚಿನ ವ್ಯಕ್ತ ಅರಿವಿಗಾಗಿ ಅವರು ನಿಂತುಕೊಂಡು, ಕುಳಿತುಕೊಂಡು, ಮಲಗಿಕೊಂಡು ದೈವಿಕ ಸಹಾಯಕ್ಕಾಗಿ ಪ್ರಾರ್ಥಿಸುತ್ತಾರೆ. ಇದು ಅವರ ಊಹನೆಗಳನ್ನು ಬಲಪಡಿಸುತ್ತದೆ. ಆಕಾಶ ಭೂಮಿಗಳ ಪರಿಪೂರ್ಣವೂ ಅನೂನವೂ ಆದ ಸೃಷ್ಟಿವೈಭವದ ಕುರಿತು ಅವರು ಹಾಗೆ ಚಿಂತನೆ ಮಾಡುವಾಗ ಅವುಗಳ ಸೃಷ್ಟಿಕರ್ತನ ಪ್ರಭಾಪೋಜ್ವಲವಾದ ಮುಖವನ್ನು ಅವರು ದರ್ಶಿಸುತ್ತಾರೆ."

## ವಿಜ್ಞಾನ ಯುಗಾರಂಭ

ಹದಿನಾಲ್ಕು ಶತಮಾನಗಳಿಗೆ ಮೊದಲು ಪವಿತ್ರ ಖುರ್‌ಆನ್ ಅವತೀರ್ಣಗೊಳ್ಳುವಾಗ ಲೋಕವು ಅಜ್ಞಾನದಿಂದ ತುಂಬಿತ್ತು. ಸರ್ವಶಕ್ತನಾದ ದೇವನು ಪೈಗಂಬರರಿಗೆ ತಿಳಿಸಿದನು: "ಜ್ಞಾನ ವಿಜ್ಞಾನದ ಒಂದು ಯುಗದ ಹುಟ್ಟು ಸಮೀಪಿಸಿದೆ." ಅವರಿಗೆ ಲಭಿಸಿದ ಮೊದಲ ದಿವ್ಯ ಪ್ರಕಟನೆಯಲ್ಲೇ ಈ ಯುಗಾರಂಭದ ಕುರಿತು ಭವಿಷ್ಯನುಡಿ ಅಡಕವಾಗಿದೆ. ಅದು ಹೀಗಿತ್ತು: "ಮನುಷ್ಯನನ್ನು ರಕ್ತಪಿಂಡದಿಂದ ಸೃಷ್ಟಿಸಿದ ದೇವ ನಾಮದಲ್ಲಿ ನೀನು ಓದು. ನಿನ್ನ ನಾಥ ಅತ್ಯಂತ ಆದರಣೀಯನು, ಮನುಷ್ಯನಿಗೆ ಅವನು ಲೇಖನಿಯಿಂದ ಬರೆಯಲು ಕಲಿಸಿದನು. ಅವನಿಗೆ ತಿಳಿಯದಿದ್ದುದನ್ನು ಅವನು ಕಲಿಸಿದನು". (96:2–6).

ಹಾಗೆ ಪವಿತ್ರ ಖುರ್‌ಆನಿನ ಅವತರಣದಿಂದ ವಿಜ್ಞಾನದ ಹುಟ್ಟು ಆರಂಭವಾಯಿತೆಂದೂ ಲೇಖನಿಯಿಂದ ವಿದ್ಯಾಭ್ಯಾಸದ ಮಾರ್ಗ ತೆರೆಯಲ್ಪಟ್ಟಿತ್ತೆಂದೂ ಘೋಷಿಸಲ್ಪಟ್ಟಿತು. ಅದು ದೈವಿಕ ಘೋಷಣೆಯಾಗಿತ್ತು.

ವಿಜ್ಞಾನ ಮತ್ತು ತಾಂತ್ರಿಕ ವಿದ್ಯೆಯ ಉಗಮದ ಕುರಿತು ಖುರ್‌ಆನಿನಲ್ಲಿ ಹೇಳಲಾಗಿದೆ. ವಿಜ್ಞಾನ ಮತ್ತು ತಾಂತ್ರಿಕ ವಿದ್ಯೆಯು ಈ ಓಟದಲ್ಲಿ ಸಂಚಾರ-ಸಾರಿಗಾ ಮಾಧ್ಯಮವಾಗಿದ್ದ ಒಂಟೆ ತ್ಯಜಿಸಲ್ಪಡುವ

ಒಂದು ಕಾಲಘಟ್ಟದ ಕುರಿತು ಖುರ್‌ಆನ್ ನುಡಿದಿದೆ. ಈ ಕಾಲದಲ್ಲೇ ದೂರವ್ಯಾಪಕವಾದ ಪರಿಣಾಮಗಳನ್ನು ಸೃಷ್ಟಿಸಿಕೊಂಡು ಖಗೋಳ ಶಾಸ್ತ್ರ ವಿಕಾಸಗೊಳ್ಳುವುದು; ಆಕಾಶದ ಪದರು ನೀಗಿಸಲ್ಪಡುವುದು; ಆಕಾಶದ ಅತಿ ನಿಗೂಢವಾದ ರಹಸ್ಯಗಳು ಬಹಿರಂಗಗೊಳ್ಳುವುವು ಎಂದು ಸಹ ಖುರ್‌ಆನ್ ಹೇಳಿದೆ.

ಪವಿತ್ರ ಖುರ್‌ಆನಿನಲ್ಲಿ ಈ ಕಾಲಘಟ್ಟ ಮಹನೀಯನಾದ ಓರ್ವ ಆಧ್ಯಾತ್ಮಿಕ ಸುಧಾರಕನ ಕಾಲವಾಗಿರುವುದೆಂಬ ಸೂಚನೆ ಇದೆ. ಆ ಮಹಾತ್ಮನ ಮೂಲಕ ಇಸ್ಲಾಮಿಗುಂಟಾದ ಧಾರ್ಮಿಕ ಅಧಃಪತನ ಪರಿಹರಿಸಲ್ಪಡುವುದೆಂದೂ ಇಸ್ಲಾಮಿಗೆ ಮಹತ್ತರವೂ ಶೋಭಾಯಮಾನವೂ ಆದ ಒಂದು ಭವಿಷ್ಯದ ಉದಯ ಉಂಟಾಗುವುದೆಂದೂ ಇಲ್ಲಿ ಭವಿಷ್ಯ ನುಡಿಯಲಾಗಿದೆ.

ಪವಿತ್ರ ಖುರ್‌ಆನಿನ ಆರಂಭ ವಚನವನ್ನು ಗಮನಿಸಿರಿ: "ಅಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್"- ಸರ್ವಲೋಕಗಳ ನಾಥನಾದ ಪರಮಾತ್ಮನಿಗೆ ಸರ್ವ ಸ್ತುತಿಗಳು – ಎಂದು ಇಲ್ಲಿ ಹೇಳಲಾಗಿದೆ. 'ಆಲಮೀನ್' ಅಥವಾ ಸರ್ವಲೋಕಗಳು ಎಂಬ ಪದ ಪ್ರಯೋಗದ ಮೂಲಕ ಪವಿತ್ರ ಖುರ್‌ಆನ್ ಸೃಷ್ಟಿಗಳ ಆಧಿಕ್ಯವನ್ನೂ ವೈವಿಧ್ಯವನ್ನೂ ಸೂಚಿಸಿದೆ. ಇಂದಾದರೆ, ಖಗೋಳ ಶಾಸ್ತ್ರದ ಅಭೂತಪೂರ್ವ ಪ್ರಗತಿ ಖುರ್‌ಆನಿನ ಈ ಪ್ರಸ್ತಾವನೆಗೆ ಸಾಕ್ಷಿಯಾಗಿದೆ.

### ಕೊಪರ್ನಿಕಸನ ಸಿದ್ಧಾಂತ

ಪವಿತ್ರ ಖುರ್‌ಆನಿನ ಆವಿರ್ಭಾವ ಕಾಲದಲ್ಲಿ ಪ್ರಪಂಚದ ಕುರಿತು ಮನುಷ್ಯನ ತಿಳಿವಳಿಕೆ ಮತ್ತು ಇಂದಿನ ತಿಳಿವಳಿಕೆಗೆ ಆಕಾಶ-ಭೂಮಿಯ ಅಂತರವಿದೆ. ಪ್ರಪಂಚದ ಕೇಂದ್ರ ಭೂಮಿಯಾಗಿದೆಯೆಂದೂ ವಿಶಾಲವಾದ ಒಂದು ಗೋಳದೊಳಗೆ ನಕ್ಷತ್ರಗಳು ತೂಗುತ್ತಿವೆಯೆಂದೂ ನಕ್ಷತ್ರಗಳ ಸಮೇತ ಈ ಗೋಳ ತಿರುಗುತ್ತಿದೆಯೆಂದೂ ಭೂಮಿಗೂ ನಕ್ಷತ್ರಗಳಿಗೂ ಮಧ್ಯೆ ಸೂರ್ಯ, ಚಂದ್ರ ಮತ್ತು ಪಂಚಗ್ರಹಗಳು (ಬುಧ, ಶುಕ್ರ, ಮಂಗಳ, ಗುರು ಮತ್ತು ಶನಿ) ಭ್ರಮಣ ಮಾಡುತ್ತಿವೆಯೆಂದೂ ಭಾವಿಸಲಾಗಿತ್ತು. ಖುರ್‌ಆನ್ ಅವತೀರ್ಣಗೊಳ್ಳುವ ಮೊದಲು ಪ್ರಚಲಿತವಾಗಿದ್ದ ಈ ಊಹೆ ಖುರ್‌ಆನ್ ಆವಿರ್ಭವಿಸಿದ ನಂತರ ಸಹ ಖುರ್‌ಆನಿನ ಪ್ರಕಾಶ ಪಡೆಯದ ಸ್ಥಳಗಳಲ್ಲಿ ನೆಲೆಗೊಂಡಿತ್ತು. ಪ್ರಪಂಚಕ್ಕೆ ಸಂಬಂಧಿಸಿದ ಪುರಾತನ ಊಹೆ ಭೂಮಿ ನಿಶ್ಚಲವೆಂದಾಗಿತ್ತು. ಕ್ರಿಸ್ತ ಪೂರ್ವ ಆರನೆಯ ಶತಕದಲ್ಲಿ ಗ್ರೀಕ್ ಪಂಡಿತರು ಭೂಮಿಯನ್ನು ಪ್ರಪಂಚದ ಮಧ್ಯದಲ್ಲಿ ನಿಶ್ಚಲವಾಗಿ ನಿಂತಿರುವ ಒಂದು ಗೋಳವೆಂದು ಗಣಿಸಿದ್ದರು. 1543ರಲ್ಲಿ ಕೊಪರ್ನಿಕಸ್ ತನ್ನ ಕ್ರಾಂತಿಕಾರಿ ಸಿದ್ಧಾಂತವನ್ನು ಬಹಿರಂಗಗೊಳಿಸಿದನು. ಸೂರ್ಯನು ಭೂಮಿಯನ್ನು ಸುತ್ತುವುದಿಲ್ಲ, ಭೂಮಿ ಸೂರ್ಯನನ್ನು ಸುತ್ತುತ್ತದೆಯೆಂದೂ ಹಾಗೆಯೇ ಬಾಕಿ ನಕ್ಷತ್ರಗಳು ಸಹ ಸೂರ್ಯನಿಗೆ ಸುತ್ತು ಬರುತ್ತವೆಯೆಂದೂ ಆತನು ಸಮರ್ಥಿಸಿದನು. ಕೊಪರ್ನಿಕಸನ ಈ ಸಿದ್ಧಾಂತ ಹಲವು ಕಾಲದ ವರೆಗೆ ಅತಿ ತೀವ್ರ ವಿರೋಧಕ್ಕೆ ಗುರಿಯಾಯಿತು. ಆದರೆ ನಂತರ ಉಂಟಾದ ಸಂಶೋಧನೆಗಳು ಆ ಮಹಾ ವಿಜ್ಞಾನಿಯ ತತ್ವವನ್ನು ರುಜುಪಡಿಸಿದುವು. ನೆಪ್ಚೂನ್, ಪ್ಲೂಟೋ, ಯುರೇನಸ್ ಎಂಬೀ ಗ್ರಹಗಳು ಮಾತ್ರವಲ್ಲ ಆಸ್ಟರೋಯ್ಡ್ಸ್ (Asteriods) ಎಂದು ಕರೆಯಲ್ಪಡುವ ಅಸಂಖ್ಯಾತ ಕಿರುಭೂಮಿಗಳು ಸಹ ಸೂರ್ಯನಿಗೆ ಪ್ರದಕ್ಷಿಣೆ ಬರುತ್ತವೆಯೆಂದು ನಾವೀಗ ತಿಳಿದುಕೊಂಡಿದ್ದೇವೆ. ಇವುಗಳಲ್ಲದೆ ಕೆಲವು ಬಾರಿ ದೂರದರ್ಶಕದ ಸಹಾಯವಿಲ್ಲದೆಯೂ ಗೋಚರವಾಗುವ ಧೂಮಕೇತುಗಳು ಸಹ ಸೂರ್ಯನನ್ನು ಸುತ್ತುತ್ತವೆ. ಇವನ್ನೆಲ್ಲಾ ಸೂರ್ಯನ ಕುಟುಂಬ ಅಥವಾ ಸೌರವ್ಯೂಹವೆಂದು ನಾವು ಕರೆಯುತ್ತೇವೆ. ಈ ಸೂರ್ಯ-ನಕ್ಷತ್ರಗಳನ್ನು ಲೋಕದ ಜನರಿಗೆ ಹಂಚಿದರೆ ಒಬ್ಬೊಬ್ಬನಿಗೆ ಇಪ್ಪತ್ತರ ಪ್ರಕಾರವಾದರೂ ಸಿಗಬಹುದು.

### ಅಸಂಖ್ಯಾತ ನಕ್ಷತ್ರ ಪುಂಜ

ಪವಿತ್ರ ಖುರ್‌ಆನ್ ಹೇಳುತ್ತದೆ: "ಏಳು ಆಕಾಶಗಳನ್ನು ಸೃಷ್ಟಿದವನಾಗಿದ್ದಾನೆ ಅಲ್ಲಾಹು. ಹಾಗೆಯೇ ಭೂಮಿಯನ್ನು ಸಹ" (65:13). ಅರಬಿ ಭಾಷಾಶೈಲಿಯಲ್ಲಿ ಏಳು ಎಂಬ ಅಂಕೆ ಅನೇಕವನ್ನು ಪ್ರತಿಬಿಂಬಿಸುತ್ತದೆ. ಖುರ್‌ಆನಿನಲ್ಲಿ ಇನ್ನೊಂದೆಡೆ ಹೀಗಿದೆ: "ಭೂಮಿಯಲ್ಲಿರುವ ವೃಕ್ಷಗಳನ್ನೆಲ್ಲಾ ಲೇಖನಿಗಳನ್ನಾಗಿ ಮತ್ತು ಸಪ್ತ ಸಮುದ್ರಗಳನ್ನು ಶಾಯಿಯನ್ನಾಗಿ ಮಾಡಿದರೂ ಅಲ್ಲಾಹುವಿನ ದೃಷ್ಟಾಂತಗಳನ್ನು ಬರೆದು ಕೊನೆಗೊಳಿಸುವುದು ಅಸಾಧ್ಯ. ದಿಟವಾಗಿಯೂ ಅಲ್ಲಾಹು ಪ್ರತಾಪಶಾಲಿಯೂ ಅಗಾಧಜ್ಞನೂ ಆಗಿದ್ದಾನೆ" (31:28).

ಖುರ್‌ಆನ್ ಏಳು ಎಂದು ಹೇಳಿದ್ದು ಅಸಂಖ್ಯಾತವನ್ನು ಸೂಚಿಸುವ ಶೈಲಿಯಾಗಿದೆ. ಖಗೋಳಶಾಸ್ತ್ರ ಸಿದ್ಧಿಸಿದ ದೊಡ್ಡ ಪ್ರಗತಿಯು ಪವಿತ್ರ ಖುರ್‌ಆನಿನ ವಚನಗಳಿಗೆ ಹೆಚ್ಚಿನ ಬೆಲೆ ಕಲ್ಪಿಸಲು ಸಹಾಯಕವಾಗಿದೆ. ದೈವಸೃಷ್ಟಿಯ ಸಂಖ್ಯಾತೀತವಾದ ವಿಪುಲತೆಯನ್ನು ಅದು ನಮಗೆ ತಿಳಿಸಿಕೊಡುತ್ತದೆ. ಹಿಂದೆ ಚಂದ್ರ ಮತ್ತು ಗ್ರಹಗಳನ್ನು ಭೂಮಿಯಿಂದ ಬಹಳ ವಿಭಿನ್ನ ಗೋಳಗಳೆಂದು ಭಾವಿಸಲಾಗಿತ್ತು. ಆದರೆ, ಇತರ ಗ್ರಹಗಳು ಸಹ ಭೂಮಿಯಂತೆಯೇ ಸೌರವ್ಯೂಹದ ಅಂಶಗಳೆಂದು ನಮಗೆ ಇಂದು ಗೊತ್ತಿದೆ. ಮಾನವನು 1969ರಲ್ಲಿ ಚಂದ್ರನಲ್ಲಿ ಪದಾರ್ಪಣೆ ಮಾಡಿದನು. ಅವನ ಪರೀಕ್ಷಣಾಲಯದ ವಿಕ್ಷೇಪ ಮಂಗಳ ಗ್ರಹದ ತಲವನ್ನು ಇಂದು ಸ್ಪರ್ಶಿಸಿದೆ.

"ಭೂಮಿ ವಿಸ್ತಾರಗೊಳಿಸಲ್ಪಡುವಾಗ" (84:4) ಎಂಬ ಖುರ್‌ಆನಿನ ಭವಿಷ್ಯನುಡಿ ಗಮನಾರ್ಹವಾದ ರೀತಿಯಲ್ಲಿ ಪೂರ್ತಿಗೊಂಡಿದೆ. ಸೂರ್ಯನು ಅಸಂಖ್ಯಾತ ನಕ್ಷತ್ರ ಪುಂಜದ ಒಂದು ಅಂಗ ಮಾತ್ರವೆಂದು ಇಂದು ನಾವು ತಿಳಿದುಕೊಂಡಿದ್ದೇವೆ. ಸೂರ್ಯನು 864 ಸಾವಿರ ಮೈಲು ವ್ಯಾಸವುಳ್ಳ, ಅತಿ ಕಠಿಣ ಉಷ್ಣದಿಂದ ಕೂಡಿದ ಒಂದು ಗೋಳವೆಂದೂ ಭೂಮಿಯ ಮೂರು ಲಕ್ಷ ಪಾಲು ಭಾರ ಅದಕ್ಕಿದೆಯೆಂದೂ ಆಧುನಿಕ ವಿಜ್ಞಾನ ಹೇಳುತ್ತದೆ. ಕೆಲವು ನಕ್ಷತ್ರಗಳು ಸೂರ್ಯನಿಗಿಂತ ಬಹಳ ದೊಡ್ಡದಾಗಿವೆ. ಇತರ ಕೆಲವು ಸೂರ್ಯನಿಗಿಂತ ಬಹಳ ಚಿಕ್ಕವು. ಹಲವು ಬಣ್ಣಗಳ ನಕ್ಷತ್ರಗಳಿವೆ. ನೀಲ ಬಣ್ಣದ ನಕ್ಷತ್ರಗಳು ಸೂರ್ಯನಿಗಿಂತ ಹೆಚ್ಚು ಉಷ್ಣವನ್ನು ಹೊಂದಿವೆ. ಕೆಂಪು ಬಣ್ಣದವುಗಳಿಗೆ ಕಡಿಮೆ ಉಷ್ಣ. ನಕ್ಷತ್ರಗಳು ಮಾರ್ಪಾಟಿಗೆ ಗುರಿಯಾಗುತ್ತಿವೆ. ನಮ್ಮ ಕ್ಷೀರಪಥ ಹತ್ತು ಸಾವಿರ ಕೋಟಿ ನಕ್ಷತ್ರಗಳನ್ನು ಒಳಗೊಂಡಿದೆ. ಇದು ಅತಿ ವಿಸ್ತಾರವಾದ ಒಂದು ನಕ್ಷತ್ರ ಶೃಂಖಲೆಯಾಗಿದೆ. ಈ ಕ್ಷೀರಪಥದ ಒಂದು ತುದಿಯಿಂದ ಇನ್ನೊಂದು ತುದಿಗೆ ಬೆಳಕು ತಲಪಬೇಕಾದರೆ ಸುಮಾರು ಒಂದು ಲಕ್ಷ ವರ್ಷ ಬೇಕಾಗಿದೆ. ಬೆಳಕು ಒಂದು ಸೆಕಂಡಿಗೆ 1,86,000 ಮೈಲು ವೇಗದಲ್ಲಿ ಸಂಚರಿಸುತ್ತದೆ. ಕ್ಷೀರಪಥದ ಕೇಂದ್ರದಿಂದ ನಮ್ಮ ಸೂರ್ಯನಿಗಿರುವ ದೂರ 30 ಸಾವಿರ ದೀಪ್ತಿವರ್ಷಗಳಾಗಿವೆ. ಈ ಎಲ್ಲಾ ನಕ್ಷತ್ರಗಳು ಒಂದು ಕ್ರಮದಲ್ಲಿ ಕ್ಷೀರಪಥದ ಕೇಂದ್ರಕ್ಕೆ ಸುತ್ತು ಬರಲು 20 ಕೋಟಿ ವರ್ಷಗಳು ತಗಲುತ್ತವೆ. ಆಲ್ಬರ್ಟ್ ಐನ್‌ಸ್ಟೈನ್ ಪ್ರಪಂಚದ ಕುರಿತು ಹೇಳಿದ್ದು ಗಮನಾರ್ಹವಾಗಿದೆ: "ಮನುಷ್ಯನ ಕಣ್ಣುಗಳು ಪ್ರಪಂಚವನ್ನು ನಿರೀಕ್ಷಿಸಲು ಅಶಕ್ತವಾಗಿವೆ. ಪ್ರಪಂಚದ ಮುಂದೆ ನಾವು, ಒಂದು ಬೃಹತ್ ಲೈಬ್ರರಿಯೊಳಗೆ ಪ್ರವೇಶಿಸಿದ ಮಗುವಿನಂತೆ. ಗೋಡೆಗಳು ವಿವಿಧ ಭಾಷೆಯ ಪುಸ್ತಕಗಳಿಂದ ಮರೆಯಾಗಿವೆ. ಇದು ಹೇಗೆ ಆಯಿತೆಂದೂ ಯಾರು ಮಾಡಿದರೆಂದೂ ತಿಳಿಯದು. ಈ ಪುಸ್ತಕಗಳು ಯಾವ ಭಾಷೆಯಲ್ಲಿ ಬರೆದದ್ದೆಂದು ಸಹ ತಿಳಿಯುವುದಿಲ್ಲ. ಆದರೆ ಮಗು ಈ ಗ್ರಂಥಗಳ ಕ್ರಮೀಕರಣದಲ್ಲಿ ಸ್ಪಷ್ಟ ಕ್ರಮಬದ್ಧತೆಯನ್ನೂ ವಿಸ್ಮಯತೆಯನ್ನೂ ದರ್ಶಿಸುತ್ತದೆ. ಆದರೆ ಅದು ಹೇಗೆಂದು ಆ ಮಗುವಿಗೆ ಗೊತ್ತಾಗಲಾರದು; ಸಣ್ಣ ಪ್ರಮಾಣದಲ್ಲಿ ಊಹಿಸಲು ಮಾತ್ರ ಸಾಧ್ಯವಾಗುವುದು."

### ಗುರುತ್ವಾಕರ್ಷಣ ಸಿದ್ಧಾಂತ

ಕ್ಷೀರಪಥದ ನಕ್ಷತ್ರಗಳು ಮತ್ತು ಸೌರವ್ಯೂಹದ ಗ್ರಹಗಳು ಎಲ್ಲಾ ಗುರುತ್ವಾಕರ್ಷಣ ಸಿದ್ಧಾಂತಕ್ಕೆ ಅನುಸಾರವಾಗಿ ಚಲಿಸುತ್ತವೆ. ಒಂದು ಸೇಬು ಮರದಿಂದ ನೆಲಕ್ಕೆ ಬೀಳಲು ಕಾರಣವಾದ ಆಕರ್ಷಣ ಶಕ್ತಿಯೇ ಭೂಮಿಗೆ ಚಂದ್ರನು ಸುತ್ತು ಬರುವಂತೆ ಮಾಡುತ್ತದೆಯೆಂದು ನ್ಯೂಟನ್ ಕಂಡು ಹಿಡಿದನು ಹಾಗೆ ದೇವನ ಸೃಷ್ಟಿಯಲ್ಲಿ ಅತಿ ಮಹತ್ತಾದ ಮತ್ತು ಮನೋಜ್ಞವಾದ ಒಂದು ಐಕ್ಯ ಮತ್ತು ತಾಳಬದ್ಧತೆಯನ್ನು ನಾವು ಕಾಣುತ್ತೇವೆ. ಖುರ್‌ಆನಿನ ಐವತ್ತೈದನೆಯ ಅಧ್ಯಾಯದಲ್ಲಿ ಸೂರ್ಯನನ್ನೂ ಚಂದ್ರನನ್ನೂ ಗಿಡ ಮರಗಳನ್ನೂ, ಆಕಾಶವನ್ನೂ ಒಂದು ವಿಶಿಷ್ಟ ಪಥದಲ್ಲಿ ಒಟ್ಟುಗೂಡಿಸುವ ಮೂಲಕ ಅತಿ ಪ್ರಧಾನವಾದ ಈ ಸತ್ಯವನ್ನು ಅದು ಘೋಷಿಸುತ್ತದೆ. ಖುರ್‌ಆನ್ ಹೀಗೆ ಹೇಳುತ್ತದೆ:

"ಸೂರ್ಯ ಮತ್ತು ಚಂದ್ರ ಅವುಗಳ ಮಾರ್ಗಗಳಲ್ಲಿ ಒಂದು ನಿರ್ದಿಷ್ಟ ಪರಿಧಿಯಲ್ಲಿ ಸಂಚರಿಸುತ್ತವೆ. ಗಿಡ ಮರಗಳು ಅವನ ಇಚ್ಛೆಗೆ ವಿಧೇಯವಾಗಿವೆ. ಆಕಾಶವನ್ನು ಅವನು ಉನ್ನತಗೊಳಿಸಿದ್ದಾನೆ. ನಿಮಗೂ ಒಂದು ಪರಿಧಿಯನ್ನು ಅವನು ನಿಶ್ಚಯಿಸಿದ್ದಾನೆ– ನೀವು ಸೀಮೋಲ್ಲಂಘನೆ ಮಾಡದಿರಲಿಕ್ಕೆ (55:6-9).

ಮತ್ತೂ ಆ ಗ್ರಂಥ ಹೀಗೆ ಹೇಳುತ್ತದೆ:

"ಸೂರ್ಯ ಒಂದು ನಿರ್ದಿಷ್ಟ ಪಥದಲ್ಲಿ ಚಲಿಸುತ್ತದೆ. ಅದು ಪ್ರತಾಪಶಾಲಿಯೂ ಸರ್ವಜ್ಞನೂ ಆದ ಅಲ್ಲಾಹುವಿನ ನಿರ್ಣಯವಾಗಿದೆ." (36:39)

## ಸೃಷ್ಟಿಯ ಸೊಬಗು

ಖುರ್‌ಆನಿಕ ವಚನಗಳ ಈ ಮನೋಹರತೆಯನ್ನು ಚೆನ್ನಾಗಿ ಆಸ್ವಾದಿಸಲಿಕ್ಕೆ ಖಗೋಳಶಾಸ್ತ್ರ ನಮಗೆ ನೀಡಿದ ಪರಿಜ್ಞಾನ ಬಹಳ ಸಹಾಯಕವಾಗಿದೆ. ಅಲ್ಲಾಹು ಅವನ ಸೃಷ್ಟಿಕರ್ಮಗಳಲ್ಲಿ ಕೆಲವು ನಿಯಮಗಳನ್ನು ಪಾಲಿಸಿರುವನೆಂಬ ವಾಸ್ತವಾಂಶದೆಡೆಗೆ ನಮ್ಮ ಗಮನವನ್ನು ಸೆಳೆದುಕೊಂಡು ಆ ದೈವಿಕ ಮಾದರಿಯನ್ನು ನಮ್ಮ ಸಾಮೂಹಿಕ ವ್ಯವಹಾರಗಳಲ್ಲಿ ಸಹ ಪಾಲಿಸಲಿಕ್ಕೆ ಅದು ಬೋಧಿಸುತ್ತದೆ. ಇನ್ನೊಂದೆಡೆಯಲ್ಲಿ ದೇವರ ಸೃಷ್ಟಿ ವೈಭವದ ಕುರಿತು ಖುರ್‌ಆನ್ ಹೀಗೆ ಹೇಳುತ್ತದೆ:

"ಯಾರ ಕೈಯಲ್ಲಿ ರಾಜಾಧಿಕಾರ ಮತ್ತು ಎಲ್ಲಾ ಕಾರ್ಯಗಳ ಮೇಲಧಿಕಾರ ಇದೆಯೋ ಅವನು ಅನುಗ್ರಹೀತನಾಗಿದ್ದಾನೆ. ಕರ್ಮಗಳಲ್ಲಿ ನಿಮ್ಮಲ್ಲಿ ಯಾರು ಉತ್ತಮರೆಂದು ಪರೀಕ್ಷಿಸಲಿಕ್ಕಾಗಿ ಅವನು ಮರಣವನ್ನೂ ಜೀವಿತವನ್ನೂ ಸೃಷ್ಟಿಸಿದ್ದಾನೆ. ಅವನು ಪ್ರತಾಪಶಾಲಿಯೂ ಅತ್ಯಂತ ಕ್ಷಮಾಶೀಲನೂ ಆಗಿದ್ದಾನೆ. ಅವನು ಏಳು ಆಕಾಶಗಳನ್ನು ಕ್ರಮಬದ್ಧವಾಗಿ ಸೃಷ್ಟಿಸಿದ್ದಾನೆ. ಕೃಪಾನಿಧಿಯಾದ ದೇವನ ಸೃಷ್ಟಿಯಲ್ಲಿ ನಿನಗೆ ಯಾವ ಕುಂದನ್ನೂ ಕಾಣಲು ಸಾಧ್ಯವಿಲ್ಲ. ಚೆನ್ನಾಗಿ ನಿರೀಕ್ಷಿಸು ಏನಾದರೂ ಕುಂದು ಎಲ್ಲಿಯಾದರೂ ಕಾಣುತ್ತದೆಯೇ? ಇನ್ನೂ ನಿರೀಕ್ಷಿಸು. ನಿರೀಕ್ಷಣೆಯನ್ನು ಮುಂದುವರಿಸಿಕೊಂಡೇ ಇರು. ನಿನ್ನ ದೃಷ್ಟಿ ಬಸವಳಿದು ನಿನ್ನತ್ತವೇ ಮರಳುವುದು" (67:2–5).

ಇನ್ನೊಂದು ವಚನದಲ್ಲಿ ಅತ್ಯುತ್ಕೃಷ್ಟವಾದ ಪ್ರಪಂಚದ ರೂಪ ಮಾದರಿಯನ್ನು ಪವಿತ್ರ ಖುರ್‌ಆನ್ ವಿವರಿಸುವುದು ಈ ರೀತಿಯಾಗಿದೆ:

"ಸೂರ್ಯನಿಗೆ ಚಂದ್ರನ ಬೆನ್ನು ಹಿಡಿಯಲು ಸಾಧ್ಯವಿಲ್ಲ. ರಾತ್ರಿಗೆ ಹಗಲನ್ನು ಹಿಂದೆ ಹಾಕಲು ಸಾಧ್ಯವಿಲ್ಲ. ಅವೆಲ್ಲಾ ಒಂದು ಸಂಚಾರ ಪಥದಲ್ಲಿ ನಿರಾತಂಕವಾಗಿ ಸಾಗುತ್ತಿವೆ." (36:41).

ನಿರಾಂತಕವಾಗಿ ಸಾಗುತ್ತಿವೆಯೆಂಬ ಪದ ಪ್ರಯೋಗ ಆಕಾಶಗೋಳಗಳು ಚಲಿಸುತ್ತಿವೆ ಎಂಬುದನ್ನು ಸೂಚಿಸುವ ವಿಶೇಷ ಪ್ರಯೋಗವಾಗಿದೆ. ಆಕಾಶ ಗೋಳಗಳ ಚಲನೆಯ ಕುರಿತು ಅಧ್ಯಯನ ಮಾಡಲು ಪವಿತ್ರ ಖುರ್‌ಆನ್ ನಮ್ಮನ್ನು ಪ್ರೋತ್ಸಾಹಿಸುತ್ತದೆ. ಗಣಿತ ಶಾಸ್ತ್ರದ ತತ್ವಗಳನ್ನು ರೂಪಿಸಲಿಕ್ಕೂ ಅದು ನಮ್ಮನ್ನು ಆಹ್ವಾನಿಸುತ್ತದೆ. ಖುರ್‌ಆನ್ ಹೀಗೆ ಹೇಳುತ್ತದೆ:

"ಅವನು ಸೂರ್ಯನ ಮೂಲಕ ಜಾಜ್ವಲ್ಯಮಾನವಾದ ಪ್ರಕಾಶ ಪಸರಿಸುವಂತೆ ಹಾಗೂ ಚಂದ್ರನ ಮೂಲಕ ಬೆಳಕು ಪ್ರತಿಫಲಿಸುವಂತೆ ಮಾಡಿರುವನು. ಚಂದ್ರನಿಗೆ ವಿವಿಧ ಅವಸ್ಥೆಗಳನ್ನು ನಿಶ್ಚಯಿಸಿ ವರ್ಷಗಳನ್ನೂ ಗಣಿತ ಶಾಸ್ತ್ರ ತತ್ವಗಳನ್ನೂ ತಿಳಿಯುವಂತೆ ಮಾಡಿರುವನು. ಅಲ್ಲಾಹು ಇವನ್ನೆಲ್ಲಾ ಸತ್ಯಾಧಿಷ್ಠಿತ ವಿನಾ ಸೃಷ್ಟಿಸಿಲ್ಲ. ತಿಳಿವಳಿಕೆಯುಳ್ಳ ಜನರಿಗೆ ಅವನು ದೃಷ್ಟಾಂತಗಳನ್ನು ವಿವರಿಸಿಕೊಡುತ್ತಾನೆ" (10:6).

## ಬಾಹ್ಯಾಕಾಶದ ಬಗ್ಗೆ ಖುರ್‌ಆನಿನಲ್ಲಿ

ಖುರ್‌ಆನ್ ಹಲವೆಡೆಗಳಲ್ಲಿ ಬಾಹ್ಯಾಕಾಶದ ಕುರಿತು ನಮ್ಮ ಗಮನವನ್ನು ಆಕರ್ಷಿಸುತ್ತದೆ. ಅದು ಹೀಗೆ ಹೇಳುತ್ತದೆ:

"ಅಲ್ಲಾಹು ಆಕಾಶಗಳನ್ನು ನೀವು ಕಾಣುವಂಥ ಕಂಬಗಳ ವಿನಾ ಉನ್ನತಗೊಳಿಸಿರುವನು" (13:3).

"ಆಕಾಶಗಳನ್ನು ಅವನು ಉನ್ನತ ಮಾಡಿರುವನು; ಒಂದು ಮಿತಿಯನ್ನೂ ನಿರ್ಣಯಿಸಿರುವನು" (55:8)

"ನಿಮ್ಮನ್ನು ಸೃಷ್ಟಿಸಲಿಕ್ಕೆ ಹೆಚ್ಚು ಕಷ್ಟವೋ ಅಥವಾ ಅವನು ಸೃಷ್ಟಿಸಿದ ಆಕಾಶವನ್ನೋ! ಅವನು ಅದರ ಎತ್ತರವನ್ನು ಅತ್ಯಧಿಕಗೊಳಿಸಿರುವನು ಮತ್ತು ಪರಿಪೂರ್ಣಗೊಳಿಸಿರುವನು" (79 : 28, 29).

"ಆಧುನಿಕ ಖಗೋಳಶಾಸ್ತ್ರ ನಿರೀಕ್ಷಣೆಗಳು ಖುರ್‌ಆನಿನ ವಾಕ್ಯಗಳ ಕುರಿತು ಅಗಾಧವೂ ಅನುಕೂಲಕರವೂ ಆದ ಭಾವನೆಯನ್ನು ನಮ್ಮಲ್ಲಿ ಉಂಟುಮಾಡುತ್ತವೆ.

## ಇತರ ಗ್ರಹಗಳಲ್ಲೂ ಜೀವ ಸ್ಪಂದನ

ಪವಿತ್ರ ಖುರ್‌ಆನ್ ಹೇಳುತ್ತದೆ: "ಆಕಾಶ ಭೂಮಿಗಳಲ್ಲಿ ಇರುವ ಸರ್ವವೂ ಅವನನ್ನು ಸ್ತುತಿಸುತ್ತವೆ. ಅವನು ಪ್ರಭಾವಶಾಲಿಯೂ ಅಗಾಧಜ್ಞಾನಿಯೂ ಆಗಿದ್ದಾನೆ (59:25).

ಈ ವಚನವನ್ನು ಸ್ಪರ್ಶಿಸುತ್ತಾ ವಾಗ್ದತ್ತ ಮಸೀಹ್ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರು ಹೀಗೆ ಬರೆದಿರುವರು: "ಆಕಾಶಗೋಳಗಳ ನಿವಾಸಿಗಳು ಅವನ ಪವಿತ್ರತೆಯನ್ನೂ ಮಹತ್ವವನ್ನೂ ಭೂಮಿಯ ನಿವಾಸಿಗಳೊಂದಿಗೆ ಸ್ತುತಿಸುತ್ತಾರೆ. ಈ ವಚನವು ಇತರ ಗೋಳಗಳಲ್ಲೂ ಜೀವಿಗಳಿರಬಹುದೆಂಬುದನ್ನು ಸೂಚಿಸುತ್ತದೆ. ಅಂತೆಯೇ ಆ ಗೋಳ ನಿವಾಸಿಗಳು ದೈವಿಕ ಮಾರ್ಗದರ್ಶನವನ್ನು ಅನುಸರಿಸುವವರೆಂದು ಸಹ ಸೂಚನೆ ಇದೆ.

ಪವಿತ್ರ ಖುರ್‌ಆನ್ ಹೇಳುತ್ತದೆ: "ಆಕಾಶಗಳಲ್ಲೂ ಭೂಮಿಯಲ್ಲೂ ಇರುವವರು ಅವನೊಡನೆ ಬೇಡುತ್ತಾರೆ." (55:30)

ಮನುಷ್ಯನ ಚಿಂತನೆಗೆ ಅತೀತವಾದ ವೈಜ್ಞಾನಿಕ ತಥ್ಯಗಳು ಇನ್ನೂ ಚಿಗುರೊಡೆಯುವುದಷ್ಟೇ. ಆದರೆ ಪ್ರಪಂಚದ ವಿಸ್ಮಯಕಾರಿ ಅಂಶಗಳು ಪವಿತ್ರ ಖುರ್‌ಆನಿನ ಪುಟಗಳಲ್ಲಿ ಬಹಳ ಸೂಕ್ಷ್ಮವಾಗಿ ಉಲ್ಲೇಖಿಸಲ್ಪಟ್ಟಿವೆ. ಆಧ್ಯಾತ್ಮಿಕ ಜ್ಞಾನದ ಚಿಲುಮೆಯಾದ ಖುರ್‌ಆನ್ ಭೌತಿಕ ವಿಜ್ಞಾನದ ಅಕ್ಷಯ ಪಾತ್ರೆಯೂ ಆಗಿದೆ.

ಖಂಡಿತವಾಗಿಯೂ ಎಲ್ಲಾ ರೀತಿಯ ಸ್ತುತಿ ಕೀರ್ತನೆಗಳು ಸರ್ವಲೋಕನಾಥನಾದ ಪರಮಾತ್ಮನಿಗೆ.

●

For your needs in empty gunnies, always rely on


Phone No. 74803

JANATHA STORES

9/211 Gunny Street, CALICUT - 673001.

## ನೊಬೆಲ್ ಪ್ರಶಸ್ತಿ ವಿಜೇತ

# ಡಾಕ್ಟರ್ ಸಲಾಮ್-ಭಾರತೀಯ ವಿಜ್ಞಾನಿಗಳ ದೃಷ್ಟಿಯಲ್ಲಿ



ಭಾರತದ ಅನೇಕ ವಿಜ್ಞಾನಿಗಳು ಡಾಕ್ಟರ್ ಸಲಾಮ್ ಅವರ ಕುರಿತು ಒಬ್ಬ ವಿಜ್ಞಾನಿ ಎಂಬ ನೆಲೆಯ ಜೊತೆಯಲ್ಲಿಯೇ ಒಬ್ಬ ಉತ್ತಮ ಮಾನವ ಎಂಬ ನೆಲೆಯಲ್ಲಿಯೂ ಮಾತಾಡಲು ಉತ್ಸುಕರಾಗಿ ರುತ್ತಾರೆ. "ಅತ್ಯಂತ ಸಜ್ಜನ, ಸ್ನೇಹಪ್ರಿಯ, ಸಹಾಯ ಮಾಡಲು ಸನ್ನದ್ಧ, ಮತ್ತು ಅತ್ಯಂತ ಧರ್ಮನಿಷ್ಠ ವ್ಯಕ್ತಿ ಡಾಕ್ಟರ್ ಅಬ್ದುಸ್ಸ ಲಾಮ್" ಎಂದು ಒಬ್ಬ ಭಾರತೀಯ ವಿಜ್ಞಾನಿ ಹೇಳುತ್ತಾರೆ. "ಒಬ್ಬ ಅಹ್ಮದೀಯರಾದ ಪ್ರೊಫೆಸರ್ ಸಲಾಮ್ ತನ್ನ ಭಾಷಣವನ್ನು ದೇವ ರ್ರಿಗೆ ಪ್ರಾರ್ಥನೆ ಸಲ್ಲಿಸದೆ ತೊಡಗುವುದಿಲ್ಲ" ಎಂದ ಡೆಲ್ಲಿ ಯುನಿವರ್ಸಿ ಟಿಯ ಒಬ್ಬ ಲೆಕ್ಚರರ್, 1977ನೇ ಇಸವಿಯಲ್ಲಿ ಡೆಲ್ಲಿ ವಿಶ್ವ ವಿದ್ಯಾಲ ಯದಲ್ಲಿ ಡಾಕ್ಟರ್ ಸಲಾಮ್ ನೀಡಿದ ಭಾಷಣಗಳ ಕುರಿತು ಜ್ಞಾಪಿ ಸುತ್ತಾ ಹೇಳಿದರು. ಪ್ರೊಫೆಸರ್ ವರ್ಮಾ 1962–65ರಲ್ಲಿ ಲಂಡನಿನ ಇಂಪೀರಿಯಲ್ ಕಾಲೇಜಿನಲ್ಲಿ ಪ್ರೊಫೆಸರ್ ಸಲಾಮರ ವಿದ್ಯಾರ್ಥಿಯಾ ಗಿದ್ದರು. ಅವರು ಡಾಕ್ಟರ್ ಸಲಾಮರ ಕುರಿತು "ಬಹಳ ನಿಷ್ಠ ಅಧ್ಯಾಪಕ" ಎಂದು ಜ್ಞಾಪಿಸುತ್ತಾರೆ. ಅವರು ಕ್ಲಾಸಿಗೆ ಹೋಗುವ ಮೊದಲು ತಾನು ಕಲಿಸುತ್ತಿದ್ದ "ಪಾರ್ಟಿಕಲ್ ಫಿಸಿಕ್ಸ್" ಕುರಿತು ಅತ್ಯಂತ ಶ್ರದ್ಧೆ ವಹಿಸಿ ಟಿಪ್ಪಣಿಗಳನ್ನೂ ವಿವರಣೆಗಳನ್ನೂ ಸಿದ್ಧಪಡಿಸಿ ಕ್ಲಾಸಿಗೆ ಹಾಜರಾಗುತ್ತಿದ್ದರು. ಪ್ರೊಫೆಸರ್ ಪಿಳ್ಳೈ ತನ್ನ ಡಾಕ್ಟರೇಟ್ ಮುಗಿಸಿ ಮೇಲಿನ ಕಾಲೇಜಿನಲ್ಲಿ 1963–64ರಲ್ಲಿ ಅಧ್ಯಯನ ಮಾಡು ತ್ತಿದ್ದ ಸಮಯವನ್ನು ಜ್ಞಾಪಿಸಿ, ಡಾಕ್ಟರ್ ಸಲಾಮರ ಕುರಿತು "ಅವರು ಸದಾ ಕಾಲ ಆವೇಶಭರಿತ ವಿದ್ಯಾರ್ಥಿಗಳಿಂದಲೂ ಸಹಅಧ್ಯಾಪಕರಿಂದಲೂ ಸುತ್ತುವರಿಯಲ್ಪಡುತಿದ್ದರು" ಎಂದು ಹೇಳುತ್ತಾರೆ. ಎಲ್ಲಾ ವಿದ್ಯಾರ್ಥಿಗಳಿಗೆ ಡಾಕ್ಟರ್ ಸಲಾಮ್‌ರವರ ಭೇಟಿ ಸುಲಭವಾಗಿ ಲಭ್ಯವಾಗುತ್ತಿತ್ತು.

"ನಾನು ನನ್ನ ಜೀವಮಾನದಲ್ಲಿ ಭೇಟಿಯಾದ ಅತ್ಯಂತ ಸದ್ಗುಣಿಗಳಲ್ಲಿ ಒಬ್ಬರಾಗಿದ್ದಾರೆ ಪ್ರೊಫೆಸರ್ ಸಲಾಮ್" ಎಂದು ಪ್ರೊಫೆಸರ್ ಅವುಲಕ್ ಹೇಳುತ್ತಾರೆ. ಪ್ರೊಫೆಸರ್ ಸಲಾಮ್ ಮರೆಗುಳಿಯಾಗಿರಲಿಲ್ಲವೆಂದೂ ಅವರು ತನ್ನ ಸ್ನೇಹಿತರ ಜೊತೆ ಮಾತಾಡಲು ಬಹಳ ಇಷ್ಟ ಪಡುತ್ತಾರೆ ಎಂದೂ ಅವರು ನುಡಿದರು. (ಪ್ರೊಫೆಸರ್ ಅವುಲಕ್ ಡೆಲ್ಲಿ ಯುನಿವರ್ಸಿಟಿಯ ಗೌರವ ಪ್ರೊಫೆಸರ್. ಅವರು ಡಾಕ್ಟರ್ ಸಲಾಮ್ ಜೊತೆ ಆರು ತಿಂಗಳು ಪ್ರಿನ್ಸ್‌ಟನ್‌ನಲ್ಲಿ ಇದ್ದರು).

ಐಐಟಿಯ ಪ್ರೊಫೆಸರ್ ಎ. ಕೆ. ಘಾಟಕ್ ಪ್ರೊಫೆಸರ್ ಸಲಾಮರನ್ನು ಬೇರೊಂದು ಕಾರಣಕ್ಕಾಗಿ ಹೊಗಳು ತ್ತಾರೆ. ಒಬ್ಬ ವೈಜ್ಞಾನಿಕ ಆಡಳಿತಾಧಿಕಾರಿಯೆಂಬ ನೆಲೆಯಲ್ಲಿ ಡಾಕ್ಟರ್ ಸಲಾಮ್, ಒಬ್ಬ ವಿಜ್ಞಾನಿಯೆಂಬ ನೆಲೆಯಲ್ಲಿ ಮಾಡಿದ ಸೇವೆಗಿಂತ ಹೆಚ್ಚಿನ ಸೇವೆ ಮಾಡಿರುವವರು ಎಂದು ಅವರು ಹೇಳುತ್ತಾರೆ. ವಿಶ್ವಸಂಸ್ಥೆಯ ಮೂಲಕ ಇಟೆಲಿಯ ಟ್ರಿಯಸ್ಟೆ ನಗರದಲ್ಲಿ ಸ್ಥಾಪಿಸಲ್ಪಟ್ಟ ಇಂಟರ್ ನೇಶನಲ್ ಸೆಂಟರ್ ಫೋರ್ ಥಿಯೆರಟಿಕಲ್ ಫಿಸಿಕ್ಸ್ ಎಂಬ ಸಂಸ್ಥೆ ಡಾಕ್ಟರ್ ಸಲಾಮರ "ಮಸ್ತಿಷ್ಕ ಶಿಶು" (Brain Child) ಎಂದು ಅವರು ಹೇಳುತ್ತಾರೆ. ಅದು ಪ್ರಪಂಚಾದ್ಯಂತ ವಿರುವ ವಿಜ್ಞಾನಿಗಳಿಗೆ ಒಂದು ವಿಶಿಷ್ಟ ರೀತಿಯಲ್ಲಿ ಸಹಾಯ ಮಾಡುತ್ತದೆ. ಇಂಪೀರಿಯಲ್ ಕಾಲೇಜಿನಲ್ಲಿ ಒಬ್ಬ ಅಧ್ಯಾಪಕನಾಗಿಯೂ ಟ್ರಿಯಸ್ಟೆಯಲ್ಲಿ ಪ್ರಧಾನ ಆಡಳಿತಾಧಿಕಾರಿಯಾಗಿಯೂ ಸೇವೆ ನೀಡುತ್ತಿರುವ ಡಾಕ್ಟರ್ ಸಲಾಮರ ಸಾಮರ್ಥ್ಯದ ಕುರಿತು ಗ್ರಂಥ ರಾಶಿಗಳನ್ನೇ ಬರೆಯುವಂತಿದೆ. ಡಾಕ್ಟರ್ ಸಲಾಮರಿಗೆ ವೃದ್ಧಿಶೀಲ ಮತ್ತು ಅವಿಕಸಿತ ರಾಷ್ಟ್ರಗಳ ವಿಜ್ಞಾನಿಗಳ ಕುರಿತು ಬಹಳ ಅನುಕಂಪವಿದೆಯೆಂದು ಪ್ರೊಫೆಸರ್ ಚೌಧುರಿ ಹೇಳುತ್ತಾರೆ. ಪ್ರೊಫೆಸರ್ ಸಲಾಮ್ ಟ್ರಿಯಸ್ಟೆ ಸೆಂಟರಿನ ಮೂಲಕ ಬಡ ವಿಜ್ಞಾನಿಗಳಿಗಾಗಿ ಧನಸಹಾಯ ಪಡೆಯಲು "ಯುದ್ಧ ಮಾಡುತ್ತಿರುವ ಒಬ್ಬ ನೀಳ ಮನುಷ್ಯ" ಎಂದು ಅವರು ಹೇಳುತ್ತಾರೆ.

['ಲಿಂಕ್' ಇಂಗ್ಲಿಷ್ ಪತ್ರಿಕೆಯಲ್ಲಿ (2–12–79) ಸಿಖಾ ಲಾಸ್ಕರ್ ಬರೆದ ಲೇಖನದ ಒಂದು ಭಾಗ.]

# 'ಸನ್ಮಾರ್ಗ'ದ ಕುಟಿಲತೆ

ಎಂ. ಪಿ. ಇಬ್ರಾಹಿಂ

'ಸನ್ಮಾರ್ಗ' ವಾರಪತ್ರಿಕೆಯ ಮಾರ್ಚ್ 28ರ ಸಂಚಿಕೆಯಲ್ಲಿ "ಮಿರ್ಝಾ ಗುಲಾಂ ಸ್ಥಾಪಿಸಿದ ಕಾದಿಯಾನಿ ಮತದ ಕೈಗನ್ನಡಿ – ಅಲ್ಲಾಹನ ಬಗ್ಗೆ ವಿಕೃತ ವಿಶ್ವಾಸ" ಎಂಬ ಶಿರೋನಾಮೆಯ ಕೆಳಗೆ ಮಿ। ಎ. ಆರ್. ಅಹ್ಮದ್ ಸಂಗ್ರಹಿಸಿದ ಕೆಲವು ಉದ್ಧಾರಣೆಗಳನ್ನು ಪ್ರಕಟಿಸಲಾಗಿದೆ.

ಹಝ್ರತ್ ಮಿರ್ಝಾ ಸಾಹೇಬರಿಗೆ ದೇವರಿಂದ ಲಭಿಸಿದ ದಿವ್ಯವಾಣಿಗಳಲ್ಲಿ ಕೆಲವನ್ನು ವಕ್ರವಾಗಿಯೂ ಟಿಪ್ಪಣಿ ರಹಿತವಾಗಿಯೂ ಉದ್ಧರಿಸಿ 'ಸನ್ಮಾರ್ಗ' ಪತ್ರಿಕೆಯು ಇದನ್ನು ಕಾದಿಯಾನಿ ಮತದ ಕೈಗನ್ನಡಿ ಎಂದು ಹೇಳಿದೆ. ಆದರೆ, ಇದರಲ್ಲಿ ಆಶ್ಚರ್ಯಪಡಬೇಕಾದು ದೇನೂ ಇಲ್ಲ. ಸತ್ಯ ಸಂದೇಶದೊಂದಿಗೆ ಆಗಮಿಸಿದ ಸಕಲ ಪ್ರವಾದಿಗಳನ್ನೂ ಆಯಾ ಕಾಲದ ಅವರ ಶತ್ರುಗಳು ಹೀನವಾಗಿ ಆಕ್ಷೇಪಿಸಿದ್ದಾರೆಂದು ಪವಿತ್ರ ಖುರ್ಆನ್ ನಮಗೆ ತಿಳಿಸಿಕೊಡುತ್ತದೆ. ದೈವನಿಯುಕ್ತ ಪ್ರವಾದಿಗಳೆಲ್ಲರೂ ಒಂದೇ ಶೃಂಖಲೆಯ ಗೊಣಸುಗಳಾಗಿರುವುದರಿಂದ ಸತ್ಯನಿಷೇಧಿಗಳ ಅವಹೇಳನವೂ ಕುಯುಕ್ತಿ ಪ್ರಯೋಗವೂ ಸರ್ವ ಪ್ರವಾದಿಗಳನ್ನೂ ಬಾಧಿಸಿದೆ. ಶತ್ರುಗಳಿಂದ ಆಕ್ಷೇಪಿಸಲ್ಪಡದ ಒಬ್ಬನೇ ಪ್ರವಾದಿಯೂ ಈ ಲೋಕದಲ್ಲಿ ಅವತರಿಸಿಲ್ಲವೆಂದು ಅಲ್ಲಾಹು ತಾನೇ ಹೇಳಿರುವನು. ಪವಿತ್ರ ಖುರ್ಆನ್ ಹೇಳುವುದನ್ನು ಕಾಣಿರಿ:

"ಯಾ ಹಸರತನ್ ಅಲಲ್ ಇಬಾದಿ ಮಾಯಅ್ತೀಹಿಂ ಮಿನ್ ರ‍್ರಸೂಲಿನ್ ಇಲ್ಲಾ ಕಾನೂ ಬಿಹೀ ಯಸ್‌ತಹ್‌ಸಿಊನ್." (36:31)

–ಅಯ್ಯೋ, ಮನುಷ್ಯರಿಗೆ ಇದೇನು ಕಷ್ಟ! ನಮ್ಮ ದಾಸರಿಗೆ ಇದೇನು ನಾಶ! ಈ ಜನರ ಆಕ್ಷೇಪಕ್ಕೂ ಅಪಹಾಸ್ಯಕ್ಕೂ ಗುರಿಯಾಗದ ಒಬ್ಬನೇ ಒಬ್ಬ ಪ್ರವಾದಿಯೂ ಇವರೆಡೆಗೆ ಕಳುಹಿಸಲ್ಪಡಲಿಲ್ಲ! ಎಷ್ಟೆಲ್ಲಾ ಪ್ರವಾದಿಗಳನ್ನೂ ಸಂದೇಶ ವಾಹಕರನ್ನೂ ಈ ಲೋಕಕ್ಕೆ ನಾವು ಕಳುಹಿಸಿದೆವೋ ಅವರೆಲ್ಲರನ್ನೂ ಮನುಷ್ಯರು ಆಕ್ಷೇಪಿಸಿ ತಮಾಷೆ ಮಾಡಿದರು.

ಹಝ್ರತ್ ಆದಂ (ಅ) ರಿಂದ ಮೊದಲ್ಗೊಂಡು ಖಾತಮುಲ್ ಅಂಬಿಯಾ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ರ ವರೆಗೆ ಆವಿರ್ಭವಿಸಿದ ಸರ್ವ ಪ್ರವಾದಿಗಳನ್ನೂ ಅಪಹಾಸ್ಯ ಮಾಡಿದ ಈ ಜನರು ಹಝ್ರತ್ ಮಿರ್ಝಾ ಸಾಹೇಬರನ್ನು ಮಾತ್ರ ಸುಮ್ಮನೆ ಬಿಡುವರೇ? ನಿಜವಾಗಿಯೂ, ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ರವರು ದೇವರಿಂದ ನಿಯುಕ್ತರಾದ ಒಬ್ಬ ಸತ್ಯ ಪ್ರವಾದಿಯಾಗಿದ್ದಾರೆಂದು ಶತ್ರುಗಳ ಈ ನೀತಿ ವಿರುದ್ಧವಾದ ವರ್ತನೆಯೇ ಸಾಕ್ಷಿ ಹೇಳುತ್ತದೆ. ಅಹ್ಮದಿಯಾ ಜಮಾತಿನ ಶತ್ರುಗಳು ಹೇಳುತ್ತಿರುವಂತೆಯೇ ಪೂರ್ವಕಾಲದ ದಿವ್ಯದೂತರ ಶತ್ರುಗಳು ಸಹ ಅವರೊಡನೆ ಹೇಳಿದರು. ನೀನು ದೇವರ ಕುರಿತು ವಿಕೃತ ಭಾವನೆಯನ್ನು ಹೊಂದಿದ್ದೀ; ನೀನು ದೇವದೂಷಣೆಯನ್ನು ಮಾಡುತ್ತಿದ್ದೀಯಾ. ಆದುದರಿಂದ ನಿನ್ನನ್ನು ನಾವು ವಿರೋಧಿಸುತ್ತೇವೆ ಎಂದು ಹಝ್ರತ್ ಈಸಾ(ಅ) ರ ಶತ್ರುಗಳು ಅವರೊಡನೆ ಹೇಳಿದರೆ, ನೀನು ಹೇಳುತ್ತಿರುವ ಮಾತುಗಳೇ ನಮಗೆ ಅರ್ಥವಾಗುವುದಿಲ್ಲ ಎಂದು ಹಝ್ರತ್ ಶುಐಬ್‌ನಬಿ (ಅ) ರೊಡನೆ ಅವರ ಶತ್ರುಗಳು ಹೇಳಿದರು ( ಖುರ್ಆನ್ 11:92 ). ಸತ್ಯದ್ವೇಷಿಗಳ ಈ ಹೇಳಿಕೆಗಳು ಆ ಪ್ರವಾದಿಗಳ ವಾದಕ್ಕೆ ಕೈಗನ್ನಡಿಯಾಗಿತ್ತೆಂದು 'ಸನ್ಮಾರ್ಗವು' ಹೇಳುವುದೇ?

ಹಝ್ರತ್ ಖಾತಮುಲ್ ಅಂಬಿಯಾ ಮುಹಮ್ಮದ್ ಮುಸ್ತಫಾ (ಸ) ರನ್ನೂ ಇಸ್ಲಾಮಿನ ಶತ್ರುಗಳು ಹೀನಾಯವಾಗಿ ಆಕ್ಷೇಪಿಸಿದ್ದಾರೆ. ಇಂದು ಸಹ ಆಕ್ಷೇಪಿಸುತ್ತಿದ್ದಾರೆ. ಆ ಪುಣ್ಯ ಪ್ರವಾದಿಯಂತೆ ಶತ್ರುಗಳ ಆಕ್ಷೇಪಕ್ಕೆ ಗುರಿಯಾದ ಬೇರೆ ಪ್ರವಾದಿಯೇ ಇಲ್ಲವೆಂದು ಹೇಳಬಹುದು. ಮುಹಮ್ಮದ್ ಪೈಗಂಬರರನ್ನೂ

ಇಸ್ಲಾಂ ಧರ್ಮವನ್ನೂ ಆಕ್ಷೇಪಿಸಿ ಇಸ್ಲಾಮಿನ ಶತ್ರುಗಳು ದೊಡ್ಡ ದೊಡ್ಡ ಗ್ರಂಥಗಳನ್ನೇ ಬರೆದಿದ್ದಾರೆ. ಅವರು ಉಲ್ಲೇಖಿಸಿದ ಖುರ್‌ಆನಿನ ಮತ್ತು ಹದೀಸಿನ ಉದ್ಧಾರಣೆಗಳು ಇಸ್ಲಾಂ ಧರ್ಮದ ಕೈಗನ್ನಡಿಯೆಂದು 'ಸನ್ಮಾರ್ಗ' ಒಪ್ಪಲು ಸಿದ್ಧವಿದೆಯೇ? ಇಲ್ಲವೆಂದಾದರೆ; ಇದೇ ಮಾದರಿಯಲ್ಲಿ ಹಝ್ರತ್ ಅಹ್ಮದ್ (ಅ)ರ ವಾಕ್ಯಗಳಲ್ಲಿ ಅಡಕವಾಗಿರುವ ಆಧ್ಯಾತ್ಮಿಕ ಅರ್ಥವನ್ನು ಗ್ರಹಿಸಿಕೊಳ್ಳಲು ವಿಫಲರಾದ ಎ. ಆರ್. ಅಹ್ಮದ್ ಸಂಗ್ರಹಿಸಿದ ಕೆಲವು ಉದ್ಧಾರಣೆಗಳು ಕಾದಿಯಾನಿ ಮತದ ಕೈಗನ್ನಡಿಯಾಗುವುದು ಹೇಗೆ?

'ಸನ್ಮಾರ್ಗ'ವು ಮಿರ್ಝಾ ಗುಲಾಂ ಅಹ್ಮದ್(ಅ) ರವರ ಗ್ರಂಥಗಳಿಂದ ಕೆಲವು ವಾಕ್ಯಗಳನ್ನು ಯಾವುದೇ ಟಿಪ್ಪಣಿ ರಹಿತವಾಗಿ ಉದ್ಧರಿಸಿ ಆ ಪುಣ್ಯಾತ್ಮರನ್ನು ಆಕ್ಷೇಪಿಸಿದೆ. 'ಸನ್ಮಾರ್ಗ'ವು ಪ್ರಕಟಿಸಿದ ಪ್ರತಿಯೊಂದು ಉದ್ಧಾರಣೆಗೂ ಪ್ರತ್ಯ ಪ್ರತ್ಯೇಕವಾಗಿ ಉತ್ತರವನ್ನು ನೀಡಲು ಹೊರಟರೆ ನನ್ನ ಈ ಲೇಖನವು ಬಹಳ ದೀರ್ಘವಾಗುವುದೆಂದು ಭಯಪಡುತ್ತೇನೆ. ಆದುದರಿಂದ, ಅವುಗಳಿಗೆಲ್ಲಾ ಸಂಬಂಧಪಟ್ಟಂತೆ ಸಂಕ್ಷಿಪ್ತವಾದ ಉತ್ತರವನ್ನು ಮಾತ್ರ ನಾನು ಇಲ್ಲಿ ನೀಡಬಯಸುತ್ತೇನೆ. 'ಸನ್ಮಾರ್ಗ'ದ ಆಕ್ಷೇಪಗಳಲ್ಲಿ ಅತಿ ಪ್ರಧಾನವಾದುದು ಹಝ್ರತ್ ಮಿರ್ಝಾ ಸಾಹೇಬರಿಗೆ, ದೇವರು ಸ್ಥೂಲ ರೂಪವನ್ನು ಹೊಂದಿದ್ದಾನೆಂಬ ಅರ್ಥ ಬರುವ ಇಲ್ಹಾಂ (ದೇವರಿಂದ ಲಭಿಸುವ ದಿವ್ಯವಾಣಿ) ಉಂಟಾಯಿತೆಂದೂ ಅವರು ಸ್ವಯಂ ದೇವರೆಂದು ಕನಸಿನಲ್ಲಿ ಕಂಡುದನ್ನು ತನ್ನ ಗ್ರಂಥದಲ್ಲಿ ವಿವರಿಸಿದ್ದಾರೆಂದೂ ಆಗಿದೆ. ಹಝ್ರತ್ ಮಿರ್ಝಾ ಸಾಹೇಬರ ಗ್ರಂಥಗಳಿಂದ ಪ್ರಯಾಸಪಟ್ಟು ಈ ಕೆಲವು ಉದ್ಧಾರಣೆಗಳನ್ನು ಇವರು ಸಂಗ್ರಹಿಸಿದ್ದಾರಾದರೂ ಅವುಗಳನ್ನು ಒಂದು ಆಕ್ಷೇಪವೆಂಬಂತೆ ಉದ್ಧರಿಸಿರುವುದನ್ನು ನೋಡುವಾಗ ಇಸ್ಲಾಂ ಧರ್ಮಶಾಸ್ತ್ರದಲ್ಲಿ ಈ ಮೌದೂದಿಗಳಿಗೆ ಎಷ್ಟು ಪರಿಜ್ಞಾನವಿದೆಯೆಂದು ವ್ಯಕ್ತವಾಗುತ್ತದೆ.

"ನಾನೇ ದೇವರೆಂದು ನಾನು ಕನಸಿನಲ್ಲಿ ಕಂಡೆ. ನಾನೇ ಆತನೆಂದು ದೃಢವಾಗಿ ನಂಬಿಕೊಂಡೆ" (ಆಈನಯೇ ಕಮಾಲಾತೆ ಇಸ್ಲಾಂ ಪುಟ–564) ಎಂದು ಮಿರ್ಝಾ ಸಾಹೇಬರು ಬರೆದಿರುವುದನ್ನು 'ಸನ್ಮಾರ್ಗ'ವು ಎತ್ತಿ ತೋರಿಸಿದೆ. ಇದು 'ದೇವರ ಬಗ್ಗೆ ವಿಕೃತ ಭಾವನೆ' ಯೆಂದು ಸನ್ಮಾರ್ಗದ ಭಾವನೆಯಿರಬಹುದು.

ಹಝ್ರತ್ ಮಸೀಹ್ ಮಔಊದ್ (ಅ) ರವರ "ಆಈನಯೇ ಕಮಾಲಾತೆ ಇಸ್ಲಾಂ" ಎಂಬ ಕೃತಿಯಿಂದ ಈ ಒಂದು ವಾಕ್ಯವನ್ನು ಶೋಧನೆ ಮಾಡಿದ ಸಂಗ್ರಹಕನಿಗೆ, ಆ ಪುಣ್ಯಾತ್ಮರು ಅದಕ್ಕೆ ನೀಡಿದ ಅರ್ಥ ವಿವರಣೆಯನ್ನು ಅದೇ ಗ್ರಂಥದ ಮುಂದಿನ ಪುಟದಲ್ಲಿ ಕಾಣಲು ಸಾಧ್ಯವಾಗದೆ ಹೋದುದು ಆಶ್ಚರ್ಯವೇ ಸರಿ. ಹಝ್ರತ್ ಮಿರ್ಝಾ ಸಾಹೇಬರು ತಾನು ಮನುಷ್ಯನಾಗಿರುವೆನೆಂದೂ ಅದು ಸಹ ಹಝ್ರತ್ ಮುಹಮ್ಮದ್ ಮುಸ್ತಫಾ(ಸ)ರವರ ದಾಸರಲ್ಲಿ ಒಬ್ಬನಾಗಿರುವೆನೆಂದೂ ತನ್ನ ಗ್ರಂಥಗಳಲ್ಲಿ ಅತ್ಯಂತ ಸ್ಪಷ್ಟವಾಗಿಯೂ ಪುನಃಪುನಃ ಆವರ್ತಿಸಿಯೂ ಬರೆದಿದ್ದಾರೆ. ಹಝ್ರತ್ ಮುಹಮ್ಮದ್ ಪೈಗಂಬರರನ್ನೇ ದೇವರೆಂದು ನಂಬದಿರುವ ಮಿರ್ಝಾ ಸಾಹೇಬರು ಅವರ ಶಿಷ್ಯನೆಂದು ಸ್ವಯಂ ಹೇಳುತ್ತಿರುವ ತನ್ನ ಕುರಿತು ತಾನು ದೇವರೆಂದು ಹೇಳಿದುದಾಗಿ ತಿಳಿಯಬಹುದೇ? ಮೌದೂದಿ ಉದ್ಧರಿಸಿದ ವಾಕ್ಯವು ಮಿರ್ಝಾ ಸಾಹೇಬರಿಗೆ ಸ್ವಪ್ನದಲ್ಲಿ ಕಂಡ ವಿಚಾರವೆಂಬುದನ್ನು ಮರೆಯಬಾರದು. ಅದರ ಅರ್ಥವನ್ನು ವಿವರಿಸುತ್ತಾ ಹಝ್ರತ್ ಸಾಹೇಬರು ಈ ರೀತಿ ಬರೆದಿದ್ದಾರೆ: "ನಾನು ಈ ಸ್ವಪ್ನದರ್ಶನದಿಂದ ನಾನೇ ಸ್ವಯಂ ದೇವರೆಂಬ ಅರ್ಥವನ್ನು ವಿವಕ್ಷಿಸುವುದಿಲ್ಲ; ಅಥವಾ ಅವತಾರ ಸಿದ್ಧಾಂತದಲ್ಲಿ ನಂಬಿಕೆಯಿರುವವರು ಹೇಳುವಂತೆ ತನ್ನಲ್ಲಿ ದೇವರ ಅವತರಣೆ ಉಂಟಾಯಿತು ಎಂದು ಸಹ ನಾನು ಇದಕ್ಕೆ ಅರ್ಥ ಕಲ್ಪಿಸುವುದಿಲ್ಲ. ನನ್ನ ಈ ಸ್ವಪ್ನಕ್ಕೆ ಸಹೀಹ್ ಬುಖಾರಿಯಲ್ಲಿ ವಿವರಿಸಲ್ಪಟ್ಟಿರುವಂತೆ ನಫಲ್ ನಮಾಝ್ ಮಾಡುವವರ ದೈವ ಸಾಮಿಪ್ಯದ ಸಾದೃಶ್ಯ ವಿವರಣೆಯಂತಹ ಅರ್ಥಮಾತ್ರವೇ ಇದೆ." (ಆಈನಯೇ ಕಮಾಲಾತೆ ಇಸ್ಲಾಂ–566) ಹದೀಸ್‌ನಲ್ಲಿ ಈ ರೀತಿ ಹೇಳಲಾಗಿದೆ: ನನ್ನ ದಾಸನು ನನ್ನ ಮುಂದೆ ವಿನಯದಿಂದ ಸಾಷ್ಟಾಂಗವೆರಗುವಾಗ, ಅವನು ಕೇಳುವ ಕಿವಿ ನನ್ನದೇ ಕಿವಿಯಾಗುವುದು, ನಾನೇ ಅವನ ಕಣ್ಣುಗಳಾಗುವೆನು; ಅವನು ಹಿಡಿಯುತ್ತಿರುವ ಕೈಗಳೂ ನಾನೇ ಆಗುವೆನು; ಅವನ ಕಾಲುಗಳೂ ನಾನೇ ಆಗುವೆನು. (ಬುಖಾರಿ)

ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹೇಬರು ತಾನು ಸ್ವಯಂ ದೇವರೆಂಬುದಾಗಿ ಹೇಳಿದ್ದಲ್ಲ;

ಬದಲಾಗಿ, ತಾನು ದೇವರೆಂಬಂತೆ ಸ್ವಪ್ನದಲ್ಲಿ ಕಂಡಿರುವುದಾಗಿ ಹೇಳಿದರೆಂಬುದನ್ನು ಎ. ಆರ್. ಅಹ್ಮದ್ ತಿಳಿಯಬೇಕಿತ್ತು. ಸ್ವಪ್ನಕ್ಕೆ ಪ್ರತ್ಯಕ್ಷ ಅರ್ಥವನ್ನು ಕಲ್ಪಿಸುವುದು ಅನೀತಿಯಾಗಿದೆ. ದೇವರ ಬಗ್ಗೆ ಸದ್ಭಾವನೆಯೂ ದೈವ ಭಯವೂ ಈ ಮೌದೂದಿಗಳಿಗೆ ಇರುತ್ತಿದ್ದರೆ ಹಝ್ರತ್ ಮಿರ್ಝಾ ಸಾಹೇಬರನ್ನು ಅವರು ಈ ರೀತಿ ಎಂದೂ ಆಕ್ಷೇಪಿಸುತ್ತಿರಲಿಲ್ಲ. "ತಾನು ಅಲ್ಲಾಹನೆಂಬುದಾಗಿ ಯಾರಿಗಾದರೂ ಸ್ವಪ್ನ ದರ್ಶನವಾದರೆ ಅದರ ಅರ್ಥ, ಆ ವ್ಯಕ್ತಿಯು ದೇವರ ಸಾಮಿಪ್ಯವನ್ನು ಹೊಂದಿರುವನೆಂದೂ ದೇವರು ಆತನನ್ನು 'ಸಿರಾತಲ್ ಮುಸ್ತಖೀಂ' ಎಂಬ ಸನ್ಮಾರ್ಗದ ಪಥದಲ್ಲಿ ನಡೆಸುವನೆಂದೂ ಆಗಿದೆ" ಎಂಬುದಾಗಿ ಅಲ್ಲಾಮಃ ಸೈಯದ್ ಅಬ್ದುಲ್ ಘನೀ (ಮಿಸ್ರಿ)ರವರ 'ತಅತೀರುಲ್ ಅನಾಂ ಫೀ ತಅಬೀರುಲ್ ಮನಾಂ' ಎಂಬ ಸುಪ್ರಸಿದ್ಧ ಸ್ವಪ್ನ ಶಾಸ್ತ್ರ ಗ್ರಂಥದಲ್ಲಿ ವಿವರಿಸಲಾಗಿದೆ. ಹಾಗಿರುವಾಗ, ತಾನು ಅಲ್ಲಾಹನೆಂಬಂತೆ ಹಝ್ರತ್ ಮಿರ್ಝಾಸಾಹೇಬರಿಗೆ ಸ್ವಪ್ನದಲ್ಲಿ ಕಂಡರೆ, ಅದರ ಅರ್ಥವು ಆ ಪುಣ್ಯಾತ್ಮರು ದೈವ ಸಾಮಿಪ್ಯ ಸಿದ್ಧಿಸಿದ ಮಹಾತ್ಮರೂ ಸಿರಾತಲ್ ಮುಸ್ತಖೀಂ ಎಂಬ ಸ್ವರ್ಗೀಯ ಸನ್ಮಾರ್ಗದಿಂದ ವಿಭೂಷಿತರೂ ಆಗಿದ್ದಾರೆಂದಲ್ಲದೆ ಬೇರೇನೂ ಅಲ್ಲ. ಹಝ್ರತ್ ಮಿರ್ಝಾ ಸಾಹೇಬರ ಒಂದು ಉದ್ಧಾರಣೆಯನ್ನು ಎತ್ತಿ ಹಿಡಿದು ಅವರು ದೇವರ ಬಗ್ಗೆ ವಿಕೃತ ಭಾವನೆಯನ್ನು ಹೊಂದಿದ್ದಾರೆಂದು ಕಂಡುಹಿಡಿಯಲ್ಪಟ್ಟುದಾಗಿ ಈ ಮೌದೂದಿಗಳು ಯಾಕೆ ನೆಗೆದಾಡಬೇಕು? ಮೌದೂದಿ ಸಂಘದವರಿಗೆ ದೇವರ ಕುರಿತಿರುವ ಸದ್ಭಾವನೆಯನ್ನು ಹೇಳದಿರುವುದೇ ಲೇಸು! ಸರ್ವಲೋಕ ಪಾಲಕನಾದ ಅಲ್ಲಾಹನ ವಿಶಿಷ್ಟ ಗುಣಗಳಲ್ಲಿ ಒಂದಾದ 'ಮುತಕಲ್ಲಿಂ' (ಮಾತನಾಡುವವನು) ಎಂಬ ಗುಣವು ಈಗ ಅಲ್ಲಾಹನಿಗೆ ನಷ್ಟವಾಗಿದೆ ಎಂದು ಎ. ಆರ್. ಅಹ್ಮದರೂ 'ಸನ್ಮಾರ್ಗ'ದ ಸಂಪಾದಕರೂ ಸೇರಿದಂತೆ ಸಮಸ್ತ ಮೌದೂದಿಗಳೂ ನಂಬುತ್ತಿರುವುದು ಅಲ್ಲಾಹನ ಕುರಿತು ಇವರಿಗಿರುವ ಒಳ್ಳೆಯ ಭಾವನೆಯೆಂದು ಹೇಳಬಹುದೇ? ದೇವರು ಕೇಳುವವನೂ ಕಾಣುವವನೂ ಆಗಿರುವಂತೆಯೇ ಮಾತನಾಡುವವನೂ ಆಗಿದ್ದಾನೆ. ಮೊದಲು ಅವನು ತನ್ನ ದಾಸರ ಸಂಕಷ್ಟಾವಸ್ಥೆಗಳನ್ನು ಕಂಡು, ಅವರ ಮೊರೆಗಳನ್ನು ಕೇಳಿ, ಅವರಲ್ಲಿ ಕೆಲವರಿಗೆ ತನ್ನ ಅಮೃತ ಭಾಷಣವನ್ನು ಕರುಣಿಸಿದಂತೆ ಇಂದು ಸಹ, ಇನ್ನು ಮುಂದೆಯೂ ಸಹ ಆ ಪರಮಾತ್ಮನು ಕೇಳುವವನೂ ಕಾಣುವವನೂ ಮಾತನಾಡುವವನೂ ಆಗಿದ್ದಾನೆ. ಆದರೆ, ಮೌದೂದಿಗಳ ಸಿದ್ಧಾಂತದಂತೆ ಹಿಂದೆ ದೇವರು ತನ್ನ ಇಷ್ಟ ದಾಸರಲ್ಲಿ ಕೆಲವರನ್ನು ತನ್ನ ದಿವ್ಯ ಸಂಭಾಷಣೆಯಿಂದ ಅನುಗ್ರಹಿಸಿದ್ದರೂ ಇನ್ನು ಮುಂದೆ ಯಾರೊಡನೆಯೂ ಅಲ್ಲಾಹು ಮಾತನಾಡಲಾರನು ಎಂದಾಗಿದೆ. ಲೋಕಾವಸಾನದವರೆಗೂ ಇನ್ನು ಅಲ್ಲಾಹು ಯಾರೊಬ್ಬ ಮನುಷ್ಯರೊಡನೆಯೂ ಮಾತನಾಡಲಾರನೆಂದೂ ಅವನ "ಮುತ ಕಲ್ಲಿಂ" ಎಂಬ ವಿಶಿಷ್ಟ ಗುಣವು ದುರ್ಬಲಗೊಂಡಿರುವುದೆಂದೂ ಮೌದೂದಿಗಳು ನಂಬುವುದಿಲ್ಲವೇ? ಆದರೂ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ)ರವರ ಒಂದು ಸ್ವಪ್ನ ದರ್ಶನವನ್ನು ಅವರು ಆಕ್ಷೇಪಿಸುತ್ತಾರೆ. ಆ ಪುಣ್ಯಾತ್ಮರು ಜಗತ್ಪಾಲಕನಾದ ಅಲ್ಲಾಹನ ಕುರಿತು ತನ್ನ ಹಲವಾರು ಗ್ರಂಥಗಳಲ್ಲಿ ಬರೆದಿರುವ ವಿವರಣೆಗಳನ್ನು ಕಾಣುವ ಕಣ್ಣುಗಳೂ ಇವರಿಗೆ ಇಲ್ಲವೇ? ಆ ಪುಣ್ಯಾತ್ಮರು ಅಲ್ಲಾಹುವಿನ ಕುರಿತು ಬರೆದಿರುವ ವಿವರಣೆಗಳನ್ನು ಇವರು ಕಂಡಿದ್ದರೆ, ಆ ಮಹಾತ್ಮರ ಕುರಿತು 'ದೇವರಲ್ಲಿ ವಿಕೃತ ಭಾವನೆ' ಹೊಂದಿದ್ದರೆಂದು ಹೇಳುವುದು ಭಯಂಕರವಾದ ಅಪರಾಧವೆಂಬುದಾಗಿ ಇವರಿಗೆ ತಿಳಿಯುತಿತ್ತು.

ಹಝ್ರತ್ ಮಿರ್ಝಾ ಸಾಹೇಬರು ತನ್ನ ಅನುಯಾಯಿಗಳಿಗೆ ವಿಶೇಷ ಉಪದೇಶವೆಂಬಂತೆ ಬರೆದ "ಅಲ್ ವಸಿಯ್ಯತ್" ಎಂಬ ಗ್ರಂಥದಲ್ಲಿ ಈ ರೀತಿ ಬರೆದಿದ್ದಾರೆ:-

"ಮೊದಲಿನಂತೆಯೇ ಇಂದೂ ಜೀವಿಸಿರುವ ಆ ಜೀವಂತ ದೇವನೇ ನಮ್ಮ ದೇವ. ಅವನು ಮೊದಲು ಮಾತನಾಡಿದ್ದಂತೆ ಇಂದೂ ಸಹ ಮಾತನಾಡುತ್ತಾನೆ. ಅವನು ಮೊದಲು ಕೇಳುತ್ತಿದ್ದಂತೆ ಈಗಲೂ ಕೇಳುತ್ತಾನೆ. ಈಗ ಅವನು ಕೇಳುತ್ತಿರುವನಾದರೂ ಮಾತನಾಡುವುದಿಲ್ಲವೆಂದು ಹೇಳುವುದು ಶುದ್ಧ ತಪ್ಪು. ಬದಲಾಗಿ, ಅವನು ಕೇಳುತ್ತಲೂ ಮಾತನಾಡುತ್ತಲೂ ಇದ್ದಾನೆ. ಅವನ ಎಲ್ಲಾ ಗುಣಗಳೂ ಅನಾದಿಯೂ ಅನಂತವೂ ಆಗಿವೆ. ಅವನ ಯಾವೊಂದು ಗುಣವೂ ಅವನಿಂದ ಕಳೆದು ಹೋಗಿಲ್ಲ. ಎಂದೆಂದೂ ಕಳೆದು ಹೋಗಲಾರದು. ಅವನು ಜೊತೆಗಾರರಿಲ್ಲದ ಏಕ ದೇವನಾಗಿದ್ದಾನೆ. ಅವನಿಗೆ ಮಗನಾಗಿ ಯಾರೂ ಇಲ್ಲ. ಪತ್ನಿಯಾಗಿಯೂ ಯಾರೂ ಇಲ್ಲ. ಸಮಾನವಾಗಿ ಯಾರೂ ಇಲ್ಲದ ನಿಸ್ತುಲ್ಯನಾಗಿರುವನು ಅವನು. ಅವನ ವಿಶಿಷ್ಟ ಗುಣಗಳನ್ನು

ಹೊಂದಿರುವ ಯಾವ ವ್ಯಕ್ತಿಯೂ ಇಲ್ಲ. ಅವನಿಗೆ ಸದೃಶನಾಗಿಯೂ ಅವನ ಗುಣಗಳನ್ನು ಹೊಂದಿದವನಾಗಿಯೂ ಇತರ ಯಾರೂ ಇಲ್ಲ. ಅವನ ಯಾವ ಶಕ್ತಿಯೂ ಕುಂದುವುದಿಲ್ಲ. ಅವನು ದೂರದಲ್ಲಿದ್ದುಕೊಂಡು ಸಮೀಪಸ್ಥನೂ ಸಮೀಪದಲ್ಲಿದ್ದುಕೊಂಡು ದೂರಸ್ಥನೂ ಆಗಿದ್ದಾನೆ. ಆಧ್ಯಾತ್ಮಿಕ ಅನುಭೂತಿ ಇರುವವರಿಗೆ ಆತ್ಮಿಕ ದರ್ಶನದ ಮೂಲಕ ಅವನು ಸ್ವಯಂ ಪ್ರತ್ಯಕ್ಷಪಡುವನಾದರೂ ಅವನಿಗೆ ಶರೀರವೋ ರೂಪವೋ ಇಲ್ಲ. ಅವನು ಎಲ್ಲಕ್ಕಿಂತಲೂ ಮೇಲೆ ಇರುವನಾದರೂ ಅವನ ಕೆಳಗೆ ಯಾರಾದರೂ ಇರುವರೆಂದು ಹೇಳಲಾಗದು. ಅವನು 'ಅರ್ಶ್' ನಲ್ಲಿರುವನಾದರೂ ಭೂಮಿಯಲ್ಲಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಅವನು ಸಕಲ ಸಂಪೂರ್ಣ ಗುಣಗಳ ಸಂಗಮವೂ ಎಲ್ಲಾ ಯಥಾರ್ಥ ಸ್ತುತಿಗಳ ಕೇಂದ್ರವೂ ಎಲ್ಲಾ ಉತ್ಕೃಷ್ಟತೆಗಳ ಉಗಮವೂ ಎಲ್ಲಾ ಶಕ್ತಿಗಳ ಸಮುಚ್ಛಯವೂ ಎಲ್ಲಾ ಅನುಗ್ರಹಗಳ ಕೇದಾರವೂ ಸಕಲ ವಸ್ತುಗಳ ಆಶ್ರಯ ಸ್ಥಾನವೂ ಎಲ್ಲಾ ರಾಜ್ಯಾಧಿಕಾರಿಗಳ ಮೇಲಧಿಕಾರಿಯೂ ಸರ್ವಪೂರ್ಣತೆಗಳ ಹಕ್ಕುದಾರನೂ ಸರ್ವವಿಧವಾದ ನ್ಯೂನತೆಗಳಿಂದಲೂ ಬಲಹೀನತೆಗಳಿಂದಲೂ ಪವಿತ್ರನೂ ಆಗಿದ್ದಾನೆ. ಭೂಮಿಯಲ್ಲೂ ಆಕಾಶದಲ್ಲೂ ಇರುವ ಸರ್ವರೂ ಅವನನ್ನು ಮಾತ್ರವೇ ಆರಾಧಿಸಬೇಕೆಂಬುದು ಅವನಿಗಿರುವ ಒಂದು ವಿಶಿಷ್ಟತೆಯಾಗಿದೆ. ಅವನಿಗೆ ಅಸಾಧ್ಯವಾಗಿ ಏನೂ ಇಲ್ಲ. ಎಲ್ಲಾ ಆತ್ಮಗಳೂ ಅವುಗಳ ಶಕ್ತಿಗಳೂ ಎಲ್ಲಾ ಅಣುಗಳೂ ಅವುಗಳ ಗುಣಗಳೂ ಅವನ ಸೃಷ್ಟಿಗಳಾಗಿವೆ. ಅವನ ಅಜ್ಞಾನುಸಾರವಲ್ಲದೆ ಯಾವುದೂ ಪ್ರತ್ಯಕ್ಷಪಡುವುದಿಲ್ಲ. ತನ್ನ ಶಕ್ತಿ ಮತ್ತು ದೃಷ್ಟಾಂತಗಳ ಮೂಲಕ ಅವನು ಸ್ವಯಂ ಪ್ರತ್ಯಕ್ಷಪಡುತ್ತಾನೆ. ಅವನ ಮೂಲಕ ಮಾತ್ರವೇ ನಮಗೆ ಅವನನ್ನು ಪಡೆಯಲು ಸಾಧ್ಯ. ಸತ್ಯಾತ್ಮರಿಗೆ ಅವನು ಪ್ರತ್ಯಕ್ಷನಾಗುತ್ತಾನೆ. ತನ್ನ ಶಕ್ತಿ ಮಹಾತ್ಮೆಗಳನ್ನು ಅವರಿಗೆ ಅವನು ತೋರಿಸಿಕೊಡುತ್ತಾನೆ. ಅವನ ಮೂಲಕವೇ ಅವರಿಗೆ ಅವನ ಪರಿಚಯವಾಗುತ್ತದೆ. ಅವನಿಗೆ ತೃಪ್ತಿಕರವಾದ ಹಾದಿಯನ್ನು ಕಂಡುಕೊಳ್ಳಲು ಅವನ ಸಹಾಯದಿಂದಲೇ ಸಾಧ್ಯ. ಭೌತಿಕ ಕಣ್ಣುಗಳಿಲ್ಲದೆಯೇ ಅವನು ನೋಡುತ್ತಾನೆ; ಬಾಹ್ಯ ಕಿವಿಗಳ ಸಹಾಯವಿಲ್ಲದೆಯೇ ಅವನು ಕೇಳುತ್ತಾನೆ; ಭೌತಿಕ ನಾಲಗೆಯಿಲ್ಲದೆಯೇ ಅವನು ಮಾತನಾಡುತ್ತಾನೆ" (ಅಲ್ ವಸಿಯ್ಯತ್ ಪುಟ : 11-13)

ಈ ರೀತಿ ಆ ಪುಣ್ಯಾತ್ಮರು ತನ್ನ ಅನೇಕ ಗ್ರಂಥಗಳಲ್ಲಿ ಅಲ್ಲಾಹನೊಡನೆ ಭಯಭಕ್ತಿ ಉಂಟಾಗುವಂತೆ ಅವನ ಮಹಾತ್ಮೆಗಳನ್ನು ವಿವರಿಸಿದ್ದಾರೆ. ಉದಾಹರಣೆಗಾಗಿ ಮಾತ್ರ ಒಂದು ಉದ್ಧಾರಣೆಯನ್ನು ಮೇಲೆ ಸೇರಿಸಿದ್ದೇನೆ. ಹೀಗೆ, ಸರ್ವಶಕ್ತನೂ ಸರ್ವವ್ಯಾಪಿಯೂ ಸರ್ವಗುಣ ಸಂಪೂರ್ಣನೂ ಆದ ಅಲ್ಲಾಹುವಿನ ಕುರಿತು ಸ್ತುತಿ ಕೀರ್ತನೆ ಮಾಡಿದ ಆ ಪುಣ್ಯಾತ್ಮರಿಗೆ ಅವನ ಬಗ್ಗೆ ವಿಕೃತ ಭಾವನೆಯಿತ್ತೆಂದು 'ಸನ್ಮಾರ್ಗ'ವು ಹೇಳುವುದು ಎಂತಹ ಅನೀತಿಯಾಗಿದೆ?

'ಸನ್ಮಾರ್ಗ'ದ ಸಂಚಿಕೆಯಲ್ಲಿ ಒಟ್ಟು 16 ಉದ್ಧಾರಣೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಯಾವ ಹೇಳಿಕೆಯು ಯಾವ ರೀತಿಯಲ್ಲಿ ಅಲ್ಲಾಹನ ಬಗ್ಗೆ ವಿಕೃತ ಭಾವನೆ' ಮೂಡಿಸುತ್ತದೆ ಎಂದು 'ಸನ್ಮಾರ್ಗ'ದ ಸಂಪಾದಕರೋ ಉದ್ಧಾರಣೆಗಳ ಸಂಗ್ರಹಕರೋ ವಿವರಿಸಿರುತ್ತಿದ್ದರೆ ಅದಕ್ಕೆ ಉತ್ತರ ನೀಡಬಹುದಿತ್ತು. ಪ್ರವಾದಿಗಳಿಗೆ ದೇವರಿಂದ ಲಭಿಸುವ ದಿವ್ಯವಾಣಿಗಳಿಗೆ ಅಧ್ಯಾತ್ಮಿಕವಾದ ಅಂತರಾರ್ಥಗಳು ಇರುತ್ತವೆ ಎಂಬ ಸತ್ಯವನ್ನು ಮೌದೂದಿಗಳು ತಿಳಿಯದೆ ಇರುವುದರಲ್ಲಿ ಆಶ್ಚರ್ಯಪಡಬೇಕಾದುದೇನೂ ಇಲ್ಲ. ಇಲ್ಲವಾದರೂ, ಧರ್ಮದ ಮುಖವಾಡವನ್ನು ಹೊತ್ತ ಒಂದು ರಾಜಕೀಯ ಪಾರ್ಟಿಯಾದ 'ಜಮಾತೆ ಇಸ್ಲಾಮ್ ಹಿಂದ್' ನವರಿಂದ ಆಧ್ಯಾತ್ಮಿಕತೆಯನ್ನು ನಿರೀಕ್ಷಿಸುವುದೇ ತಪ್ಪು.

"ಅಲ್ಲಾಹು ನಮಾಜು ಮಾಡುತ್ತಾನೆ, ಉಪವಾಸ ವ್ರತವನ್ನೂ ಆಚರಿಸುತ್ತಾನೆ; ಎಚ್ಚರವಿರುತ್ತಾನೆ; ಮತ್ತು ನಿದ್ರೆಯನ್ನೂ ಮಾಡುತ್ತಾನೆ", "ಅಲ್ಲಾಹು ಅರ್ಶ್ ನಿಂದ ನಿನ್ನನ್ನು ಸ್ತುತಿಸುತ್ತಾನೆ ಮತ್ತು ನಿನ್ನತ್ತ ನಡೆದು ಬರುತ್ತಾನೆ" ಎಂಬಿತ್ಯಾದಿ ಅಲ್ಲಾಹುವಿನಿಂದ ಲಭಿಸಿದ ದಿವ್ಯವಾಣಿಗಳನ್ನು ಹಝ್ರತ್ ಮಿರ್ಝಾ ಸಾಹೇಬರ ಕೃತಿಗಳಿಂದ 'ಸನ್ಮಾರ್ಗ'ವು ಎತ್ತಿ ತೋರಿಸಿದೆ. "ಭಾವನಾತ್ಮಕವಾಗಿ ನಾವು ಸರ್ವಲೋಕ ನಿಯಂತ್ರಕನನ್ನು ಅಪರಿಮಿತ ಕೈಗಳುಳ್ಳ ಅಗಣಿತ ಕಾಲುಗಳುಳ್ಳ ಅಸಂಖ್ಯಾತ ಹಾಗೂ ಅನಂತ ಉದ್ದಗಲವುಳ್ಳ ಅನೇಕ ಅಂಗಾಂಗಳ

ನ್ನೊಳಗೊಂಡ ಒಂದು ಮಹಾಸತ್ಯೆಯಾಗಿ ಯೋಚಿಸ ಬಲ್ಲೆವು" ಎಂಬುದಾಗಿ ಮಿರ್ಝಾ ಸಾಹೇಬರು ಬರೆದುದನ್ನೂ 'ಸನ್ಮಾರ್ಗ'ವು ಒಂದು ಆಕ್ಷೇಪವೆಂಬಂತೆ ತೆಗೆದು ತೋರಿಸಿದೆ.

ಪರಿಹಾಸ್ಯ ಮಾಡುವುದು ಮೂಢರ ಕೃತ್ಯವೆಂದು ಪವಿತ್ರ ಖುರ್‌ಆನಿನಲ್ಲಿ ಹೇಳಲಾಗಿದೆ (2:68). ಅದೇ ಖುರ್‌ಆನಿನಲ್ಲೇ "ಅಲ್ಲಾಹು ಅವರನ್ನು ಪರಿಹಾಸ್ಯ ಮಾಡುತ್ತಾನೆ" ಎಂದು ಸಹ ಹೇಳಿದೆ (2:16, 9:79). ಅಲ್ಲಾಹು ಅವರನ್ನು ವಂಚಿಸುತ್ತಾನೆ ಎಂದು ಸಹ ಖುರ್‌ಆನ್ ಹೇಳುತ್ತದೆ (4:142). ಅಲ್ಲಾಹು ಮರೆತು ಬಿಡುತ್ತಾನೆ (7:52, 9:67); ಅಲ್ಲಾಹನ ಮುಖದ ಹೊರತು ಉಳಿದ ಎಲ್ಲವೂ ನಾಶವಾಗುವುದು (28:89); ನೀವು ಮುಖ ತಿರುಗಿಸುವಲ್ಲೆಲ್ಲಾ ಅಲ್ಲಾಹನ ಮುಖ ಇದೆ (2:116); ಅಲ್ಲಾಹನ ವರ್ಣವನ್ನು ಸ್ವೀಕರಿಸಿರಿ, ಅಲ್ಲಾಹನ ವರ್ಣಕ್ಕಿಂತಲೂ ಉತ್ತಮ ವರ್ಣ (ಬಣ್ಣ) ಇರುವವರು ಬೇರೆ ಯಾರು? (2:139); ಮಾತ್ರವಲ್ಲ ಅಲ್ಲಾಹನ ಕೈ, ಅಲ್ಲಾಹನ ಕಣ್ಣು, ಅಲ್ಲಾಹು ಬಂದನು, ಅಲ್ಲಾಹು ಅರ್ಶಿನಲ್ಲಿ ಕೂತಿದ್ದಾನೆ ಎಂಬಿತ್ಯಾದಿ ಪ್ರಯೋಗಗಳು ಪವಿತ್ರ ಖುರ್‌ಆನಿನಲ್ಲಿ ಇವೆ. ಈ ವಾಕ್ಯಗಳಿಗೂ ಪದಗಳಿಗೂ ಬಾಹ್ಯಾರ್ಥವನ್ನೇ ನೀಡುವುದು ಪರಮಾತ್ಮನ ಪವಿತ್ರತೆಗೆ ಅನುಯೋಜ್ಯವಲ್ಲಟ ಕಾರಣ ಇವುಗಳಿಗೆಲ್ಲಾ ಅಂತರಾರ್ಥಗಳು ನೀಡಲ್ಪಡುತ್ತವೆ. ಬಾಹ್ಯಾರ್ಥದಲ್ಲಿ ಅಲ್ಲಾಹನೊಂದಿಗೆ ಸಂಕಲ್ಪಿಸಲು ಸಹ ಸಾಧ್ಯವಿಲ್ಲದಂತಹ ಈ ರೀತಿಯ ಅನೇಕ ಪ್ರಯೋಗಗಳು "ಸಹೀಹ್ ಬುಖಾರಿ" "ಸಹೀಹ್ ಮುಸ್ಲಿಂ" ಮೊದಲಾದ ಹದೀಸ್ ಗ್ರಂಥಗಳಲ್ಲೂ ಉಲ್ಲೇಖಿತವಾಗಿವೆ. ಅಲ್ಲಾಹು ಆಶ್ಚರ್ಯ ಪಡುತ್ತಾನೆ, ಅಲ್ಲಾಹನಿಗೆ ಅನಿಶ್ಚಿತತೆ ಉಂಟಾಯಿತು, ಅಲ್ಲಾಹು ಇಳಿದು ಬರುತ್ತಾನೆ, ಅಲ್ಲಾಹು ಓಡುತ್ತಾನೆ ಎಂದೆಲ್ಲಾ ಹದೀಸ್ ಗ್ರಂಥಗಳಲ್ಲಿ ಕಾಣಲ್ಪಡುತ್ತದೆ. ಇದಕ್ಕೆಲ್ಲಾ 'ಸನ್ಮಾರ್ಗ' ದವರು ಏನು ಅರ್ಥ ಕಲ್ಪಿಸುವರೆಂದು ತಿಳಿಯಲು ಕುತೂಹಲವಿದೆ. ಬಹುಶಃ ಹದೀಸ್ ಗ್ರಂಥಗಳಲ್ಲಿ ಈ ರೀತಿ ಪ್ರತಿಪಾದಿಸಲ್ಪಟ್ಟಿರುವುದನ್ನು ನೋಡಿದರೆ, ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಸಹ ದೇವರ ಬಗ್ಗೆ ವಿಕೃತ ಭಾವನೆಯಿತ್ತೆಂದು ಈ ಮೌದೂದಿಗಳು ಹೇಳಲು ಮುಂದಾಗುವರೋ ಏನೋ! ಈ ರೀತಿಯ ಪ್ರಯೋಗಗಳನ್ನು ಪವಿತ್ರ ಖುರ್‌ಆನಿನಲ್ಲೂ ಹದೀಸ್ ಗ್ರಂಥಗಳಲ್ಲೂ 'ಸನ್ಮಾರ್ಗ'ದವರು ಕಂಡಿಲ್ಲವೇ? ಪವಿತ್ರ ಖುರ್‌ಆನಿನಲ್ಲೂ ಹದೀಸ್ ಗ್ರಂಥಗಳಲ್ಲೂ ಇರುವ ಈ ರೀತಿಯ ಪ್ರಯೋಗಗಳಿಗೆ ಸಾಮಾನ್ಯವಾಗಿ ಕಲ್ಪಿಸಬಹುದಾದಂತಹ ಅಂತರಾರ್ಥವನ್ನಲ್ಲದೆ ವಿಕೃತವಾದ ಬೇರೆ ಯಾವ ಅರ್ಥವನ್ನೂ ಹಝ್ರತ್ ಮಿರ್ಝಾ ಸಾಹೇಬರ ಹೇಳಿಕೆಗಳಿಗೂ ಅವರಿಗೆ ಲಭಿಸಿದ ದೈವ ವಾಕ್ಯಗಳಿಗೂ ನೀಡಲು ಸಾಧ್ಯವಿಲ್ಲ. ತನಗೆ ಲಭಿಸಿರುವ ದಿವ್ಯ ವಚನಗಳಿಗೆ ಮಹತ್ತಾದ ಅಂತರಾರ್ಥ ಇವೆಯೆಂದು ಆ ಪುಣ್ಯಾತ್ಮರು ಹೇಳಿ ಅವುಗಳ ವ್ಯಾಖ್ಯಾನಗಳನ್ನೂ ಅವರೇ ಸ್ವತಹ ವಿವರಿಸಿಕೊಟ್ಟಿರುವಾಗ ದೇವರ ಮಹತ್ ಗುಣಗಳ ಕುರಿತು ಆ ಪುಣ್ಯಾತ್ಮರು ಎಷ್ಟೋ ಸ್ಪಷ್ಟವಾಗಿ ತನ್ನ ಹಲವಾರು ಗ್ರಂಥಗಳಲ್ಲಿ ವಿವರಿಸಿರುವಾಗ ಅದಕ್ಕೆ ವಿಪರೀತವಾದ ಒಂದು ಅರ್ಥವನ್ನು ಅವರ ಹೇಳಿಕೆಗೆ ನೀಡುವುದು ನ್ಯಾಯವಲ್ಲ.

"ಅಲ್ಲಾಹು ಪ್ರತಿ ರಾತ್ರಿಯಲ್ಲೂ ಆಕಾಶದಿಂದ ಭೂಮಿಗೆ ಇಳಿದು ಬರುತ್ತಾನೆ" (ಬುಖಾರಿ-ಮಿಶ್‌ಕಾತ್) ಎಂಬ ಪವಿತ್ರ ಪ್ರವಾದಿಯವರ ವಚನಕ್ಕೆ ಬಾಹ್ಯಾರ್ಥ ನೀಡದೆ ಆಂತರಿಕ ಅರ್ಥದಲ್ಲಿ ವೀಕ್ಷಿಸುವ ಯಾರಿಗೂ ಹಝ್ರತ್ ಮಿರ್ಝಾ ಸಾಹೇಬರ ವಚನಗಳಿಗೂ ಬಾಹ್ಯಾರ್ಥ ನೀಡಬಾರದೆಂದು ತಿಳಿದುಕೊಳ್ಳಲು ಸಾಧ್ಯವಿದೆ. ಮಾತ್ರವಲ್ಲ, ಆ ರೀತಿಯ ಪ್ರಯೋಗಗಳೆಲ್ಲವೂ ಅಲಂಕಾರೋಕ್ತಿಗಳಾಗಿವೆಯೆಂದು ಹಝ್ರತ್ ಮಿರ್ಝಾ ಸಾಹೇಬರೇ ಬಹಳ ಸ್ಪಷ್ಟವಾಗಿ ವಿವರಿಸಿ ಕೊಟ್ಟಿದ್ದಾರೆ. (ಉದಾಹರಣೆಗಾಗಿ ನೋಡಿರಿ– "ಹಕೀಕತುಲ್‌ವಹೀ" ಪುಟ-68, ಅದೇ ಗ್ರಂಥದ ಪುಟ 114, "ದಾಫಿಯತುಲ್ ಬಲಾ" ಪುಟ–6,7). ಅದಾವುದನ್ನೂ ಗಮನಿಸದೆ, ಆ ಪುಣ್ಯಾತ್ಮರ ವಚನಗಳಿಗೆ ಅಪಾರ್ಥವನ್ನು ಕಲ್ಪಿಸುವುದು ನೀತಿವಂತರಿಗೆ ಸೇರಿದ ಕೆಲಸವಲ್ಲ.

ಅಲ್ಲಾಹನಿಗೆ ಅಪರಿಮಿತ ಕೈಗಳಿವೆಯೆಂದು ಮಿರ್ಝಾ ಸಾಹೇಬರು ಉಪಮಾಲಂಕಾರದ ಶೈಲಿಯಲ್ಲಿ ಹೇಳಿರುವುದನ್ನು ಸನ್ಮಾರ್ಗವು ಆಕ್ಷೇಪಿಸಿದೆ. ಅಲ್ಲಾಹನ "ಕೈ"ಯ ಕುರಿತು ಪವಿತ್ರ ಖುರ್‌ಆನಿನ ಹಲವೆಡೆಗಳಲ್ಲಿ ಹೇಳಲಾಗಿದೆ. ಅಲ್ಲಾಹನಿಗೆ ಅಪರಿಮಿತ ಕೈಗಳು ಇರಬಾರದೆಂಬುದು ಸನ್ಮಾರ್ಗದ ಆಕ್ಷೇಪದ ಉದ್ದೇಶವಾಗಿದ್ದರೆ, ಅವನಿಗೆ ಒಂದು ಅಥವಾ ಎರಡು ಕೈಗಳೂ ಸಹ

ಇರಬಾರದಲ್ಲವೇ? "ಅವರನ್ನು ನಾನು ನನ್ನ ಬಲಗೈ ಯಿಂದ ಹಿಡಿಯುವೆನು"(69:46) ಎಂಬುದಾಗಿ ಪವಿತ್ರ ಖುರ್‌ಆನಿನಲ್ಲಿದೆ. ಬಲಗೈ ಎಡಗೈ ಎಂಬುದು ಅಲ್ಲಾಹನಿಗೆ ಇದೆಯೇ? ಇಲ್ಲವೆಂಬುದು ಸ್ಪಷ್ಟ. ಹಾಗಿದ್ದರೆ, ಪವಿತ್ರ ಖುರ್‌ಆನಿನ ಈ ವಚನದ ಅರ್ಥವೇನು? ಉಪಮಾಲಂಕಾರದ ಶೈಲಿಯು ಈ ಪ್ರಯೋಗಕ್ಕೆ ಆಂತರಿಕವಾದ ಅಲಂಕಾರಾರ್ಥವಿರುವಂತೆಯೇ ಹಝ್ರತ್ ಮಿರ್ಝಾ ಸಾಹೇಬರ ಹೇಳಿಕೆಗೂ ಅವರೇ ಸ್ವತ: ಹೇಳಿರುವಂತೆ ಅಲಂಕಾರಾರ್ಥವನ್ನಲ್ಲದೆ ಅಕ್ಷರಾರ್ಥ ಕಲ್ಪಿಸುವುದು ನ್ಯಾಯವಲ್ಲ. "ಅಲ್ಲಾಹು ತನ್ನ ಸ್ವಂತ ಕೈಗಳಿಂದ ತೌರಾತನ್ನು ಬರೆದನು" (ದೈಲಮಿ) ಎಂಬುದಾಗಿ ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರು ಹೇಳಿದ್ದಾರೆ. "ಹಝ್ರತ್ ಆದಂ (ಅ)ರನ್ನು ಅಲ್ಲಾಹು ತನ್ನ ಕೈಗಳಿಂದಲೇ ನಿರ್ಮಿಸಿದನು" ಎಂದು ಸಹ ಆ ಪ್ರವಾದಿವರ್ಯರು ನುಡಿದಿರುವರು. ರಾಜಕೀಯದ ಕೊಳಕು ದೃಷ್ಟಿಯನ್ನು ದೂರವಿರಿಸಿ, ದೇವರೊಡನೆ ಭಯ ಭಕ್ತಿಯಿಂದಲೂ ಸದ್ಭಾವನೆಯಿಂದಲೂ ಇವುಗಳನ್ನೆಲ್ಲಾ ನೋಡಿದರೆ ಮಾತ್ರವೇ ಇವುಗಳ ಸರಿಯಾದ ಅರ್ಥವನ್ನು ಗ್ರಹಿಸಿಕೊಳ್ಳಲು ಸಾಧ್ಯ.

ಅಲ್ಲಾಹನಿಂದ ಪ್ರವಾದಿಗಳಿಗೆ ಲಭಿಸುವ ದಿವ್ಯ ಸಂದೇಶಗಳಲ್ಲಿ ಕೆಲವು ಸುದೃಢವಾದ ಖಂಡಿತ ವಚನಗಳೂ (ಮುಹ್‌ಕವಾತ್) ಇನ್ನು ಕೆಲವು ಸದೃಶ ರೂಪದ ಅಲಂಕಾರ ವಚನಗಳೂ ಇರುತ್ತವೆ ಎಂಬುದು ಸಮಸ್ತ ಮುಸ್ಲಿಂ ವಿಭಾಗದವರೂ ಸಮ್ಮತಿಸುವ ಒಂದು ವಿಚಾರವಾಗಿದೆ. ಈ ರೀತಿಯ ಉಪಮಾಲಂಕಾರದ ಪ್ರಯೋಗ ಶೈಲಿಗೆ "ಮುತಶಾಬಿಹಾತ್" ಎಂದು ಹೆಸರು. ದಿವ್ಯ ವಚನದಲ್ಲಿ ಕಂಡು ಬರುವ ಮುತಶಾಬಿಹಾತ್‌ಗಳಿಗೆ ಸುದೃಢ ವಚನಗಳಿಗೆ ಅನುಯೋಜ್ಯವಾಗುವಂತಹ ವ್ಯಾಖ್ಯಾನವನ್ನು ಮಾತ್ರವೇ ನೀಡಬಹುದೆಂಬುದು ಒಂದು ಸಾಮಾನ್ಯ ತತ್ವ. ಅಲ್ಲದೆ, ಮುತಶಾಬಿಹಾತ್‌ಗಳನ್ನು ಅಕ್ಷರಾರ್ಥದಲ್ಲೇ ಸ್ವೀಕರಿಸಲು ಮುಂದಾದರೆ, ಮೌದೂದಿಗಳಿಗೆ ಬಂದೊದಗಿದಂತಹ ಆಪತ್ತಿನಲ್ಲಿ ಸಿಲುಕುವುದು ನಿಶ್ಚಯ.

"ಹೃದಯದಲ್ಲಿ ಕುಟಿಲತೆಯಿರುವವರು ದೃಢ ವಚನಗಳನ್ನು ಗಮನಿಸದೆಯೇ 'ಮುತಶಾಬಿಹಾತ್'ಗಳನ್ನು ಎತ್ತಿ ಹಿಡಿದು ಕಲಹವೆಬ್ಬಿಸಲು ಯತ್ನಿಸುತ್ತಾರೆ" ಎಂದು ಪವಿತ್ರ ಖುರ್‌ಆನ್ ನಮಗೆ ತಿಳಿಸಿಕೊಡುತ್ತದೆ. (3:8). ಅಲ್ಲಾಹನ ಏಕತ್ವ ಮತ್ತು ಅವನ ಪವಿತ್ರತೆಯ ಕುರಿತು ಹಝ್ರತ್ ಮಿರ್ಝಾ ಸಾಹೇಬರು ತನ್ನ ಅನೇಕ ಕೃತಿಗಳಲ್ಲಿ ವಿವರಿಸಿ ಬರೆದಿದ್ದಾರೆ. ತನ್ನ ಅನುಯಾಯಿಗಳಿಗೆ ಉಪದೇಶ ರೂಪದಲ್ಲಿ ಬರೆದ "ಕಿಶ್‌ತೀ ನೂಹ್ ಎಂಬ ಇನ್ನೊಂದು ಗ್ರಂಥದಲ್ಲಿ ಅವರು ಈ ರೀತಿ ಬರೆದರು: "ಸರ್ವಶಕ್ತನೂ ಸಕಲ ಸಂರಕ್ಷಕನೂ ಸರ್ವ ವಸ್ತುಗಳ ಸೃಷ್ಟಿಕರ್ತನೂ ಆದ ಒಬ್ಬ ದೇವನು ಅವರಿಗಿರುವನೆಂದು ಅವರು (ಅಹ್ಮದೀಯರು) ದೃಢವಾಗಿ ನಂಬಬೇಕಾಗಿದೆ. ಅವನ ಎಲ್ಲಾ ಗುಣಗಳಲ್ಲೂ ಅವನು ಅನಾದಿಯೂ ಅನಂತನೂ ಅಬೇಧ್ಯನೂ ಆಗಿದ್ದಾನೆ. ಅವನು ಯಾರ ಮಗನೂ ಅಲ್ಲ. ಯಾರೂ ಅವನ ಮಗನೂ ಅಲ್ಲ. ಅವನು ದು:ಖಾನುಭವ, ಶಿಲುಬೆಗೇರುವುದು, ಮರಣ ಹೊಂದುವುದು ಇತ್ಯಾದಿ ಸಂಕಲ್ಪಗಳಿಂದೆಲ್ಲಾ ಪವಿತ್ರನಾಗಿದ್ದಾನೆ."

ಮೌದೂದಿಗಳು ಅಹ್ಮದಿಯಾ ಜಮಾತಿನ ಹಾಗೂ ಅದರ ಸ್ಥಾಪಕರ ಮೇಲಿರುವ ತೀವ್ರ ವಿದ್ವೇಷದಿಂದ ಅಹ್ಮದಿಯಾ ಸಂಘಟನೆಯ ಸ್ಥಾಪಕರನ್ನು ಆಕ್ಷೇಪಿಸಲು ಮುಂದಾದಾಗ, ಅದೇ ಆಕ್ಷೇಪಕ್ಕೆ ಪವಿತ್ರ ಇಸ್ಲಾಂ ಹಾಗೂ ಹಝ್ರತ್ ಮುಹಮ್ಮದ್ ಪೈಗಂಬರರು ಸಹ ಗುರಿಯಾಗುತ್ತಾರೆ ಎಂಬುದನ್ನು ಗಮನಿಸಲಿಲ್ಲ. ಆದುದರಿಂದ ಅವರು ಇನ್ನು ಮುಂದಕ್ಕಾದರೂ ತಮ್ಮ ನೆಲೆಯನ್ನು ಬದಲಾಯಿಸಿ, ಪ್ರವಾದಿಗಳನ್ನು ಆಕ್ಷೇಪಿಸುವ ಸಾಹಸದಿಂದ ವಿರಮಿಸುವರೆಂದು ನಾವು ಆಶಿಸುತ್ತೇವೆ. ಒಬ್ಬ ಸತ್ಯ ಪ್ರವಾದಿಯನ್ನು ಆಕ್ಷೇಪಿಸಿ ಅಥವಾ ಅಪಹಾಸ್ಯ ಮಾಡಿ ವಿಜಯವನ್ನು ನಟಿಸುವುದು ಮೂರ್ಖತನವೆಂದು ಅಲ್ಲಾಹು ತಾನೇ ಹೇಳಿದ್ದಾನೆ. ಅಂತಹವರ ಕುರಿತು ಆ ಪರಮಾತ್ಮನು ಪರಿತಾಪ ತೋರಿಸಿರುವನು. ಯಾರ ಬಗ್ಗೆ ಪರಮಾತ್ಮನೇ ಪರಿತಪಿಸಿರುವನೋ ಅಂತಹವರ ಅವಸ್ಥೆಯ ಕುರಿತು ನಾವು ಏನು ಹೇಳಬೇಕು? ಅಲ್ಲಾಹು ಅವರಿಗೆ ಸದ್ಬುದ್ಧಿಯನ್ನು ನೀಡಿ ಅವರನ್ನು "ಯಥಾರ್ಥ ಸನ್ಮಾರ್ಗ"ದಲ್ಲಿ ನಡೆಸಲಿ ಎಂದು ನಾವು ಆ ಸರ್ವ ವಲ್ಲಭನನ್ನು ಪ್ರಾರ್ಥಿಸುತ್ತೇವೆ.

# ವ್ರತಾನುಷ್ಠಾನ ಏಕೆ?

— ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

ವರ್ಷದಲ್ಲಿ ಒಂದು ತಿಂಗಳು ಉಪವಾಸ ವ್ರತವನ್ನು ಕಡ್ಡಾಯವಾಗಿ ವಿಧಿಸಲ್ಪಟ್ಟಿರುವುದರ ಉದ್ದೇಶವೇನೆಂದೂ ವ್ರತಾನುಷ್ಠಾನದಿಂದ ಏನು ಪ್ರಯೋಜನ ನಮಗುಂಟಾಗುವುದೆಂದೂ ಅಲ್ಲಾಹು ನಮಗೆ ಕಲಿಸುತ್ತಾನೆ. ಖುರ್‌ಆನ್ ಹೇಳುವುದನ್ನು ನೋಡಿರಿ: "ಲಅಲ್ಲಕುಂ ತತ್ತಕೂನ್" (ನೀವು ದೋಷಬಾಧೆಯಿಂದ ದೂರವಿದ್ದುಕೊಂಡು, ರಕ್ಷಿಸಲ್ಪಡಲಿಕ್ಕಾಗಿ). "ತತ್ತಕೂನ್" ಎಂಬ ಪದ ಖುರ್‌ಆನಿನಲ್ಲಿಮೂರು ವಿಧ ಅರ್ಥಗಳಲ್ಲಿ ಪ್ರಯೋಗಿಸಲ್ಪಟ್ಟು ಕಾಣಬಹುದು: ವಿಷಮತೆಗಳಿಂದ ರಕ್ಷಿಪಡೆಯುವುದು, ಪಾಪಗಳಿಂದ ಮುಕ್ತಿಹೊಂದುವುದು, ಆಧ್ಯಾತ್ಮಿಕ ಉನ್ನತ ಪದವಿಗಳನ್ನು ಕರಗತಮಾಡುವುದು. ಹೀಗೆ ವ್ರತಾನುಷ್ಠಾನದ ಮೂರು ಗುಣಗಳನ್ನು ಅಲ್ಲಾಹು ಈ ವಚನ ಮೂಲಕ ನಮಗೆ ತಿಳಿಸಿಕೊಟ್ಟಿರುವನು.

ಪ್ರಥಮವಾಗಿ, ವಿಷಮತೆಗಳಿಂದ ರಕ್ಷಿಗಳಿಸುವುದು ಹೇಗೆಂದು ನೋಡಿರಿ. ಇದರಲ್ಲಿ ಬಾಹ್ಯವಾಗಿ ತುಸು ವಿರೋಧಾಭಾಸವಿರುವುದಾಗಿ ಅನಿಸಬಹುದು. ಉಪವಾಸ ಅನುಷ್ಠಿಸುವುದೇ ವಿಷಮಕರವಾದ ಒಂದು ಕಾರ್ಯವಾಗಿರುವಾಗ ಅದು ವಿಷಮತೆಗಳಿಗೆ ಹೇಗೆ ಪರಿಹಾರ ಮಾರ್ಗವಾಗುವುದು? ಇದಾಗಿದೆ ಪ್ರಶ್ನೆ. ಆದರೆ ತುಸು ಆಲೋಚಿಸುವುದಾದರೆ ನಮಗೆ ಈ ಸಂಗತಿಯನ್ನು ಸುಲಭವಾಗಿ ಗ್ರಹಿಸಬಹುದು. ವ್ರತಾನುಷ್ಠಾನವು ಮನುಷ್ಯರ ಸಾಮಾಜಿಕ ಸಂರಕ್ಷಣೆಯ ಎರಡು ವಿಧ ಪಾಠಗಳನ್ನು ನಮಗೆ ಬೋಧಿಸುತ್ತದೆ. ಧನಿಕರು ಎಲ್ಲಾ ದಿನಗಳಲ್ಲಿ ರುಚಿಕರವಾದ ಆಹಾರಗಳನ್ನು ಭಕ್ಷಿಸುತ್ತಾರೆ. ಅವರಿಗೆ ಹಸಿವೆಯಿಂದ ದಿನ ದೂಡುವ ತಮ್ಮ ದರಿದ್ರರಾದ ಸಹೋದರರ ವಿಚಾರವೇನೂ ತಿಳಿದಿರುವುದಿಲ್ಲ. ಕಾರಣವೇನೆಂದರೆ, ಅವರು ಒಮ್ಮೆಯಾದರೂ ಹಸಿವೆಯ ಕಷ್ಟವೇನೆಂದು ಅನುಭವಿಸಿರುವುದಿಲ್ಲ. ಆದುದರಿಂದ ಅದು ಏನೆಂದು ಅವರಿಗೆ ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲ. ಆದರೆ ಇಸ್ಲಾಮಿನ ವಿಧಿ ಪ್ರಕಾರ ಧನಿಕರು ಸಹ ಕಡ್ಡಾಯವಾಗಿ ಉಪವಾಸ ಅನುಷ್ಠಿಸಬೇಕು. ಆಗ ಹಸಿವೆಯ ಕಷ್ಟವೇನೆಂದು ಅವರಿಗೆ ಅನುಭವವಾಗುತ್ತದೆ. ಆ ಮೂಲಕ ಅವರಿಗೆ ತಮ್ಮ ನಿರ್ಗತಿಕರಾದ ಸಹೋದರರ ಸ್ಥಿತಿಯೇನೆಂದು ತಿಳಿಯಲು ಸಂದರ್ಭ ಒದಗುತ್ತದೆ. ಹಾಗೆ ಅವರೊಡನೆ ಸಹತಾಪ ತೋರಿಸಬೇಕೆಂಬ ಪ್ರಜ್ಞೆಯುಂಟಾಗುತ್ತದೆ. ಅದರ ಫಲವಾಗಿ ಸಮುದಾಯಕ್ಕೆ ಸಂರಕ್ಷಣೆ ಮತ್ತು ಪ್ರಗತಿ ಉಂಟಾಗುತ್ತದೆ. ಸಮುದಾಯದ ಸಂರಕ್ಷಣೆ ವ್ಯಕ್ತಿಯ ಸಂರಕ್ಷಣೆಯೂ ಆಗುವುದಷ್ಟೆ.

ಎರಡನೇ ಪಾಠ ಇದಾಗಿದೆ: ಮನುಷ್ಯರು ಆಲಸಿಗರೂ ಪ್ರಜ್ಞಾವಿಹೀನರೂ ಸುಖಲೋಲುಪರೂ ಆಗಿರಲಿಕ್ಕೆ ಇಸ್ಲಾಂ ಅನುಮತಿಸುವುದಿಲ್ಲ, ಬದಲಾಗಿ. ಅಗತ್ಯ ಬಂದಾಗ ಸರ್ವವಿಧ ವಿಷಮತೆಗಳನ್ನೂ ಕಷ್ಟಕಾರ್ಪಣ್ಯಗಳನ್ನೂ ಸಹಿಸುವ ಸನ್ನದ್ಧತೆ ಅವರಿಗಿರಬೇಕೆಂದು ಇಸ್ಲಾಂ ಉದ್ದೇಶಿಸುತ್ತದೆ. ವ್ರತಾನುಷ್ಠಾನ ಪ್ರತಿ ವರ್ಷ ಮುಸ್ಲಿಮರಲ್ಲಿ ಈ ಒಂದು ಸ್ವಭಾವವನ್ನು ಉಂಟುಮಾಡುತ್ತದೆ. ಇಸ್ಲಾಮಿನ ಈ ವಿಧಿ ಪ್ರಕಾರ ವರ್ತಿಸುವವರು ಎಂದಿಗೂ ಸುಖಲೋಲುಪತೆಯಲ್ಲೂ ಸೋಮಾರಿತನದಲ್ಲೂ ಸಿಲುಕಿ ನಾಶಹೊಂದಲಾರರು.

ವ್ರತಾನುಷ್ಠಾನದಿಂದ ಮನುಷ್ಯನು ಪಾಪದಿಂದ ವಿಮುಕ್ತಿ ಹೊಂದುವುದು ಹೇಗೆಂದು ನೋಡೋಣ. ವಾಸ್ತವದಲ್ಲಿ ಮನುಷ್ಯರು ಭೌತಿಕ ಸುಖ ಮತ್ತು ಸ್ವೇಚ್ಛೆಯಲ್ಲಿ ಲೀನರಾಗುವ ನಿಮಿತ್ತ ಪಾಪ ಉಂಟಾಗುತ್ತದೆ. ಒಬ್ಬನು ಒಂದು ಚಟಕ್ಕೆ ಗುರಿಯಾದರೆ ಅದನ್ನು ತ್ಯಜಿಸಲು ಅವನಿಗೆ ಕಷ್ಟವಾಗುತ್ತದೆ. ಆದರೆ ತನ್ನ ಇಷ್ಟಾನುಸಾರ ಅದನ್ನು ಉಪೇಕ್ಷಿಸುವ ಶಕ್ತಿ ಅವನು ಆರ್ಜಿಸಿದ್ದರೆ, ನಂತರ ಆ ಇಚ್ಛೆಗಳು ಅವನನ್ನು ಪರಾಭವಗೊಳಿಸಲಾರವು. ಓರ್ವನು ಸರ್ವವಿಧ ಭೌತಿಕ ಸುಖಗಳನ್ನೂ ಇಚ್ಛೆಗಳನ್ನೂ ದೇವನಿಗೆ ಬೇಕಾಗಿ ತ್ಯಜಿಸಿ ಒಂದು ತಿಂಗಳ ಕಾಲ ಸ್ಥಿರತೆಯಿಂದ ಸ್ವಯಂ ನಿಯಂತ್ರಿಸುವ ಅಭ್ಯಾಸವನ್ನು ಬೆಳೆಸುವುದಾದರೆ ಅವನಿಗೆ ತನ್ನನ್ನು ಪಾಪದೆಡೆಗೆ ಕೊಂಡೊಯ್ಯುವ ಇಚ್ಛೆಗಳನ್ನು ಸುಲಭದಲ್ಲಿ ದಮನಿಸಲು ಸಾಧ್ಯವಾಗುವುದು. (21ನೇ ಪುಟಕ್ಕೆ)

# ಅಹ್ಮದಿಯಾ ವಾರ್ತೆಗಳು

## ಶಿವಮೊಗ್ಗದಲ್ಲಿ ಸರ್ವ ಧರ್ಮ ಸಮ್ಮೇಳನ

ಶಿವಮೊಗ್ಗದ ಅಹ್ಮದಿಯಾ ಸಂಘಟನೆಯ ನೇತೃತ್ವದಲ್ಲಿ ಮೇ 1ರಂದು "ಕರ್ನಾಟಕ ಸಂಘ"ದ ಹಾಲ್‌ನಲ್ಲಿ ಸರ್ವ ಧರ್ಮ ಸಮ್ಮೇಳನ ಜರಗಿತು. ಸಮಾರಂಭದ ಅಧ್ಯಕ್ಷತೆಯನ್ನು ಸಂಘಟನೆಯ ಕೇಂದ್ರ ಕಚೇರಿಯ ಪ್ರಚಾರ ಕಾರ್ಯದರ್ಶಿ ಜನಾಬ್ ಅಲ್‌ಹಾಜ್ ಮೌಲಾನ ಷರೀಫ್ ಅಹ್ಮದ್ ಸಾಹೇಬ್ ಅಮೀನಿ ಅವರು ವಹಿಸಿದರು. ಶಿವಮೊಗ್ಗ ವಿಶೇಷ ಜಿಲ್ಲಾಧಿಕಾರಿ ಶ್ರೀಮಾನ್ ಎನ್. ಆರ್. ವೆಂಕಟೇಶ್‌ರವರು ಮುಖ್ಯ ಅತಿಥಿಯಾಗಿದ್ದರು.

ಜನಾಬ್ ಮೌಲವಿ ಹಮೀದುದ್ದೀನ್ ಶಮ್ಸ್ (ಅಹ್ಮದಿಯಾ ಮಿಶನರಿ, ಆಂಧ್ರ ಪ್ರದೇಶ) ಇವರು ಸಭಿಕರನ್ನು ಸ್ವಾಗತಿಸಿದರು. ಶ್ರೀ ರಾಘವೇಂದ್ರ ಗುರೂಜಿ (ಬಸವ ಪಟ್ಟಣ) ಮತ್ತು ಶ್ರೀ ಮಲ್ಲಿಕಾರ್ಜುನ ಮುರುಗ ರಾಜೇಂದ್ರ ಸ್ವಾಮಿ ಹಿಂದೂ ಧರ್ಮದ ಬಗ್ಗೆ, ಶ್ರೀ ಬಿ. ಎಸ್. ಬಹಾದೂರ್ ಸಿಂಘ್ ಸಿಖ್ ಧರ್ಮದ ಬಗ್ಗೆ, ರೆವರೆಂಡ್ ವಿ. ಜೈಕುಮಾರ್ ಕ್ರೈಸ್ತ ಧರ್ಮದ ಬಗ್ಗೆ, ಜನಾಬ್ ಮುಹಮ್ಮದ್ ಕರೀಮುಲ್ಲಾ ನೌಜವಾನ್ (ಸಂಪಾದಕ 'ಆಜಾದ್ ನೌಜವಾನ್') ಮತೀಯ ಸಾಮರಸ್ಯದ ಬಗ್ಗೆ, ಮೌಲವಿ ಮುಹಮ್ಮದ್ ಉಮರ್ ಸಾಹೇಬ್ (ಅಹ್ಮದಿಯಾ ಮಿಶನರಿ, ತಮಿಳ್ನಾಡ್) ಮುಹಮ್ಮದ್ ಪೈಗಂಬರರ ಬಗ್ಗೆ, ಮೌಲವಿ ಗುಲಾಂ ನಬಿ ಸಾಹೇಬ್ (ಅಹ್ಮದಿಯಾ ಮಿಶನರಿ, ಮಹಾರಾಷ್ಟ್ರ) ಹಝ್ರತ್ ಅಹ್ಮದರ ಬಗ್ಗೆ ಮಾತನಾಡಿದರು.

ಮೌಲಾನ ಅಮೀನಿ ಸಾಹೇಬರು ತನ್ನ ಭಾಷಣದಲ್ಲಿ ಅಹ್ಮದಿಯಾ ಸಂಘಟನೆಯ ಕುರಿತು ವಿವರಿಸಿದರು. ಮುಖ್ಯ ಅತಿಥಿಗೆ ಖುರ್‌ಆನ್ ಭಾಷಾಂತರ ಮತ್ತು ಇತರ ಅಹ್ಮದಿಯಾ ಸಾಹಿತ್ಯಗಳನ್ನು ನೀಡಿ ಗೌರವಿಸಲಾಯಿತು.

## ಬೆಂಗಳೂರಿನಲ್ಲಿ ಪೈಗಂಬರ ದಿನಾಚರಣೆ

ಮೇ 3ರಂದು ರಾತ್ರೆ ಬೆಂಗಳೂರಿನ ಅಹ್ಮದಿಯಾ ಘಟಕದ ವತಿಯಿಂದ "ದಾರುಲ್ ಫಝುಲ್"ನ ಎದುರುಗಡೆ ಪೈಗಂಬರ ದಿನಾಚರಣಾ ಸಭೆಯನ್ನು ಏರ್ಪಡಿಸಲಾಯಿತು. ಮೌಲಾನ ಶರೀಫ್ ಅಹ್ಮದ್ ಅಮೀನಿಯವರು ಅಧ್ಯಕ್ಷತೆಯನ್ನು ವಹಿಸಿದರು.

ಮೌಲವಿ ಗುಲಾಂ ನಬಿ ಸಾಹೇಬ್, ಮೌಲವಿ ಹಮೀದುದ್ದೀನ್ ಶಮ್ಸ್, ಮುಹಮ್ಮದ್ ಕರೀಮುಲ್ಲಾ ನೌಜವಾನ್ ಮತ್ತು ಮೌಲವಿ ಮುಹಮ್ಮದ್ ಉಮರ್ ಸಾಹೇಬ್ ಇವರು ಮುಹಮ್ಮದ್ ಪೈಗಂಬರರ ಜೀವನದ ವಿವಿಧ ಘಟ್ಟಗಳ ಕುರಿತು ಭಾಷಣ ಮಾಡಿದರು. ಅಧ್ಯಕ್ಷರು ಪೈಗಂಬರರ ಪವಿತ್ರ ಜೀವನದ ಕುರಿತು ವಿವರಿಸಿದರು. ಕೊನೆಗೆ ಅಬ್ದುರ್ರಹ್ಮಾನ್ ಬೇಗ್ ಸಾಹೇಬರು ಕೃತಜ್ಞತೆ ಸಲ್ಲಿಸಿದರು.

---

( 20ನೇ ಪುಟದಿಂದ )

ಮೇಲೆ ಹೇಳಿದ ಪ್ರಕಾರ ವ್ರತಾನುಷ್ಠಾನ ಮೂಲಕ ಆತ್ಮ ಪರಿಶುದ್ಧತೆ ಮತ್ತು ಸಂಯಮ ಶಕ್ತಿ ಸಂಪಾದಿಸಿದ ಮನುಷ್ಯನಿಗೆ ಈ ಮಾಸದಲ್ಲಿ ಹೆಚ್ಚಿನ ಸತ್ಕರ್ಮ, ದೈವಧ್ಯಾನ, ಆರಾಧನೆ ಮತ್ತು ಪ್ರಾರ್ಥನೆಗಳನ್ನು ಮಾಡುವರೆ ಪ್ರಚೋದನೆ ಮತ್ತು ಸಂದರ್ಭ ಲಭಿಸುತ್ತದೆ. ಹಗಲಿನಲ್ಲಿ ಮಾತ್ರವಲ್ಲ ರಾತ್ರಿಯಲ್ಲೂ ಆರಾಧನೆ ಮತ್ತು ಪ್ರಾರ್ಥನೆಗಳನ್ನು ಮಾಡುವರೆ ಸಂದರ್ಭ ಒದಗುವುದು. ಮಾತ್ರವಲ್ಲ. ಮನುಷ್ಯನು ಅಲ್ಲಾಹುವಿನ ಸಂತುಷ್ಟಿಯನ್ನು ಬಯಸಿ ತನ್ನ ಭೌತಿಕ ಸುಖಗಳನ್ನು ಉಪೇಕ್ಷಿಸುವಾಗ ಅಲ್ಲಾಹು ಸಹ ಅವನನ್ನು ತನ್ನೆಡೆಗೆ ಆಕರ್ಷಿಸಿ ಅವನ ಆತ್ಮಕ್ಕೆ ಹೆಚ್ಚಿನ ಶಕ್ತಿ ಮತ್ತು ಉನ್ನತಿಯನ್ನು ನೀಡುತ್ತಾನೆ. ಹೀಗೆ ವ್ರತಾನುಷ್ಠಾನ ಮೂಲಕ ಮನುಷ್ಯನಿಗೆ ಉನ್ನತವಾದ ಆಧ್ಯಾತ್ಮಿಕ ಸ್ಥಾನವನ್ನು ಗಳಿಸುವರೆ ಸಾಧ್ಯವಾಗುತ್ತದೆ. ●

## ಕೇರಳ ಅಹ್ಮದಿಯಾ ಮುಸ್ಲಿಂ ವಾರ್ಷಿಕ ಸಮ್ಮೇಳನ

ಕೇರಳ ರಾಜ್ಯದ ಅಹ್ಮದಿಯಾ ಮುಸ್ಲಿಂ ವಾರ್ಷಿಕ ಸಮ್ಮೇಳನವು ಅಲೆಪ್ಪಿಯ ಮುಸ್ಲಿಂ ಪ್ರತಾಪ ಕೇಂದ್ರವಾದ ಲಜ್ನತ್ ವಾರ್ಡಿನ ಮುಹಮ್ಮದ್ ಗವರ್ನಮೆಂಟ್ ಹೈಸ್ಕೂಲಿನ ಅಂಗಣದಲ್ಲಿ ವಿಶೇಷವಾಗಿ ಸಜ್ಜೀಕರಿಸಲಾದ "ಮಹ್‌ದಿ ನಗರ್"ನಲ್ಲಿ ಎರಡು ದಿನಗಳ ವಿವಿಧ ಕಾರ್ಯಕ್ರಮಗಳ ಸಹಿತ ಯಶಸ್ವಿಯಾಗಿ ಜರಗಿತು.

ಮೇ 10ರಂದು ಸಂಜೆ ಭಾರತದ ಅಹ್ಮದಿಯಾ ಮುಖ್ಯ ಪ್ರಚಾರ ಕಾರ್ಯದರ್ಶಿ ಅಲ್‌ಹಾಜ್ ಮೌಲಾನ ಷರೀಫ್ ಅಹ್ಮದ್ ಅಮೀನಿ ಸಾಹೇಬರು ಸಮ್ಮೇಳನವನ್ನು ಉದ್ಘಾಟಿಸಿದರು. ಕೇರಳ ಅಹ್ಮದಿಯಾ ಮಿಶನರಿ ಮೌಲವಿ ಮುಹಮ್ಮದ್ ಅಬುಲ್ ವಫಾ ಸಾಹೇಬರು ಅಧ್ಯಕ್ಷತೆ ವಹಿಸಿದ್ದರು. ಪಯಂಗಾಡಿಯ ಜನಾಬ್ ಎಸ್. ವಿ. ಖಮರುದ್ದೀನ್ ಸಾಹೇಬರು ಖುರ್‌ಆನ್ ಪಠಿಸಿದರು. ತಮಿಳ್ನಾಡಿನ ಅಹ್ಮದಿಯಾ ಮಿಶನರಿ ಮೌಲವಿ ಮುಹಮ್ಮದ್ ಉಮರ್ ಸಾಹೇಬ್, ಮದರಾಸಿನ "ಆಜಾದ್ ನೌಜವಾನ್" ಪತ್ರಿಕೆಯ ಸಂಪಾದಕ ಜನಾಬ್ ಮುಹಮದ್ ಕರೀಮುಲ್ಲಾ ನೌಜವಾನ್ ಮೊದಲಾದವರು ಭಾಷಣ ಮಾಡಿದರು. ಎಡ್ವಕೇಟ್ ವಿ. ಅಹ್ಮದ್ ಕುಟ್ಟಿ ಸಾಹೇಬ್ ಸ್ವಾಗತಿಸಿದರು. ಸೆಂಟ್ರಲ್ ಕಮಿಟಿ ಕಾರ್ಯದರ್ಶಿ ಕೆ. ಅಬ್ದುರ್ರಜಾಕ್ ಕೃತಜ್ಞತೆ ಸಲ್ಲಿಸಿದರು.

ದ್ವಿತೀಯ ದಿನದ ಸಭೆಯು ಹೈದರಾಬಾದಿನ ಅಹ್ಮದಿಯಾ ಜಮಾಅತಿನ ಅಮೀರ್ ಅಲ್‌ಹಾಜ್ ಸೇಟ್ ಮುಈನುದ್ದೀನ್ ಸಾಹೇಬರ ಅಧ್ಯಕ್ಷತೆಯಲ್ಲಿ ಆರಂಭಿಸಿತು. ಮಹಾರಾಷ್ಟ್ರ ಅಹ್ಮದಿಯಾ ಮಿಶನರಿ ಮೌಲವಿ ಗುಲಾಂನಬಿ, ಮೌಲಾನಾ ಶರೀಫ್ ಅಹ್ಮದ್ ಅಮೀನಿ ಸಾಹೇಬ್, "ವೀಕ್ಷಣ" ಪತ್ರಿಕೆಯ ಸಂಪಾದಕ ಎಂ. ಅಬ್ದುರಹಿಮಾನ್, ಮೌಲವಿ ಯೂಸುಫ್ ಸಾಹೇಬ್, ಮೌಲವಿ ಮೊಯ್ದೀನ್ ಕುಟ್ಟಿ ಸಾಹೇಬ್ ಎಂಬವರು ಮಾತನಾಡಿದರು. ಎಡ್ವಕೇಟ್ ವಿ. ಅಹ್ಮದ್ ಕುಟ್ಟಿ ಕೃತಜ್ಞತೆ ಸಲ್ಲಿಸಿದರು.

## ಎಕ್ಸಿಬಿಷನ್ ಅಹ್ಮದಿಯಾ

ಕೆಲವು ವರ್ಷಗಳಿಂದ ಖಾದಿಯಾನ್, ಮಡಿಕೇರಿ, ಕಾಸರಗೋಡು ಮತ್ತು ಕೇರಳದ ಅನೇಕ ಸ್ಥಳಗಳಲ್ಲಿ ಪ್ರದರ್ಶಿಸಲಾದ ಕೇರಳ ಅಹ್ಮದಿಯಾ ಕೇಂದ್ರ ಸಮಿತಿಯ "ಎಕ್ಸಿಬಿಷನ್ ಅಹ್ಮದಿಯಾ" ಈ ವರ್ಷ, ಅಲೆಪ್ಪಿಯಲ್ಲಿ ಜರಗಿದ 22ನೇ ವಾರ್ಷಿಕ ಪ್ರಾಂತ್ಯ ಸಮ್ಮೇಳನದ ಅಂಗವಾಗಿ ಸಂಘಟಿಸಲಾಯಿತು.

ಬುದ್ಧಿಜೀವಿಗಳೂ ವಿದ್ಯಾಸಂಪನ್ನರೂ ಆದ ಅಲೆಪ್ಪಿಯ ನಿವಾಸಿಗಳಿಗೆ ಈ ಪ್ರದರ್ಶನ ತುಂಬಾ ಕೌತುಕರವಾಗಿತ್ತು. ಆರೋಗ್ಯ – ವಿದ್ಯಾಭ್ಯಾಸ – ವ್ಯವಸಾಯ ಪ್ರದರ್ಶನ, ವೈಜ್ಞಾನಿಕ–ಶಾಂತ್ರಿಕ ಪ್ರದರ್ಶನ, ಚಿತ್ರಕಲಾ ಪ್ರದರ್ಶನ ಮೊದಲಾದವುಗಳನ್ನು ಕಂಡಿದ್ದ ಅಲೆಪ್ಪಿಯ ಜನರಿಗೆ ಆಧ್ಯಾತ್ಮಿಕ ಪ್ರಪಂಚದ ಅದ್ಭುತಗಳನ್ನು ಕಾಣುವ ಸುಸಂದರ್ಭವನ್ನು ಎಕ್ಸಿಬಿಷನ್ ಅಹ್ಮದಿಯಾ ನೀಡಿತು. ಮೇ 6, 7, 8 ದಿನಾಂಕಗಳಲ್ಲಿ ಅಲೆಪ್ಪಿಯ ಗವರ್ನಮೆಂಟ್ ಗರ್ಲ್ಸ್ ಹೈಸ್ಕೂಲಿನಲ್ಲಿ ಏರ್ಪಡಿಸಲಾದ ಈ ಪ್ರದರ್ಶನವನ್ನು ಉದ್ಘಾಟಿಸುತ್ತಾ ಎಡ್ವಕೇಟ್ ಪಿ. ಎ. ಹಾರಿಸ್ ಹೀಗೆ ಹೇಳಿದರು:

"ಮತದ ಆಂತರಿಕ ಸತ್ಯೆಯನ್ನು ಜನರಿಗೆ ಒಂದು ಭಾಷಣದ ಮೂಲಕ ತಿಳಿದುಕೊಳ್ಳುವುದಕ್ಕಿಂತ ಹೆಚ್ಚಿನ ಆಳದಲ್ಲಿ, ಇಂತಹ ಕೌತುಕಕರ ಪ್ರದರ್ಶನದ ಮೂಲಕ ತಿಳಿದುಕೊಳ್ಳಲು ಸಾಧ್ಯವಾಗುತ್ತದೆಂಬುದು ಖಂಡಿತ."

ಎಡ್ವಕೇಟ್ ವಿ. ಅಹ್ಮದ್ ಕುಟ್ಟಿ ಸಾಹೇಬರು ಸಮಾರಂಭದ ಅಧ್ಯಕ್ಷತೆ ವಹಿಸಿದರು. ಪಿ. ವಿ. ಅಹ್ಮದ್ ಕೋಯ ಸ್ವಾಗತಿಸಿದರು.

ಪ್ರದರ್ಶನದ ಜೊತೆಗೆ ಕುರುನಾಗಪಳ್ಳಿ ಜಮಾಅತಿನ ವತಿಯಿಂದ "ಅಹ್ಮದಿಯಾ ಬುಕ್ ಸ್ಟಾಲ"ನ್ನು ಸಹ ಏರ್ಪಡಿಸಲಾಗಿತ್ತು.

## ತಮಿಳ್ನಾಡಿನಲ್ಲಿ ಅಹ್ಮದಿಯಾ ಸಮ್ಮೇಳನ

ಏಪ್ರಿಲ್ 27ರಂದು ಮದರಾಸಿನ ಅಹ್ಮದಿಯಾ ಮುಸ್ಲಿಂ ಮಿಶನ್ ಹಾಲ್‌ನಲ್ಲಿ ದ್ವಿತೀಯ ತಮಿಳ್ನಾಡ್

ಅಹ್ಮದಿಯಾ ವಾರ್ಷಿಕ ಸಮ್ಮೇಳನವು ವಿಜೃಂಭಣೆಯಿಂದ ಜರಗಿತು.

ಅಹ್ಮದಿಯಾ ಕೇಂದ್ರ ಕಚೇರಿಯ ಪ್ರಧಾನ ಕಾರ್ಯದರ್ಶಿ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಪೂರ್ವಾಹ್ನದ ಪ್ರಥಮ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದರು. ಶ್ರೀ ಎಂ. ಪಿ. ಸಿ. ಶಿವ ಜ್ಞಾನಂ (ಚೇರ್‌ಮ್ಯಾನ್, ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲ್), ಡಾ। ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾದಿನ್ (ಉಸ್ಮಾನಿಯಾ ವಿಶ್ವವಿದ್ಯಾಲಯ), ಮೌಲಾನ ಷರೀಫ್ ಅಹ್ಮದ್ ಅಮೀನಿ, ಮೌಲವಿ ಗುಲಾಂ ನಬಿ, ಮೌಲವಿ ಮುಹಮ್ಮದ್ ಉಮರ್, ಡಾ। ಮುರುಗಮಲ್ಲೈ ಆನಂದರ್ (ಅಧ್ಯಕ್ಷ, ಮೈವರ್ಝಿ ಸಲ್ಲೈ) ಮೊದಲಾದವರು ಭಾಷಣವಿತ್ತರು.

ಅಪರಾಹ್ನ ಅಲ್‌ಹಾಜ್ ಸೇಟ್ ಮುಹಮ್ಮದ್ ಮೊಹಿನುದ್ದೀನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿದ ಸರ್ವ ಧರ್ಮೀಯರ ಕೂಟದಲ್ಲಿ ಶ್ರೀ ಕೆ. ಶ್ರೀನಿವಾಸ ಆಚಾರ್ಯ ಹಿಂದೂ ಧರ್ಮದ ಕುರಿತು, ಶ್ರೀ ಎಂ. ದೈವನಾಯಕಂ ಕ್ರೈಸ್ತ ಧರ್ಮದ ಕುರಿತು, ಜನಾಬ್ ಎಂ. ಕೆ. ಎಸ್, ಮೊಹಿದಿನ್ ಆಲಿ ಇಸ್ಲಾಂ ಧರ್ಮದ ಕುರಿತು, ಹಾಗೂ ಪ್ರೋ. ಎಂ. ರಾಮಲಿಂಗನರ್, ಡಾ। ಮಾಲ್ಕೊಮ್ ಜೆ. ಬೋಸ್ಸೆ, ಮಿ। ವೈನೆ ಸುಂದರಂ, ಡಾ। ಬಿ. ವಿ. ರೆಡ್ಡಿ ಮೊದಲಾದವರು ವಿವಿಧ ವಿಶ್ವಾಸ ಗಳ ಸಂಬಂಧಿಸಿ ಭಾಷಣ ಮಾಡಿದರು.

ಸಮ್ಮೇಳನದ ಅಂಗವಾಗಿ 26ರಂದು ಸಂಜೆ 4 ಗಂಟೆಗೆ ಕೇಂದ್ರ ಮಹಿಳಾ ಸಂಘದ ಅಧ್ಯಕ್ಷೆ ಶ್ರೀಮತಿ ಸಯಿದಾ ಅಮತುಲ್ ಖುದ್ದೂಸ್ ಅವರ ಅಧ್ಯಕ್ಷತೆ ಯಲ್ಲಿ ಮಹಿಳಾ ಸಭೆ ಜರಗಿತು. ಅದೇ ದಿನ ಸಂಜೆ 6–30ಕ್ಕೆ ತಮಿಳ್ನಾಡ್ ಅಹ್ಮದಿಯಾ ಮಿಶನರಿ ಮೌಲವಿ ಮುಹಮ್ಮದ್ ಉಮರ್ ಸಾಹೇಬರ ಅಧ್ಯಕ್ಷತೆಯಲ್ಲಿ ಸೇರಿದ ಯುವಜನ ಸಭೆಯಲ್ಲಿ ಭಾಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

## ಹೈದರಾಬಾದಿನಲ್ಲಿ ಸಮ್ಮೇಳನ

ಅಹ್ಮದಿಯಾ ಜಮಾಅತಿನ ಹೈದರಾಬಾದ್-ಸಿಕಂದರಾಬಾದ್ ಘಟಕದ ಆಶ್ರಯದಲ್ಲಿ ಸಾಲಾರ್ ಜಂಗ್ ಮ್ಯೂಸಿಯಂ ಹಾಲ್‌ನಲ್ಲಿ ಎಪ್ರಿಲ್ 19 ಮತ್ತು 20ರಂದು ಬಹಳ ವಿಜಯಕರವಾಗಿ ಆಂಧ್ರ ಪ್ರದೇಶ ಅಹ್ಮದಿಯಾ ವಾರ್ಷಿಕ ಸಮ್ಮೇಳನ ಜರಗಿತು.

ಪ್ರಥಮ ದಿನದ ಸಮ್ಮೇಳನದ ಅಧ್ಯಕ್ಷತೆಯನ್ನು ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ವಹಿಸಿದರು. ಸೇಟ್ ಮುಹಮ್ಮದ್ ಮುಈನುದ್ದೀನ್ (ಅಮೀರ್, ಜಮಾಅತ್ ಅಹ್ಮದಿಯಾ, ಹೈದರಾಬಾದ್) ಉದ್ಘಾಟನ ಭಾಷಣ ಮಾಡಿದರು. ಮೌಲವಿ ಹಮೀದುದ್ದೀನ್ ಶಮ್ಸ್ "ಪೈಗಂಬರ್-ಲೋಕಾನುಗ್ರಹಿ" ಎಂಬ ವಿಷಯದಲ್ಲಿ ಮಾತನಾಡಿದರು. ಮೌಲವಿ ಮುಹಮ್ಮದ್ ಉಮರ್ ಮುಹಮ್ಮದ್ ಪೈಗಂಬರರ ಕುರಿತು ಬೈಬಲ್, ಗೀತೆ ಮತ್ತು ಭವಿಷ್ಯ ಮಹಾ ಪುರಾಣಗಳಲ್ಲಿ ನುಡಿಯಲಾದ ಭವಿಷ್ಯೋಕ್ತಿಗಳನ್ನು ಉದ್ಧರಿಸಿ ಮಾತ ನಾಡಿದರು. ಮುಹಮ್ಮದ್ ಕರೀಮುಲ್ಲಾ ನೌಜವಾನ್ ಪೈಗಂಬರರ ಆದರ್ಶಮಯ ಜೀವನದ ಕುರಿತು ವಿವರಿಸಿ ದರು. ಮೌಲಾನ ಷರೀಫ್ ಅಹ್ಮದ್ ಅಮೀನಿಯವರು ಪೈಗಂಬರರ ಶ್ರೇಷ್ಠತೆಯ ಬಗ್ಗೆ ಭಾಷಣ ಮಾಡಿದರು.

ದ್ವಿತೀಯ ದಿನ ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾದೀನ್ "ಇಸ್ಲಾಂ ಮತ್ತು ವಿಜ್ಞಾನ" ಎಂಬ ವಿಷಯ ದಲ್ಲಿ ಮಾತನಾಡಿದರು. ಮೌಲವಿ ಗುಲಾಂ ನಬಿ "ಇಮಾಂ ಮಹ್‌ದಿಯ ಆಗಮನದ ಲಕ್ಷಣಗಳು" ಎಂಬ ವಿಷಯದಲ್ಲಿ ಮಾತನಾಡುತ್ತಾ, ಮುಹಮ್ಮದ್ ಪೈಗಂಬ ರರ ಅನೇಕ ಭವಿಷ್ಯ ನುಡಿಗಳನ್ನು ಉದ್ಧರಿಸಿದರು. ಮೌಲಾನಾ ಷರೀಫ್ ಅಹ್ಮದ್ ಅಮೀನಿ "ಆಧುನಿಕ ಕಾಲದ ಸಮಸ್ಯೆಗಳಿಗೆ ಪರಿಹಾರ ಇಸ್ಲಾಮಿನಲ್ಲಿ" ಎಂಬ ವಿಷಯದಲ್ಲಿ ಭಾಷಣವಿತ್ತರು. ಅಲ್‌ಹಾಜ್ ಮೌಲವಿ ಮುಹಮ್ಮದ್ ಅಬ್ದುಲ್ಲಾ (ಖಾಜಿ, ಜಮಾಅತ್ ಅಹ್ಮ ದಿಯಾ, ಹೈದರಾಬಾದ್) ಇವರು ಕೃತಜ್ಞತೆ ಸಲ್ಲಿಸಿ ದರು.

( ಹಿಂಬದಿ ಕವಚದ ಒಳಗಿನ ಪುಟ ನೋಡಿರಿ )

# ಸಂಪಾದಕರಿಗೆ ಪತ್ರ

"ಯುಗರಶ್ಮಿ" ಬಿಡದೆ ಓದುವವರಲ್ಲಿ ನಾನೂ ಒಬ್ಬ, ಇದೇ ಮಾರ್ಚ್ ಸಂಚಿಕೆಯಲ್ಲಿ "ದಾನ ಮಾಡಿ ಪ್ರತಿಫಲ ಪಡೆಯಿರಿ", "ಮುಹಮ್ಮದ್ ಪೈಗಂಬರರ ನುಡಿ ಮುತ್ತುಗಳು", "ಮುಸಲ್ಮಾನರಿಗೆ ಚಿಂತಾರ್ಹವಾದ ಸಂಗತಿ"–ಇವು ಉಪಯುಕ್ತ ಬರಹಗಳು. ಸಾಮಾನ್ಯ ಮಾನವನಿಗೂ ಮನನಮಾಡಬಹುದಾದ ವಿಷಯಗಳು ಈ ಬರಹಗಳಲ್ಲಿ ಅಡಕವಾಗಿವೆ. "ಯುಗರಶ್ಮಿ" ಕೇವಲ ಮಹಮದೀಯ ಮಿತ್ರರಿಗೆ ಮಾತ್ರವಲ್ಲ ಮಾನವ ಕುಲಕ್ಕೆ ದಾರಿ ದೀಪದಂತಿದೆ.

ಅಂತೆಯೇ ಮಹಮದೀಯ ನವಾಬರ ಕಾಲದಲ್ಲಿನ ಶಿಲ್ಪ-ಚಿತ್ರ ಕಲೆಯ ಉನ್ನತಿಗೆ ಶ್ರಮಿಸಿದರ ಬಗ್ಗೆಯೂ ಕಿರು ಪರಿಚಯಾತ್ಮಕ ಲೇಖನಗಳು ಬಂದರೆ ನಮ್ಮವರಿಗೆ ಕಲೆಯ ಹಿರಿಮೆಯುನ್ನು ಮೆರೆಸಿದಂತಾಗುತ್ತದೆ. ಜೊತೆಗೆ ಚಿತ್ರಗಳೂ ಇದ್ದರೆ ಮೆರಗುಕೊಟ್ಟಂತಾಗುತ್ತದೆ.

ಕನ್ನಡದಲ್ಲಿ ತಿಳಿಭಾಷೆಯಲ್ಲಿ ಹೊರತರುತ್ತಿರುವ ತಮ್ಮ ಈ ಸಾಹಸ ಕನ್ನಡಿಗರು ಅಭಿನಂದಿಸುವ ವಿಷಯ.

ತಮ್ಮ ಅಭಿಮಾನಿ,

ಮೈಸೂರು — ಪಿ. ಆರ್. ತಿಪ್ಪೇಸ್ವಾಮಿ

ಕಲಾವಿದ, ಜಾನಪದ ಮ್ಯೂಸಿಯಂ ಮೈಸೂರು ವಿಶ್ವವಿದ್ಯಾಲಯ.

# ನಿಧನ ವಾರ್ತೆಗಳು

ಮೊಗ್ರಾಲ್ ಜಮಾಅತಿನ ಪ್ರಮುಖರಲ್ಲೋರ್ವರೂ ಜಮಾಅತಿನ ತಅಲೀಂ ತರ್‌ಬಿಯ್ಯತ್ ವ ತಬ್ಲೀಗ್ ಸೆಕ್ರಟರಿಯೂ ಊರಿನವರಿಗೆ ಚಿರಪರಿಚಿತರೂ ಆಗಿದ್ದ ಜನಾಬ್ ಮೂಸ ಮಾಸ್ಟರ್ ಸಾಹೇಬರು ಅಲ್ಪ ಕಾಲದ ಅಸೌಖ್ಯ ದಿಂದಾಗಿ ಜೂನ್ 6ರಂದು ಸಂಜೆ ಕುಂಬಳೆಯಲ್ಲಿರುವ ಸ್ವಗೃಹದಲ್ಲಿ ತನ್ನ 60ನೇ ವಯಸ್ಸಿನಲ್ಲಿ ನಿಧನ ಹೊಂದಿದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್). ಮೃತರು ಪತ್ನಿಯನ್ನೂ ಐವರು ಪುತ್ರರನ್ನೂ ನಾಲ್ವರು ಪುತ್ರಿ ಯರನ್ನೂ ಅನೇಕ ಅಭಿಮಾನಿಗಳನ್ನೂ ಅಗಲಿ ಹೋಗಿರುವರು.

1952ರಲ್ಲಿ ಅಹ್ಮದಿಯಾ ಜಮಾಅತಿನಲ್ಲಿ ಸೇರಿದ ಜನಾಬ್ ಮೂಸ ಮಾಸ್ಟರ್ ಸಾಹೇಬರಿಗೆ ಆ ಕಾರಣ ದಿಂದಾಗಿ ಹಲವಿಧ ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತು.

*   *   *   *

ಖಾದಿಯಾನಿನ ನಿವಾಸಿಯಾಗಿದ್ದ ಜನಾಬ್ ಚೌಧರಿ ಅಬ್ದುಲ್ ಹಕ್ ಸಾಹೇಬರು ಜೂನ್ 4ರಂದು ತನ್ನ 80ನೇ ಪ್ರಾಯದಲ್ಲಿ ಲಾಹೋರಿನಲ್ಲಿ ನಿಧನ ಹೊಂದಿದರು. (ಇನ್ನಾ ಲಿಲ್ಲಾಹಿ ವಇನ್ನಾ ಇಲೈಹಿ ರಾಜಿವೂನ್) ಮೃತ ಶರೀರವನ್ನು ಜೂನ್ 7ರಂದು ಖಾದಿಯಾನಕ್ಕೆ ತಂದು ಧಫನ ಮಾಡಲಾಯಿತು. ಮೃತರು ಎರಡನೆಯ ಮಹಾ ಯುದ್ಧದಲ್ಲಿ ಮಿಲಿಟರಿಯಲ್ಲಿ ಸೇವೆ ಸಲ್ಲಿಸಿದ್ದರು. ಅದೇ ಸಂದರ್ಭದಲ್ಲಿ ಅವರು ಅಹ್ಮದಿಯಾ ಜಮಾಅತಿಗೆ ಸೇರಿದರು. ಮಿಲಿಟರಿಯಿಂದ ನಿವೃತ್ತರಾದ ನಂತರ ಅಹ್ಮದಿಯಾ ಕೇಂದ್ರ ಕಚೇರಿಯಲ್ಲಿ ವಿವಿಧ ಹುದ್ದೆಗಳನ್ನು ವಹಿಸಿದ್ದರು.

ಚೌಧರಿ ಸಾಹೇಬರು ಮೊಗ್ರಾಲ್ ಜಮಾಅತಿನ ಪ್ರೆಸಿಡೆಂಟ್ ಸಿದ್ದೀಖ್ ಅಮೀರಲಿ ಸಾಹೇಬರ ಸಂಬಂಧಿ ಯಾಗಿರುವರು.

*   *   *   *

ಈರ್ವ ಸಹೋದರಿಗೂ ಅಲ್ಲಾಹು ಮಗ್‌ಫಿರತನ್ನೂ ಸಂತಪ್ತ ಕುಟುಂಬಗಳಿಗೆ ಮತ್ತು ಅಭಿಮಾನಿಗಳಿಗೆ ಸಹನೆಯನ್ನೂ ಕರುಣಿಸಲಿ.

**ಪುಸ್ತಕ ವಿಭಾಗ**

# ಇಸ್ಲಾಂ ಮತ ತತ್ತ್ವಜ್ಞಾನ

## (8)

ಗ್ರಂಥಕರ್ತ: ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್

ಅನುವಾದಕ: ಮುಹಮ್ಮದ್ ಯೂಸುಫ್

### ಇಸ್ಲಾಮಿಕ ದೃಷ್ಟಿಯಲ್ಲಿ ಸ್ವರ್ಗ-ನರಕ

ಈ ವಿಷಯದ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ವ ಬಶ್ಶಿರಲ್ಲದೀನ ಆಮನೂ ವ ಅಮಿಲು ಸ್ಸಾಲಿಹಾತಿ ಅನ್ನ ಲಹುಂ ಜನ್ನಾತಿನ್ ತಜ್‌ರೀ ಮಿನ್ ತಹ್ತಿಹಲ್ ಅನ್‌ಹಾರ್" (2:26) — ವಿಶ್ವಾಸಿಸಿ ಸತ್ಕರ್ಮಗೈಯ್ಯುವವರಿಗೆ, ಕೆಳಭಾಗದಲ್ಲಿ ಸರಿತ್ತುಗಳು ಪ್ರವಹಿಸುವ ತೋಟಗಳಿಗೆ ಅವರು ಹಕ್ಕುದಾರರೆಂಬ ಶುಭವಾರ್ತೆಯನ್ನು ನೀಡಿರಿ.

ಈ ದೈವವಾಕ್ಯದಲ್ಲಿ ಸತ್ಯ ವಿಶ್ವಾಸವನ್ನು ಕೆಳಭಾಗದಲ್ಲಿ ನದಿಗಳು ಹರಿಯುವ ತೋಟಗಳಿಗೆ ಹೋಲಿಸಲಾಗಿದೆ. ತೋಟಕ್ಕೆ ನದಿಗಳೊಡನೆಂಬಂತಿರುವ ಒಂದು ಬಂಧ ಮತವಿಶ್ವಾಸಕ್ಕೆ ಸತ್ಕರ್ಮಗಳೊಡನೆ ಇದೆಯೆಂಬ ತತ್ವರಹಸ್ಯವನ್ನು ಇಲ್ಲಿ ಸೂಚಿಸಲಾಗಿದೆ. ಜಲಸೇಚನ ಇಲ್ಲದ ಪಕ್ಷದಲ್ಲಿ ತೋಟದ ವೃಕ್ಷಲತಾದಿಗಳು ಬಾಡಿಹೋಗುವ ಹಾಗೆಯೇ ಸತ್ಕರ್ಮಗಳೂ ಸತ್ ಸೇವೆಗಳೂ ಇಲ್ಲದ ಮತವಿಶ್ವಾಸ ನಿರ್ಜೀವವಾಗಿರುತ್ತದೆ. ಹೀಗೆ ಕರ್ಮಶೂನ್ಯವಾದ ಮತವಿಶ್ವಾಸ ಪ್ರಯೋಜನರಹಿತವಾಗಿರುವಂತೆಯೇ ಸದ್ವಿಶ್ವಾಸಪ್ರೇರಿತವಲ್ಲದ ಕರ್ಮಗಳು ಕೇವಲ ಅಭಿನಯವಾಗಿರುತ್ತವೆ. ಯಥಾರ್ಥದಲ್ಲಿ ಇಸ್ಲಾಮಿಕ ಸ್ವರ್ಗ ಐಹಿಕ ಜೀವಿತದ ಸತ್ಯವಿಶ್ವಾಸ ಹಾಗೂ ಸತ್ಕರ್ಮಗಳ ಒಂದು ಪ್ರತಿಚ್ಛಾಯೆಯಾಗಿದೆ. ಅದು ಹೊರಗಿನಿಂದ ಮನುಷ್ಯನಿಗೆ ಪ್ರಾಪ್ತವಾಗುವುದಲ್ಲ; ಅವನ ಒಳಗಿನಿಂದಲೇ ರೂಪುಗೊಳ್ಳುತ್ತದೆ. ಪ್ರತಿಯೊಬ್ಬನಿಗೆ ಲಭಿಸುವ ಸ್ವರ್ಗ ಅವನ ಸತ್ಯವಿಶ್ವಾಸ ಮತ್ತು ಸತ್ಕರ್ಮಗಳಿಂದ ರೂಪ ತಳೆಯುವುದು ಹಾಗೂ ಅದರ ಆನಂದಾನುಭೂತಿ ಅವನಿಗೆ ಈ ಲೋಕದಲ್ಲೇ ಅನುಭವವಾಗಲು ತೊಡಗುತ್ತದೆ. ಹಾಗೆ ಸತ್ಯವಿಶ್ವಾಸವೆಂಬ ತೋಟ ಮತ್ತು ಸತ್ಕರ್ಮಗಳೆಂಬ ಸರಿತ್ತುಗಳು ಅವನಿಗೆ ಪರೋಕ್ಷವಾದ ರೂಪದಲ್ಲಿ ಇಲ್ಲಿಯೇ ಅನುಭವಗೋಚರವಾಗುತ್ತವೆ. ಆದರೆ ಪಾರತ್ರಿಕ ಜೀವಿತದಲ್ಲಿ ಈ ತೋಟ ಮತ್ತು ಅದರ ನದಿಗಳು ಪ್ರತ್ಯಕ್ಷರೂಪದಲ್ಲಿ ಗೋಚರಿಸುವುವು. ದೇವನ ಅಸ್ತಿತ್ವ, ಅವನ ಮಹಾತ್ಮೆ ಮತ್ತು ಇಚ್ಛಾದಿಗಳ ಕುರಿತಾದ ಸತ್ಯವೂ ಪರಿಶುದ್ಧವೂ ಪರಿಪೂರ್ಣವೂ ಆದ ವಿಶ್ವಾಸವೇ ಮನೋಹರವೂ ತುಷ್ಟಿಪ್ರದವೂ ಫಲದಾಯಕವೂ ಆದ ತೋಟವೆಂದೂ ಸತ್ಕರ್ಮಗಳು ಆ ಸ್ವರ್ಗೀಯ ಆರಾಮಧಾಮದ ಸರಿತ್ತುಗಳೆಂದೂ ದೈವವಾಕ್ಯ ನಮಗೆ ತಿಳಿಸಿಕೊಡುತ್ತದೆ. ಈ ವಿಷಯವನ್ನು ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ ಹೀಗೆ ಪ್ರಸ್ತಾವಿಸುತ್ತದೆ:

"ಲರಬಲ್ಲಾಹು ಮಸಲನ್ ಕಲಿಮತನ್ ತಯ್ಯಿಬತನ್ ಕಷಜರತಿನ್ ತಯ್ಯಿಬತಿನ್ ಅಸ್ಲುಹಾ ಸಾಬಿತುನ್ ವ ಫರಉಹಾ ಫಿಸ್ಸಮಾಇ – ತುಅ್‌ತೀ ಉಕುಲಹಾ ಕುಲ್ಲ ಹೀನ್" (14:25, 26) – ಅಧಿಕತೆಯಾಗಲಿ ನ್ಯೂನತೆಯಾಗಲಿ ಬಾಧಿಸದ, ಊನವಾಗಲಿ ಕಳಂಕವಾಗಲಿ ಇಲ್ಲದ, ಹುಸಿ-ತಮಾಷೆಗಳಿಂದ ಹೊರತಾದ

ಪರಿಪೂರ್ಣ ವಿಶ್ವಾಸವೆಂಬ ಸದ್ವಚನ ಭೂಮಿಯಲ್ಲಿ ಭದ್ರವಾಗಿ ಬೇರೂರಿದ, ಶಾಖೆಗಳು ಆಕಾಶದೆಡೆಗೆ ಹರಡಿಕೊಂಡಿರುವ, ಸರ್ವಋತುಗಳಲ್ಲೂ ಫಲ ನೀಡುವ, ಯಾವ ಕಾಲದಲ್ಲೂ ಫಲರಾಹಿತ್ಯ ಬಾಧಿಸದ ಉತ್ತಮ ವೃಕ್ಷಕ್ಕೆ ಸದೃಶವಾಗಿದೆ.

ಇಲ್ಲಿ ದೇವನು ಸದ್ವಿಶ್ವಾಸವಚನವನ್ನು ನಿತ್ಯ ಫಲ ದಾಯಕ ವೃಕ್ಷಕ್ಕೆ ಹೋಲಿಸಿ ಅದರ ಮೂರು ಲಕ್ಷಣ ಗಳನ್ನು ಸೂಚಿಸಿದ್ದಾನೆ.

1. ವಿಶ್ವಾಸವಚನದ ತತ್ವವೆಂಬ ಬೇರು ಮನು ಷ್ಯ ಹೃದಯವೆಂಬ ಭೂಮಿಯಲ್ಲಿ ಭದ್ರವಾಗಿರಬೇಕು. ಎಂದರೆ, ಧರ್ಮದ ನಿಜ ತತ್ವವನ್ನು ಮನುಷ್ಯನ ಸ್ವಭಾವ ಮತ್ತು ಅವನ ಅಂತಃಕರಣ ಅಂಗೀಕರಿಸಬೇಕಾಗಿದೆ.

2. ಅದರ ಶಾಖೆಗಳು ಆಕಾಶದಲ್ಲಿ ವ್ಯಾಪಿಸಿರ ಬೇಕಾಗಿದೆ. ಎಂದರೆ, ಆ ವಿಶ್ವಾಸ ಸಂಹಿತೆಯು ಸತ್ಯತೆ ಯನ್ನು ವಿವೇಕ ನ್ಯಾಯಗಳು ಸಾಕ್ಷೀಕರಿಸಬೇಕು; ಹಾಗೆ ಯೇ ದಿವ್ಯವಾದ ಪ್ರಕೃತಿ ನಿಯಮಗಳು ಅನುಕೂಲಿಸ ಬೇಕಾಗಿವೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಅದರ ಸತ್ಯತೆಯನ್ನು ಸ್ಥಾಪಿಸಲಿಕ್ಕಾಗಿ ಮುಂದಿಡುವ ಸಾಕ್ಷ್ಯಾ ಧಾರಗಳು ಪ್ರಕೃತಿ ನಿಯಮಕ್ಕೆ ಬದ್ಧವೂ ಖಂಡಿಸಲ ಸಾಧ್ಯವಾದಷ್ಟು ಉನ್ನತ ಮಟ್ಟದ್ದೂ ಆಗಿರಬೇಕಾಗಿದೆ.

3. ಅದು ಆಸ್ವಾದ್ಯ ಸತ್ಫಲಗಳನ್ನು ಕಾಲಬೇಧ ವಿನಾ ನೀಡಬೇಕಾಗಿದೆ. ಎಂದರೆ, ಆ ವಿಶ್ವಾಸಾನು ಷ್ಠಾನ ಮೂಲಕ ಅದರ ಸ್ವಾಧೀನಶಕ್ತಿ ಮತ್ತು ಅನು ಗ್ರಹ ಫಲ ಎಲ್ಲಾ ಕಾಲಗಳಲ್ಲೂ ಅನುಭವಗೋಚರ ವಾಗಿರಬೇಕಾದದ್ದೂ ಆ ವರಪ್ರಸಾದಗಳು ಒಂದು ಕ್ಲಪ್ತಕಾಲದ ವರೆಗೆ ಪ್ರಕಟವಾದ ನಂತರ ಅವಸಾನ ಗೊಳ್ಳದಿರಬೇಕಾದದ್ದೂ ಅವಶ್ಯ.

ಇನ್ನೊಂದೆಡೆಯಲ್ಲಿ ಖುರ್‌ಆನ್ ಹೀಗೆ ಹೇಳು ತ್ತದೆ:

"ಮಸಲು ಕಲಿಮತಿನ್ ಖಬೀಸತಿನ್ ಕಷಜರತಿನ್ ಖಬೀಸತಿನಿಜ್‌ತುಸ್ಸತ್ ಮಿನ್ ಫೌಕಿಲ್ ಅರ್‌ಲಿ ಮಾ ಲಹಾ ಮಿನ್ ಕರಾರ್" (14:27) — ಮಿಥ್ಯಾವಚನ, ಭೂಮಿಯಿಂದ ಕೀಳಲ್ಪಟ್ಟದ್ದೂ (ಎಂದರೆ ಮನುಷ್ಯನ ಸ್ವಭಾವ ಮತ್ತು ಅಂತಃಕರಣ ನಿರಾಕರಿಸುವಂಥದ್ದು) ಯಾವ ರೀತಿಯಲ್ಲೂ ನೆಲೆಯೂರಿ ನಿಲ್ಲಲಸಾಧ್ಯವಾ ದದ್ದೂ (ಎಂದರೆ ಪ್ರಕೃತಿ ನಿಯಮಗಳೂ ನ್ಯಾಯಾ ಧಾರಗಳು ಅನುಕೂಲಿಸದ ಮಿಥ್ಯಾ ಕಥೆಗಳಂಥದ್ದು) ಆದ ವೃಕ್ಷಕ್ಕೆ ಸದೃಶವಾಗಿದೆ.

ಪವಿತ್ರ ಖುರ್‌ಆನ್, ವಿಶ್ವಾಸವಚನಗಳನ್ನು ಅಥ ವಾ ಧರ್ಮವಚನಗಳನ್ನು ದ್ರಾಕ್ಷೆ, ದಾಳಿಂಬೆ ಮೊದ ಲಾದ ಸ್ವಾದಿಷ್ಟ ಫಲಗಳನ್ನು ಕೊಡುವ ತರುಲತಾದಿಗ ಳಿಗೆ ಹೋಲಿಸಿ ಐಹಿಕ ಜೀವಿತದ ಆತ್ಮಾನುಭೂತಿ ಗಳು ಪರಲೋಕದಲ್ಲಿ ಪ್ರಸ್ತುತ ಫಲವರ್ಗಗಳ ರೂಪ ದಲ್ಲಿ ಗೋಚರಿಸುವುವೆಂದು ವಿವರಿಸುವ ಪ್ರಕಾರವೇ, ಅವಿಶ್ವಾಸವೆಂಬ ಹಾಳು ವೃಕ್ಷವನ್ನು 'ಜಕ್ಕೂಂ' ಎಂದು ಹೆಸರಿಸಿ ಅದರ ಕೆಟ್ಟ ಫಲಗಳನ್ನು ವ್ಯಕ್ತಗೊಳಿಸಿದೆ. ಆ ಪವಿತ್ರ ಗ್ರಂಥ ಹೀಗೆ ಹೇಳುತ್ತದೆ:

"ಆದಾಲಿಕ ಖೈರುನ್ ನ್ನುಜುಲನ್ ಅಮ್ ಷಜ ರತು ಜಕ್ಕೂಂ — ಇನ್ನಾ ಜಅಲ್ನಾಹಾ ಫಿತ್‌ನತನ್ ಲ್ಲಿಲ್ಲಾಮೀನ್–ಇನ್ನಹಾ ಷಜರತುನ್ ತಖ್‌ರುಜು ಫೀ ಅಸ್ಲಿಲ್ ಜಹೀಂ–ತಲ್‌ಉಹಾ ಕಅನ್ನಹೂ ರುಊಸುಶ್ಶ ಯಾತೀನ್" (37:63-66)—ಸ್ವರ್ಗದ ತೋಟಗಳು ಉತ್ತಮವೇ ಅಥವಾ ಜಕ್ಕೂಂ ವೃಕ್ಷವೇ? ನಾವು ಅದನ್ನು ದುಷ್ಟರಿಗೆ ಒಂದು ಪೀಡೆಯಾಗಿರಿಸಿದ್ದೇವೆ; ಅದು ನರಕದ ಬುಡದಿಂದ ಮೊಳಕೆಯೊಡೆಯುತ್ತದೆ (ಎಂದರೆ, ನರಕದ ಬುಡವೆಂಬ ಅಹಂಭಾವದಿಂದ ಅದು ಅಂಕುರಿಸು ತ್ತದೆ); ಅದರ ಕಾಯಿಗಳು ಶೈತಾನರ ತಲೆಗಳಂತಿವೆ.

'ಶೈತ್' ಎಂಬ ಪದದಿಂದ ಉದ್ಭವಿಸಿದ 'ಶೈತಾ ನ್' ಎಂಬುದರ ಅರ್ಥ 'ನಾಶಹೊಂದುವವನು' ಎಂದಾ ಗಿದೆ. ಇಲ್ಲಿ ಈ ಪದಪ್ರಯೋಗದಿಂದ ಪ್ರಸ್ತುತ ವೃಕ್ಷದ ಫಲ ಭಕ್ಷಣೆ ನಾಶಹೇತುವಾಗುವುದೆಂದು ಅರ್ಥವಿಸಬೇ ಕಾಗಿದೆ.

ಇನ್ನೂ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಇನ್ನ ಷಜರತ ಜಕ್ಕೂಂ–ತಆಮುಲ್ ಅಸೀಂ– ಕಲ್‌ಮುಹ್ಲಿ ಯಗ್ಲೀ ಫಿಲ್‌ಬುತೂನ್ — ಕಗಲ್ಇಲ್ ಹಮೀಂ" (44:44-47)—ಜಕ್ಕೂಂ ವೃಕ್ಷ ಪ್ರಜ್ಞಾ ಪೂರ್ವಕ ಪಾಪಕರವಾದ ಜೀವಿತವನ್ನು ನಡೆಸುತ್ತಿರುವ

ನರಕವಾಸಿಗಳ ಆಹಾರವಾಗಿದೆ; ಅದು ಕರಗಿದ ತಾಮ್ರ ದಂತಿದ್ದು ನೀರು ಕುದಿಯುವಂತೆ ಅವರ ಉದರದಲ್ಲಿ ಕುದಿಯುತ್ತಿರುತ್ತದೆ.

ನರಕವಾಸಿಯು ಕುರಿತು ಮತ್ತೂ ಖುರ್‌ಆನ್ ನುಡಿಯುತ್ತದೆ:

"ದುಕ್ ಇನ್ನಕ ಅನ್ತಲ್ ಅಜೀಜುಲ್ ಕರೀಂ" (44:50) – ಈ ವೃಕ್ಷದ ಫಲವನ್ನು ಆಸ್ವಾದಿಸು; ನೀನು ಗೌರವಸ್ಥನೂ ಮರ್ಯಾದಸ್ಥನೂ ಅಷ್ಟೇ !

ಈ ಕೊನೆಯ ವಾಕ್ಯ ಕ್ರೋಧ ಸೂಚಕವಾಗಿದೆ. ನರಕವಾಸಕ್ಕರ್ಹನಾದ ಆ ಪಾಪಿ ಅಹಂಭಾವ ತೋರಿಸ ದೆಯೂ ತನ್ನ ಸ್ಥಾನಮಾನವನ್ನು ಲೆಕ್ಕಿಸಿ ಸತ್ಯಕ್ಕೆದುರಾಗಿ ವಿಮುಖತೆಯನ್ನು ಪ್ರದರ್ಶಿಸದೆಯೂ ಇದ್ದಿದ್ದರೆ ಅವನಿಗೆ ಈ ಕೆಟ್ಟ ಫಲವನ್ನು ಅನುಭವಿಸಲಿಕ್ಕಾಗಲಿ ಕಷ್ಟ ಸಹಿಸಲಿ ಕ್ಕಾಗಲಿ ಸಂದರ್ಭ ಒದಗುತ್ತಿರಲಿಲ್ಲವೆಂದು ಪ್ರಸ್ತುತ ವಾಕ್ಯ ತಿಳಿಸಿಕೊಡುತ್ತದೆ. ಜಕ್ಕೂಮ್ ಎಂಬ ಪದ ದುಕ್ ಮತ್ತು ಅಮ್ ಎಂಬ ಪದಗಳ ಸಮಾಸವಾಗಿದೆ ಯೆಂದು ಒಂದು ಸೂಚನೆ ಸಹ ಈ ಕೊನೆಯ ವಾಕ್ಯ ದಲ್ಲಿದೆ. ಮೊದಲಿನ ಭಾಗವಾದ ದುಕ್ ಎಂಬುದರ ಅರ್ಥ "ನೀನು ಆಸ್ವಾದಿಸು" ಎಂದಾಗಿದೆ. ಎರಡನೆಯ ಭಾಗ ಅಮ್ ಎಂಬುದು "ಇನ್ನಕ ಅನ್ತಲ್ ಅಜೀಜುಲ್ ಕರೀಂ" ಎಂಬ ವಾಕ್ಯದ ಮೊದಲಿನ ಮತ್ತು ಕೊನೆಯ ಅಕ್ಷರಗಳ ಜೋಡಣೆಯ ಸಂಕ್ಷಿಪ್ತವಾಗಿದೆ. ರೂಢಿಯಿಂದ ದ ಅಕ್ಷರ ಜಕ್ಕೂಮ್ ಎಂಬ ಪದದಲ್ಲಿ ಜ ಆಗಿ ಮಾರ್ಪಟ್ಟಿದೆ.

ಸಂಕ್ಷಿಪ್ತವಾಗಿ, ಈ ಲೋಕದಲ್ಲಿ ಪ್ರದರ್ಶಿಸುವ ವಿಶ್ವಾಸವಚನಗಳನ್ನು ಸ್ವರ್ಗೀಯ ವೃಕ್ಷಗಳಿಗೂ ಈ ಲೋಕದ ಅವಿಶ್ವಾಸ ವಚನಗಳನ್ನು ನರಕದ ಜಕ್ಕೂಮ್ ವೃಕ್ಷಕ್ಕೂ ಹೋಲಿಸಿ ಸ್ವರ್ಗೀಯ ಮತ್ತು ನರಕೀಯ ಜೀವಿತದ ಅಡಿಗಟ್ಟು ಈ ಲೋಕದಿಂದಲೇ ಆರಂಭವಾ ಗುತ್ತದೆಯೆಂದು ಪರಮಾತ್ಮನು ತಿಳಿಸಿಕೊಟ್ಟಿದ್ದಾನೆ. ನರಕದ ಕುರಿತು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳ ಲಾಗಿದೆ:

"ನಾರುಲ್ಲಾಹಿಲ್ ಮೂಕದತುಲ್ಲತೀ ತತ್ತಲಿಉ ಅಲಲ್ ಅಫ್‌ಇದಃ" (104:7, 8) – ನರಕವು ದೈವ ಕ್ರೋಧದಿಂದ ಉದ್ಭವಿಸುವ ಒಂದು ಅಗ್ನಿಯಾಗಿದೆ. ಅದು ಪಾಪದಿಂದ ಪ್ರಜ್ವಲಿಸುತ್ತದೆ. ಅದರ ಜ್ವಾಲೆ ಗಳು ಮೊದಲಿಗೆ ಹೃದಯಗಳಲ್ಲಿ ವ್ಯಾಪಿಸುತ್ತವೆ.

ಈ ಪವಿತ್ರ ವಚನ ಸೂಚಿಸುವುದೇನೆಂದರೆ, ನರ ಕಾಗ್ನಿಯ ಮೂಲ ಹೃದಯವನ್ನು ದಂಡಿಸುವ ದುಃಖ, ನೋವು, ಕ್ಲೇಶಗಳಾಗಿವೆ. ಏಕೆಂದರೆ ಆತ್ಮಿಕ ಪೀಡೆ ಗಳೆಲ್ಲ ಮೊದಲಿಗೆ ಹೃದಯವನ್ನು ಬಾಧಿಸುತ್ತವೆ. ಅನಂ ತರ, ಅವು ಶರೀರದಲ್ಲಿಡೀ ವ್ಯಾಪಿಸುತ್ತವೆ.

ನರಕಾಗ್ನಿಯ ಕುರಿತು ಖುರ್‌ಆನ್ ಇನ್ನೊಂದೆಡೆ ಹೀಗೆ ಹೇಳುತ್ತದೆ:

"ವ ಕೂದುಹನ್ನಾಸು ವಲ್ ಹಿಜಾರಃ" (2:25) —ನರಕಾಗ್ನಿ ಜ್ವಲಿಸಿಕೊಂಡಿರಲಿಕ್ಕೆ ಇಂಧನ ಎರಡು ವಸ್ತುಗಳಾಗಿವೆ. ಒಂದು, ಸಾಕ್ಷಾತ್ ಆರಾಧನಕ್ಕೆ ಪಾತ್ರನಾದ ದೈವವನ್ನು ಬಿಟ್ಟು ಸೃಷ್ಟ ವಸ್ತುಗಳನ್ನು ಆರಾಧಿಸುವ ಅಥವಾ ತಮ್ಮನ್ನೇ ಆರಾಧಿಸಲಿಕ್ಕೆ ಅನು ಮತಿ ನೀಡಿದ ಮನುಷ್ಯರು.

ಇಂತಹವರ ಕುರಿತು ಖುರ್‌ಆನ್ ಮತ್ತೊಂದೆಡೆ ಯಲ್ಲಿ ಹೀಗೆ ಹೇಳುತ್ತದೆ:

"ಇನ್ನಕುಂ ವಮಾ ತಅ್‌ಬುದೂನ ಮಿನ್‌ದೂನಿ ಲ್ಲಾಹಿ ಹಸಬು ಜಹನ್ನಮ" (21:99) – ನೀವೂ, ಮನುಷ್ಯರಾಗಿದ್ದು ದೈವತ್ವ ವಾದಿಸಿದವರೂ ನರಕಕ್ಕೆ ದೂಡಲ್ಪಡುವಿರಿ.

ನರಕದ ಇಂದನದ ಎರಡನೆಯ ವಸ್ತು ವಿಗ್ರಹ ಗಳಾಗಿವೆ (2:25). ಇಂದನವಾಗಿರುವ ಈ ವಸ್ತುಗಳಿ ಲ್ಲದಿರುತ್ತಿದ್ದರೆ ನರಕವಿರುತ್ತಿರಲಿಲ್ಲವೆಂದು ತಾತ್ಪರ್ಯ. ಸ್ವರ್ಗ ಮತ್ತು ನರಕ ಈ ಭೌತಿಕ ಲೋಕದಂತೆ ಅಲ್ಲ ವೆಂದೂ ಅವೆರಡರ ಮೂಲ ಅಧ್ಯಾತ್ಮಿಕತೆಯನ್ನು ಅವ ಲಂಬಿಸಿಕೊಂಡಿದೆಯೆಂದೂ ಖುರ್‌ಆನ್ ಕಲಿಸುತ್ತದೆಂದು ಪ್ರಸ್ತುತ ವಾಕ್ಯಗಳಿಂದ ಸ್ಪಷ್ಟವಾಗುತ್ತದೆ. ಸ್ವರ್ಗೀಯ ಅನುಗ್ರಹಗಳು ಮತ್ತು ನರಕೀಯ ಪೀಡನೆಗಳು ಪರ ಲೋಕದಲ್ಲಿ ಪ್ರತ್ಯಕ್ಷಗೊಳ್ಳುವುವಾದರೂ ಅವು ಈ ಭೌತಿಕ ಲೋಕದವುಗಳಂತಿರಲಿಕ್ಕಿಲ್ಲ.

## ಪರಮಾತ್ಮನೊಡನೆ ಪರಿಪೂರ್ಣ ಆಧ್ಯಾತ್ಮಿಕ ಬಂಧನೇರ್ಪಡಿಸುವ ಮಾರ್ಗ

ಇನ್ನು ಮುಖ್ಯ ವಿಷಯದೆಡೆಗೆಯೇ ಹಿಂತಿರುಗೋಣ. ದೇವರೊಡನೆ ಪರಿಪೂರ್ಣವಾದ ಆತ್ಮೈಕ್ಯವನ್ನು ಪಡೆಯಲು ಪವಿತ್ರ ಖುರ್‌ಆನ್ ನಿರ್ದೇಶಿಸಿದ ಮಾರ್ಗ 'ಇಸ್ಲಾಂ' ಎಂಬ ಪದ ಸೂಚಿಸುವ ರೀತಿಯ ಪರಿಪೂರ್ಣ ವಿಧೇಯತೆ ಮತ್ತು 'ಫಾತಿಹಾ' ಪ್ರಾರ್ಥನೆಯಾಗಿದೆ. ಎಂದರೆ, ಜೀವಿತ ಸರ್ವವನ್ನೂ ದೈವಪಥದಲ್ಲಿ ಸಮರ್ಪಿಸಿ ಸಂಪೂರ್ಣ ದೈವೇಚ್ಛೆಗೆ ಶಿರಬಾಗಿಕೊಂಡು ಖುರ್‌ಆನಿನ ಪ್ರಥಮಾಧ್ಯಾಯವಾದ 'ಫಾತಿಹಾ' ಎಂಬ ಪ್ರಾರ್ಥನೆಯನ್ನು ಸದಾ ಮಾಡಿಕೊಂಡಿರುವುದು. ಅನೂನವಾದ ವಿಧೇಯತೆ ಮತ್ತು ಫಾತಿಹಾ ಪ್ರಾರ್ಥನೆ ಇವೆರಡು ಇಸ್ಲಾಮಿನ ತಿರುಳು. ದೇವನೆಡೆಗೆ ತಲಪಲಿಕ್ಕೂ ಸಾಕ್ಷಾತ್ ಮೋಕ್ಷ ಲಭಿಸಲಿಕ್ಕೂ ಅತ್ಯುತ್ಕೃಷ್ಟ ಮಾರ್ಗ ಇದಾಗಿದೆ. ಆಧ್ಯಾತ್ಮಿಕವಾದ ಪರಮೋನ್ನತ ಸ್ಥಾನ ಮತ್ತು ದೈವೈಕ್ಯವನ್ನು ಸಿದ್ಧಿಸಲಿಕ್ಕೆ ಪ್ರಕೃತಿ ನಿರ್ದಿಷ್ಟವಾದ ಏಕಮಾರ್ಗವೂ ಇದೇ ಆಗಿದೆ. ಒಟ್ಟಾರೆ, 'ಇಸ್ಲಾಂ' ಎಂಬ ಶಬ್ದ ಸೂಚಿಸುವ ಅಗ್ನಿಮಯವಾದ ಆಧ್ಯಾತ್ಮಿಕ ಮಾರ್ಗದಲ್ಲಿ ಪೂರ್ಣವಾಗಿ ಪ್ರವೇಶಿಸಿ ಫಾತಿಹಾ ಪ್ರಾರ್ಥನೆಯನ್ನು ಸತತ ಅನುಷ್ಠಿಸುವವರು ಇಸ್ಲಾಮನ್ನು ಸಾಕ್ಷಾತ್ಕರಿಸುತ್ತಾರೆ. ಹೀಗೆ ಇಸ್ಲಾಂ ಎಂದರೆ ವಿಷಯಾಸಕ್ತಿಯಿಂದ ಕೂಡಿದ ಕೀಳ್ಮಟ್ಟದ ಜೀವಿತವನ್ನು ದಹನಮಾಡುವ ಹಾಗೂ ಸಾಂಕಲ್ಪಿಕ ಮಿಥ್ಯಾ ದೈವಗಳನ್ನೆಲ್ಲಾ ಭಸ್ಮೀಕರಿಸಿ ನಮ್ಮ–ಜೀವ–ಸಂಪತ್ತು–ಅಭಿಮಾನಗಳೆಲ್ಲಾ ಬಲಿಯರ್ಪಿಸಲ್ಪಡುವಂತೆ ಮಾಡುವ ಒಂದು ಅಗ್ನಿಯೆಂದು ಹೇಳಬಹುದು. ಈ ಆಧ್ಯಾತ್ಮಿಕ ಬುಗ್ಗೆಯಿಂದ ನವ್ಯಜೀವಿತವೆಂಬ ತೀರ್ಥವನ್ನು ಕುಡಿಯುವುದರಿಂದ ನಮ್ಮ ಆಧ್ಯಾತ್ಮಿಕವಾದ ಸಕಲ ಶಕ್ತಿಗಳೂ ಒಂದು ಸಂಕಲೆಯ ಕೊಂಡಿಗಳಂತೆ ದೇವರೊಡನೆ ಬಂಧಿಸಲ್ಪಡುತ್ತವೆ. ಮಿಂಚಿನಂತಹ ಒಂದು ಅಗ್ನಿ ನಮ್ಮ ಅಂತರ್ಭಾಗದಿಂದ ಹೊರಡುತ್ತದೆ. ಮತ್ತೊಂದು ಅಗ್ನಿ ಮೇಲಿಂದ ಇಳಿದು ಬರುತ್ತದೆ. ಈ ಎರಡು ಜ್ವಾಲೆಗಳ ಸಮ್ಮಿಲನದಿಂದ ನಮ್ಮ ವಿಷಯಾಸಕ್ತಿಗಳೂ ದೈವೇತರ ವಸ್ತುಗಳ ಮೇಲಿರುವ ಪ್ರೀತಿಯೂ ಎಲ್ಲಾ ಭಸ್ಮೀಭೂತವಾಗುತ್ತವೆ. ಅದರ ಫಲವಾಗಿ ನಮ್ಮ ಮೊದಲಿನ ಜೀವಿತ ಸಂಪ್ರದಾಯಕ್ಕೆ ಕೊನೆಯುಂಟಾಗುತ್ತದೆ. ಈ ಸ್ಥಿತಿಗೆ ಖುರ್‌ಆನ್ ನೀಡುವ ಹೆಸರು ಇಸ್ಲಾಂ ಎಂದಾಗಿದೆ. ಇಸ್ಲಾಂ ಎಂಬ ಸಂಪೂರ್ಣ ವಿಧೇಯತೆಯ ಮುಖಾಂತರ ನಮ್ಮ ವಿಷಯೇಚ್ಛೆಗಳಿಗೆ ಒಂದು ಮರಣ ಸಂಭವಿಸುತ್ತದೆ. ಅನಂತರ ಪ್ರಾರ್ಥನೆ ಮೂಲಕ ನಮಗೆ ಒಂದು ನವೀನ ಜೀವ ಲಭಿಸುತ್ತದೆ. ಈ ಪುನರ್ಜೀವನ ಘಟ್ಟದಲ್ಲಿ ದೈವಬೋಧನೆಯೂ ದೈವಪ್ರಕಟನೆಯೂ ಇರಬೇಕಾದುದು ಅವಶ್ಯ. ಈ ಸ್ಥಿತಿಯನ್ನು ಪಡೆಯುವುದಕ್ಕೆ ದೈವದರ್ಶನವೆಂದು ಹೇಳಲಾಗುತ್ತದೆ. ಈ ಘಟ್ಟವನ್ನು ತಲಪುವ ಭಕ್ತನು ದೇವನ ಪಾವನ ಮುಖವನ್ನು ಕಾಣುತ್ತಾನೆ. ಇನ್ನೊಂದು ಪ್ರಕಾರದಲ್ಲಿ, ತನ್ನ ಸ್ವಂತ ಕಣ್ಣಿನಿಂದ ದೇವನನ್ನು ಕಾಣುವ ರೀತಿಯಲ್ಲಿರುವ ದೃಢವಾದ ಒಂದು ಬಂಧ ಆತನಿಗೆ ಪರಮಾತ್ಮನೊಡನೆ ಉಂಟಾಗುತ್ತದೆ. ಆಗ ಆತನಿಗೆ ದೈವಿಕವಾದ ಒಂದು ಶಕ್ತಿ ಸಿದ್ಧಿಸಿ ಆತನ ಎಲ್ಲಾ ಇಂದ್ರಿಯಗಳೂ ಅಂತಃಶಕ್ತಿಗಳೂ ಶೋಭಿಸುತ್ತವೆ. ನಿರ್ಮಲವೂ ಪಾವನವೂ ಆದ ಜೀವಿತದ ಆಕರ್ಷಣೆ ಶಕ್ತಿಯುತವಾಗಿ ಆತನಲ್ಲಿ ಪ್ರವರ್ತಿಸಲು ತೊಡಗುತ್ತದೆ. ಈ ಘಟ್ಟದಲ್ಲಿ ಪರಮಾತ್ಮನು, ಭಕ್ತನಾದ ಆ ಮನುಷ್ಯನು ನೋಡುವ ಕಣ್ಣು, ಮಾತನಾಡುವ ನಾಲಿಗೆ, ಶ್ರವಿಸುವ ಕಿವಿ, ಪ್ರವರ್ತಿಸುವ ಕೈ ಮತ್ತು ನಡೆಯುವ ಕಾಲು ಆಗುತ್ತಾನೆ. ಈ ಸ್ಥಿತಿಯನ್ನು ಸೂಚಿಸುತ್ತಾ ಖುರ್‌ಆನ್ ಹೀಗೆ ಹೇಳುತ್ತದೆ:

"ಯದುಲ್ಲಾಹಿ ಫೌಕ ಅಯ್ದೀಹಿಮ್" (48:11) — ಅವರ ಕೈಗಳ ಮೇಲಿರುವ ಪೈಗಂಬರರ ಕೈ ಅಲ್ಲಾಹುವಿನ ಕೈಯಾಗಿದೆ.

ಇನ್ನೂ ಹೇಳುತ್ತದೆ:

"ವಮಾ ರಮಯ್ತು ಇದ್ ರಮಯ್ತು ವ ಲಾಕಿನ್ನಲ್ಲಾಹ ರಮಾ" (8:18)—ನೀನು ಏನನ್ನು ಎಸೆದೆಯೋ, ಅದು ನೀನಲ್ಲ, ದೇವರು ಎಸೆದದ್ದು.

ಸಂಕ್ಷಿಪ್ತವಾಗಿ, ಈ ಘಟ್ಟದಲ್ಲಿ ಭಕ್ತನು ಪೂರ್ಣ ರೀತಿಯಲ್ಲಿ ದೈವೈಕ್ಯವನ್ನು ಪಡೆದಿರುತ್ತಾನೆ. ದೇವರ ಅಭೀಷ್ಟ ಆತನ ಆತ್ಮವನ್ನು ಸ್ವಾಧೀನಿಸಿ ಇಚ್ಛೆಗಳನ್ನು ನಿಯಂತ್ರಿಸುತ್ತದೆ. ಮೊದಲು ದುರ್ಬಲವಾಗಿದ್ದ ನೈತಿಕ ಶಕ್ತಿಗಳು ಈ ಹಂತದಲ್ಲಿ ಸುದೃಢ ಬಂಡೆಗಳಂತೆ ಸುಸ್ಥಿರ

ವಾಗಿರುತ್ತವೆ. ಈ ಪರಿವರ್ತನೆಯಿಂದ ಬುದ್ಧಿ ಮತ್ತು ನಿರ್ಧಾರ ಶಕ್ತಿ ತೀಕ್ಷ್ಣವಾಗುತ್ತವೆ. ಇಂತಹ ಸ್ಥಿತಿಯ ಕುರಿತು “ವ ಅಯ್ಯದಹುಂ ಬಿರೂಹಿ(ನ್)ಮ್ಮಿನ್‌ಹು” (58:23)—ದೇವನು ಪರಿಶುದ್ಧ ಚೈತನ್ಯದಿಂದ ಅವರಿಗೆ ನೆರವಾಗಿದ್ದಾನೆ-ಎಂಬ ದೈವವಚನ ಸೂಚಿಸುತ್ತದೆ. ಈ ಹಂತವನ್ನು ತಲಪುವಾಗ ಭಕ್ತನು ದೈವಮಾರ್ಗದಲ್ಲಿ ಆತ್ಮ ಪರಿತ್ಯಾಗವಮಾಡಲಿಕ್ಕೂ ಎಂತಹ ಕ್ಲೇಶಗಳನ್ನು ಮತ್ತು ಅಪಮಾನಗಳನ್ನು ಸಹಿಸಲಿಕ್ಕೂ ಸುಲಭವಾಗಿ ತೋರುವ ರೀತಿಯಲ್ಲಿ ಆತನ ಹೃದಯದಲ್ಲಿ ದೈವಾನುರಾಗ ಅಲೆಯೇಳುತ್ತದೆ. ಆತನು ಸ್ವಯಂ ಆಕರ್ಷಿತನಾಗಿ ದೈವ ಸನ್ನಿಧಿಗೆ ಓಡುತ್ತಿರುವನಾದರೂ ತನ್ನನ್ನು ಹೀಗೆ ಆಕರ್ಷಿಸುತ್ತಿರುವುದು ಯಾರೆಂದು ಅರಿಯುವುದಿಲ್ಲ. ಅದೃಶ್ಯವಾದ ಒಂದು ಕೈ ಆತನಿಗೆ ದುರ್ಘಟಾವಸ್ಥೆಗಳಲ್ಲೆಲ್ಲಾ ನೆರವಾಗುತ್ತದೆ. ದೈವಾಭೀಷ್ಟವನ್ನು ನೆರವೇರಿಸುವುದು ಆತನ ಜೀವಿತಾದರ್ಶವಾಗುತ್ತದೆ. ಈ ಘಟ್ಟದಲ್ಲಿ ಆತನಿಗೆ ಪರಮಾತ್ಮನು ಬಹಳ ಸಮೀಪದಲ್ಲಿ ಕಾಣುತ್ತಾನೆ. ಈ ವಿಷಯದಲ್ಲಿ ಭಕ್ತವತ್ಸಲನಾದ ದೇವನು ಹೀಗೆ ಹೇಳುತ್ತಾನೆ:

“ನಹ್ನು ಅಕ್ರಬು ಇಲೈಹಿ ಮಿನ್ ಹಬ್ಲಿಲ್ ವರೀದ್” (50:17)-ನಾವು ಅವನ ಜೀವನಾಡಿಗಿಂತಲೂ ಹೆಚ್ಚು ಸಮೀಪದಲ್ಲಿದ್ದೇವೆ.

ಈ ಘಟ್ಟದಲ್ಲಿ, ಉತ್ಕೃಷ್ಟ ಹಂತವನ್ನು ಪಡೆದ ಭಕ್ತನ ಲೌಕಿಕ ಬಂಧಗಳೆಲ್ಲಾ ಮರದ ಮೇಲೆ ಬಲಿತು ತನ್ನಷ್ಟಕ್ಕೆ ಕೆಳಗೆ ಬೀಳುವ ಫಲಗಳಂತೆ ಬೇರ್ಪಡುತ್ತವೆ. ಆತನಿಗೆ ದೇವನೊಡನೆ ಅತ್ಯಂತ ಅಗಾಧವಾದ ಒಂದು ಬಂಧವೇರ್ಪಟ್ಟು ಸೃಷ್ಟಿಗಳಿಂದ ದೂರವಾಗುತ್ತಾನೆ. ದೇವನ ಸಂಭಾಷಣಾ ಸಂಬೋಧನಾದಿಗಳಿಂದ ಆತನು ಅನುಗ್ರಹೀತನಾಗುತ್ತಾನೆ. ಈ ಉತ್ಕೃಷ್ಟ ಪದವಿಯನ್ನು ಗಳಿಸುವರೆ ಕವಾಟಗಳು ಪೂರ್ವಕಾಲದಂತೆ ಈಗಲೂ ತೆರೆದಿರಿಸಲ್ಪಟ್ಟಿವೆ. ಕರುಣಾನಿಧಿಯಾದ ದೇವನು ತನ್ನನ್ನು ಮನಸ್ಸಿಟ್ಟು ಅನ್ವೇಷಿಸುವವರಿಗೆ ಈ ಅನುಗ್ರಹವನ್ನು ಪೂರ್ವಕಾಲದಲ್ಲಿ ನೀಡಿದ ಪ್ರಕಾರವೇ ಈಗಲೂ ಪ್ರದಾನ ಮಾಡುತ್ತಾನೆ. ಆದರೆ ಈ ಮಾರ್ಗ ಬಾಯಿಯ ವ್ಯರ್ಥ ವಚನಗಳಿಂದ ಸಿದ್ಧಿಸುವಂತಹದ್ದಲ್ಲ; ಜಂಭ ಕೊಚ್ಚುವುದರಿಂದಾಗಲಿ ಮಿಥ್ಯಾಸಂವಾದದಿಂದಾಗಲಿ ಈ ಬಾಗಿಲು ತೆರೆಯಲ್ಪಡಲಾರದು. ಅದನ್ನು ಪಡೆಯಲು ಆಶಿಸುವವವರು ಅಸಂಖ್ಯಾತರಾದರೂ ಕೆಲವರು ಮಾತ್ರ ಕಾರ್ಯ ಸಿದ್ಧಿಸುತ್ತಾರೆ. ಏಕೆಂದರೆ ಈ ಸ್ಥಾನ ನಿಷ್ಠೆಯಿಂದ ಕೂಡಿದ ಪರಿಶ್ರಮ ಮತ್ತು ನಿಜವಾದ ಆತ್ಮಾರ್ಪಣೆ ವಿನಾ ಲಭ್ಯವಲ್ಲ. ಅಂತ್ಯಕಾಲದ ತನಕ ಮಾತನಾಡುತ್ತಾ ಇದ್ದರೂ ಏನು ಪ್ರಯೋಜನ? ಯಾವ ಅಗ್ನಿಗೆ ಹೆದರಿ ಜನರು ಓಡಿಹೋಗುತ್ತಾರೋ, ಆ ಅಗ್ನಿಯಲ್ಲಿ ಅಂತಃಶುದ್ಧಿಯಿಂದಲೂ ಅಚಂಚಲತೆಯಿಂದಲೂ ಕಾಲೂರಿ ನಡೆಯಬೇಕಾದುದು ಈ ಮಾರ್ಗವನ್ನು ಗಳಿಸುವರೆ ಮೊದಲ ಶರ್ತವಾಗಿದೆ. ಯಥಾರ್ಥ ಪರಿಶ್ರಮವಿಲ್ಲದ ಕೇವಲ ಬಾಯಿ ಮಾತುಗಳು ವ್ಯರ್ಥ. ಈ ವಿಷಯದಲ್ಲಿ ಅಲ್ಲಾಹು ಖುರ್ ಆನ್‌ನಲ್ಲಿ ಹೀಗೆ ಹೇಳುತ್ತಾನೆ :

“ವ ಇದಾ ಸಅಲಕ ಇಬಾದೀ ಅನ್ನೀ ಫಇನ್ನೀ ಕರೀಬ್-ಉಜೀಬು ದಅ್‌ವತದ್ದಾಇ ಇದಾ ದಆನಿ-ಫಲ್‌ಯಸ್ತಜೀಬೂ ಲೀ ವಲ್‌ಯುಅ್‌ಮಿನೂ ಬೀ ಲಅಲ್ಲಹುಂ ಯರ್‌ಶುದೂನ್” (2:187)- ನನ್ನ ಕುರಿತು ನನ್ನ ಭಕ್ತರು ನಿನ್ನೊಡನೆ ಕೇಳಿದರೆ, ನಾನು ಬಹಳ ಸಮೀಪದಲ್ಲಿದ್ದೇನೆಂದು ಅವರೊಡನೆ ಹೇಳು; ಪ್ರಾರ್ಥಿಸುವವನ ಪ್ರಾರ್ಥನೆಯನ್ನು ನಾನು ಕೇಳುತ್ತೇನೆ; ಒಟ್ಟಿನಲ್ಲಿ, ಅವರು ವಿಜಯಗಳಿಗಾಗಲಿಕ್ಕಾಗಿ ಪ್ರಾರ್ಥನೆಗಳ ಮೂಲಕ ನನ್ನ ಸಾಮೀಪ್ಯವನ್ನೂ ಸಾಯುಜ್ಯವನ್ನೂ ಅರಸಲಿ; ನನ್ನಲ್ಲಿ ದೃಢ ವಿಶ್ವಾಸವಿರಿಸಲಿ. ●

(ಮುಂದುವರಿಯುವುದು)

**Read Ahmadiyya Periodicals in different languages to study different religions.**

# BADR

URDU WEEKLY

Single Copy: 0-30 Paise — Annual Subscription: Rs. 15/-

Apply To : The Manager,
"Badr" Urdu Weekly, P. O. QADIAN-143516. (Punjab)

# MINARET

ENGLISH QUARTERLY JOURNAL

Single Copy: Rs. 1-25 — Annual Subscription: Rs. 5/-

Apply to: Mr. M. P. Koyatty
Minaret Accounting Section
14/346, Francis Road,
CALICUT-670003 (Kerala)

# SATHYADOOTHAN

MALAYALAM MONTHLY

Single Copy : 0-50 Paise — Annual Subscription: Rs. 6/-

Apply to: The Manager,
Sathyadoothan Monthly
CANNANORE-670001.

# SAMADHANA VAZHI

TAMIL MONTHLY

Single Copy : 0-35 Paise — Annual Subscription: Rs. 4/-

Apply to : The Manager
Samadhana Vazhi Monthly
3, United India Colony
Kodambakkam, MADRAS-600024

( 23ನೇ ಪುಟದಿಂದ )

## ಪ್ರೊ| ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾದೀನ್ ಲಂಡನಿಗೆ

ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಖಗೋಳ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾಕ್ಟರ್ ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾದೀನ್, MSc., Phd. ಅವರು ಓಕ್ಸ್‌ಫರ್ಡ್ ಯುನಿವರ್ಸಿಟಿಯ ಆಮಂತ್ರಣದ ಮೇರೆಗೆ ಮೂರು ತಿಂಗಳ ಕಾಲ ಲಂಡನಿನಲ್ಲಿ ಉಳಕೊಳ್ಳುವರು. ಅವರು ಜೂನ್ 22ರಂದು ಸಿಕಂದರಾಬಾದಿನಿಂದ ವಿಮಾನ ದಾರಿಯಾಗಿ ಲಂಡನಿಗೆ ಪ್ರಯಾಣಿಸಿದರು.

## ಸಯ್ಯದ್ ಫಝುಲ್ ಅಹ್ಮದ್ ಸಾಹೇಬರಿಗೆ ಭಡ್ತಿ

ಬಿಹಾರಿನ ಎಡಿಷನಲ್ ಇನ್ಸ್‌ಫೆಕ್ಟರ್ ಜನರಲ್ ಪೋಲಿಸ್ ಆಗಿದ್ದ ಸಯ್ಯದ್ ಫಝುಲ್ ಅಹ್ಮದ್ ಸಾಹೇಬರು ಇದೀಗ ಇನ್ಸ್‌ಫೆಕ್ಟರ್ ಜನರಲ್ ಪೋಲಿಸ್ ಆಗಿ ಭಡ್ತಿ ಹೊಂದಿರುವರು.

ಫಝುಲ್ ಅಹ್ಮದ್ ಸಾಹೇಬರು ಅಹ್ಮದಿಯಾ ಸಂಘಟನೆಯ ಸ್ಥಾಪಕರ ಓರ್ವ ಮಾನ್ಯ ಶಿಷ್ಯರಾಗಿದ್ದ ಸಯ್ಯದ್ ವಿಝಾರತ್ ಹುಸೈನ್‌ರವರ ಸುಪುತ್ರರು. ಫಝುಲ್ ಅಹ್ಮದ್ ಸಾಹೇಬರು ಖಾದಿಯಾನಿನಲ್ಲಿ ವಿದ್ಯಾಭ್ಯಾಸವನ್ನು ಪಡೆದರು. ಕೆಲವು ಕಾಲ ಖಾದಿಯಾನಿನ ತಅಲೀಮುಲ್ ಕಾಲೇಜಿನಲ್ಲಿ ಲೆಕ್ಚರರ್ ಆಗಿಯೂ ಸೇವೆ ಸಲ್ಲಿಸಿದ್ದರು.


## AHMADIYYA ENGLISH LITERATURE


| | | |
|---|---|---|
| 1. | THE TEACHINGS OF ISLAM<br>By Hazrat Mirza Ghulam Ahmad | 6—00 |
| 2. | JESUS IN INDIA<br>By Hazrat Mirza Ghulam Ahmad | 2—25 |
| 3. | CHARACTERISTICS OF THE QURANIC TEACHINGS<br>By Hazrat Mirza Bashiruddin Mahmud Ahmad | 1—00 |
| 4. | THE HOLY PROPHET MTHAMMAD<br>By Hazrat Mirza Bashiruddin Mahmud Ahmad | 1—50 |
| 5. | WHERE DID JESUS DIE?<br>By J. D. Shams, Ex-Imam, London Mosque | 2—25 |
| 6. | THE TOMB OF JESUS<br>By Sufi M. R. Bengali | 0—75 |
| 7. | THE CHRISTIAN DOCTRINE OF ATONEMENT<br>By Dr. Mufti Muhammad Sadiq, D.D., LL.D., S.S.P. (London.) | 1—50 |

**Write to:**

**NAZIR DAWAT - O - TABLIGH, QADIAN - 143516 (Punjab)**

Regd. with the Registrar of Newspapers for India. Regd. No. R. N. 27354/75
**YUGARASHMI Kannada Quaterly, June - July 1980/Ihsan-Wafa 1359**


# English Translation of the HOLY QURAN with Arabic Text & Extensive Index




**Price: Rs. 15-00**

**Postal Charge Extra**

Write to:

**NAZIR DAWAT - O - TABLIGH**
QADIAN (PUNJAB) – 143516.


Edited and Published by Muhammad Yusuf on behalf of Jamath Ahmadiyya Mangalore at 10-23/1008, Ansari Road, Bunder, Mangalore–575 001.
Printed at Karavali Printers, Azizuddin Road, Bunder, Mangalore–575001.